| Less: Provision for depreciation and NPI | | | | | | | - | - | - | - | - | - | - | - |
| Net | 302.26 | - | 9.34 | - | - | - | **311.60** | 304.23 | - | - | - | - | - | **304.23** |
| **Held for Trading** | | | | | | | | | | | | | | |
| Gross | - | - | - | - | - | - | - | - | - | - | - | - | - | - |
| Less: Provision for depreciation and NPI | - | - | - | - | - | - | - | - | - | - | - | - | - | - |
| Net | - | - | - | - | - | - | - | - | - | - | - | - | - | - |
| **Total Investments** | **376.33** | - | **46.68** | - | - | **71.75** | **494.76** | **403.47** | - | **0.0025** | - | - | **116.88** | **520.35** |
| Less: Provision for non-performing investments | - | - | - | - | - | - | - | - | - | - | - | - | - | - |
| Less: Provision for depreciation | 14.68 | - | 29.17 | - | - | - | **43.85** | 5.48 | - | - | - | - | - | **5.48** |
| **Net** | **361.65** | - | **17.51** | - | - | **71.75** | **450.91** | **397.99** | - | **0.0025** | - | - | **116.88** | **514.87** |

Investment outside India: NIL

Book value, face & Market value of Investments

| Particulars | 31.03.2023 | 31.03.2022 |
|---|---|---|
| Book Value | 376.33 | 403.47 |
| Face Value | 373.12 | 400.00 |
| Market value | 360.68 | 400.38 |

b) Movement of Provisions for Depreciation and Investment Fluctuation Reserve

| Particulars | Current Year 2023 | Previous Year 2022 |
|---|---|---|
| i) Movement of provisions held towards depreciation on investments | | |
| a) Opening balance | 5.48 | 2.61 |
| b) Add: Provisions made during the year | 9.20 | 2.87 |
| c) Less: Write off / write back of excess provisions during the year | ---- | ---- |
| d) Closing balance | 14.68 | 5.48 |
| ii) Movement of Investment Fluctuation Reserve | | |
| a) Opening balance | 3.09 | 3.09 |
| b) Add: Amount transferred during the year | ---- | ---- |
| c) Less: Drawdown | 3.09 | ---- |
| d) Closing balance | ---- | 3.09 |
| iii) Closing balance in IFR as a percentage of closing balance of investments[13] in AFS and HFT/Current category | ---- | 1.02 |

3. c) Sale and transfers to/from HTM category
The one-time transfer of securities to/from HTM category with the approval of Board of Directors undertaken by banks at the beginning of the accounting year:

| Sl No | Date of purchase | category | Particulars of Securities | Purchase rate | Face Value | Actual Premium paid | Premium Paid amortised | Book value | Market price 31.03.2022 | Market value as on 31.03.2022 | Depreciation / Appreciation |
|---|---|---|---|---|---|---|---|---|---|---|---|
| 1 | 31.10.2017 | HTM | 7.55% KASDL 2027 | 100.20 | 50000000.00 | 100000.00 | 50000 | 50050000.00 | 104.23 | 52115000.00 | 2065000.00 |
| 2 | 10.11.2017 | HTM | 7.64% KASDL 2027 | 100.25 | 50000000.00 | 125000.00 | 62500 | 50062500.00 | 105.35 | 52675000.00 | 2612500.00 |
| 3 | 27.11.2017 | HTM | 7.51% KASDL 2027 | 99.71 | 50000000.00 | | | 49855000.00 | 104.14 | 52070000.00 | 2215000.00 |
| 4 | 27.11.2017 | HTM | 7.70% KASDL 2027 | 100.93 | 50000000.00 | 465000.00 | 232500 | 50232500.00 | 104.87 | 52435000.00 | 2202500.00 |
| 5 | 24.01.2018 | HTM | 7.82% KASDL 2027 | 100.40 | 50000000.00 | 200000.00 | 100000 | 50100000.00 | 106.30 | 53150000.00 | 3050000.00 |
| | | | | | 250000000.00 | | | 250300000.00 | | | |

d) Non-SLR investment portfolio
i)Non-performing non-SLR investments : NIL

| Sr. No. | Particulars | Current Year 2023 | Previous Year 2022 |
|---|---|---|---|
| a) | Opening balance | 0.0025 | 0.0025 |
| b) | Additions during the year since 1st April | | |
| c) | Reductions during the above period | | |
| d) | Closing balance | 0.0025 | 0.0025 |
| e) | Total provisions held | NIL | NIL |

ii) Issuer composition of non-SLR investments

| Sr. No. | Issuer | Amount | | Extent of Private Placement | | — | | Extent of 'Unrated' Securities | | Extent of 'Unlisted' Securities | |
|---|---|---|---|---|---|---|---|---|---|---|---|
| (1) | (2) | (3) | | (4) | | (5) | | (6) | | (7) | |
| | | Current year | Previous Year | Current year | Previous Year | Current year | Previous Year | Current year | Previous Year | Current year | Previous Year |
| a) | PSUs | - | - | - | - | - | - | - | - | - | - |
| b) | FIs | - | - | - | - | - | - | - | - | - | - |
| c) | Banks | 46.67 | - | - | - | - | - | - | - | 46.67 | - |
| d) | Private Corporates | - | - | - | - | - | - | - | - | - | - |
| e) | Subsidiaries/ Joint Ventures | - | - | - | - | - | - | - | - | - | - |
| f) | Others | - | - | - | - | - | - | - | - | - | - |
| g) | Provision held towards depreciation | 29.17 | - | - | - | - | - | - | - | 29.17 | - |
| | Total | 46.67 | - | - | - | - | - | - | - | 46.67 | - |

## 3. Asset Quality a) Classification of advances and provisions held

| | Standard Total Standard Advances | Non-Performing Sub-standard | Doubtful | Loss | Total Non-Performing Advances | Total |
|---|---|---|---|---|---|---|
| **Gross Standard Advances and NPAs** | - | - | - | - | - | - |
| Opening Balance | 465.14 | 22.65 | 41.51 | - | 64.16 | 529.30 |
| Add: Additions during the year | [redacted] | | | | 35.28 | 35.28 |
| Less: Reductions during the year* | | | | | 36.65 | 69.34 |
| Closing balance | 432.45 | 22.65 | 41.51 | - | 62.79 | 495.24 |
| *Reductions in Gross NPAs due to: | [redacted] | | | | - | - |
| Upgradation | | | | | 35.39 | 35.39 |
| Recoveries (excluding recoveries from upgraded accounts) | | | | | 1.26 | 1.26 |
| Write-offs | | | | | - | - |
| | - | - | - | - | - | - |
| **Provisions (excluding Floating Provisions)** | - | - | - | - | - | - |
| Opening balance of provisions held | 2.54 | 2.03 | 29.27 | - | 31.30 | 33.84 |
| Add: Fresh provisions made during the year | [redacted] | | | | 1.50 | 1.50 |
| Less: Excess provision reversed/ Write-off loans* | | | | | | - |
| Closing balance of provisions held | 2.54 | 4.03 | 28.77 | - | 32.80 | 35.34 |
| | | | | | | |
| **Net NPAs** | | | | | | |
| Opening Balance | [redacted] | 20.62 | 12.24 | - | 32.86 | [redacted] |
| Add: Fresh additions during the year | [redacted] | | | | | |
| Less: Reductions during the year | | | | | | |
| Closing Balance | [redacted] | 31.36 | -1.36 | - | 30.00 | |

| Ratios in percent | Current year | Previous year |
|---|---|---|
| Gross NPA to Gross Advances | 12.68 | 12.12 |
| Net NPA to Net Advances | 6.52 | 6.63 |
| Provision coverage ratio | 56.27 | 52.74 |

b) Unsecured Advances

| Particulars | Current Year-2023 | Previous Year-2022 |
|---|---|---|
| Total unsecured advances of the bank | 25.48 | 32.07 |

*b)* Sector-wise Advances and Gross NPAs

| Sr.No. | Sector* | Current Year-2023 Outstanding Total Advances | Gross NPAs | Percentage of Gross NPAs to Total Advances in that sector | Previous Year-2022 Outstanding Total Advances | Gross NPAs | Percentage of Gross NPAs to Total Advances in that sector |
|---|---|---|---|---|---|---|---|
| i) | **Priority Sector** | | | | | | |
| a) | Agriculture and allied activities | 10.26 | 1.30 | 0.26 | 12.06 | 1.46 | 0.27 |
| b) | Advances to industries sector eligible as priority sector lending | 72.40 | 9.18 | 1.85 | 98.21 | 11.9 | 2.25 |
| c) | Services | 88.46 | 11.21 | 2.26 | 86.7 | 10.5 | 1.98 |
| d) | Personal loans | 23.43 | 2.97 | 0.60 | 32.01 | 3.88 | 0.73 |
| | **Subtotal (i)** | **194.55** | **24.66** | **4.98** | **228.98** | **27.75** | **5.23** |
| ii) | **Non-priority Sector** | | | | | | |
| a) | Agriculture and allied activities | | | | | | |
| b) | Industry | | | | | | |
| c) | Services | | | | | | |
| d) | Personal loans* | 300.70 | 38.13 | 7.70 | 300.32 | 36.41 | 6.89 |
| | **Sub-total (ii)** | **300.70** | **38.13** | **7.70** | **300.32** | **36.41** | **6.89** |
| | **Total (I + ii)** | **495.25** | **62.79** | **12.68** | **529.30** | **64.16** | **12.12** |

i)Details of accounts subjected to restructuring : NIL.
c) Divergence in asset classification and provisioning-NA
d)Fraud accounts: NIL for current year-2023 and previous year-2022

e)Disclosure under Resolution Framework for COVID-19-related Stress

| Type of borrower | Exposure to accounts classified as Standard consequent to implementation of resolution plan– Position as at the end of the previous year (A) | Of (A), aggregate debt that slipped into NPA during the year | Of (A) amount paid by the borrowers during the year | Exposure to accounts classified as Standard consequent to implementation of resolution plan – Position as at the end of this year |
|---|---|---|---|---|
| Personal Loans | 31.66 | 1.57 | 3.92 | 27.74 |
| Corporate persons* | | | | |
| Of which MSMEs | | | | |
| Others | | | | |
| Total | 31.66 | 1.57 | 3.92 | 27.74 |

* As defined in section 3(7) of the Insolvency and Bankruptcy Code, 2016

9. b) Bancassurance Business : NIL
c) Disclosures regarding Priority Sector Lending Certificates (PSLCs) :

| PARTICULARS | CURRENT YEAR | PREVIOUS YEAR |
|---|---|---|
| The amount of PSLCs (category-wise) purchased during the year | 700 | 200 |

## 4. Exposures a) Exposure to real estate sector

| Category | Current year | Previous Year |
|---|---|---|
| a) Residential Mortgages – Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non -fund based (NFB) limits. | | |
| i) Priority housing Loans | 18.29 | 23.45 |
| ii) Other Housing Loans | 31.68 | 98.26 |
| b) Commercial Real Estate – Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development, and construction, etc.). Exposure would also include non-fund based (NFB) limits; | 37.79 | 24.62 |
| Total Exposure to Real Estate Sector | 87.76 | 146.33 |

5. Concentration of deposits, advances and NPAs a)Concentration of deposits

| Particulars | Current Year | Previous Year |
|---|---|---|
| Total deposits of the twenty largest depositors | 37.81 | 38.55 |
| Percentage of deposits of twenty largest depositors to total deposits of the bank | 4.17 | 3.92 |

b)Concentration of advances* Amount in crore

| Particulars | Current Year | Previous Year |
|---|---|---|
| Total advances to the twenty largest borrowers | 73.49 | 80.73 |
| Percentage of advances to twenty largest borrowers to total advances of the bank | 14.84 | 15.25 |

c)Concentration of NPAs

| Particulars | Current Year | Previous Year |
|---|---|---|
| Total Exposure to the top twenty NPA accounts | 38.05 | 27.91 |
| Percentage of exposures to the twenty largest NPA exposure to total Gross NPAs. | 60.59 | 43.51 |

6.Transfers to Depositor Education and Awareness Fund (DEA Fund)

| Sr. No. | Particulars | Current Year | Previous Year |
|---|---|---|---|
| i) | Opening balance of amounts transferred to DEA Fund | 0.6705 | 0.6385 |
| ii) | Add: Amounts transferred to DEA Fund during the year | 0.0372 | 0.0327 |
| iii) | Less: Amounts reimbursed by DEA Fund towards claims | - | 0.0007 |
| iv) | Closing balance of amounts transferred to DEA Fund | 0.7077 | 0.6705 |

7.Disclosure of complaints
a)Summary information on complaints received by the bank from customers and from the Offices of Banking Ombudsman (OBOs)- No complaints received during present year and Last year we had received 3 complaints and same had been disposed off during the same year.
b)Top five grounds of complaints received by the bank from customers.-NIL
8.Disclosure of penalties imposed by the Reserve Bank of India: NIL

9.Other Disclosures a) Business ratios

| Particular | Current Year | Previous Year |
|---|---|---|
| i) Interest Income as a percentage to Working Funds | 9.49% | 9.06% |
| ii) Non-interest income as a percentage to Working Funds | 0.23% | 0.20% |
| iii) Cost of Deposits | 5.72% | 6.37% |
| iv) Net Interest Margin | 4.04% | 2.88% |
| v) Operating Profit as a percentage to Working Funds | 1.79% | 1.84% |
| vi) Return on Assets | 0.80% | -0.47% |
| vii) Business (deposits plus advances) per employee (in ₹ crore) | 28.05 | 28.01 |
| viii) Profit per employee (in ₹ crore) | 0.11 | -0.10 |

9. e)Provisions and contingencies

| Sr. No. | Particulars | Current Year | Previous Year |
|---|---|---|---|
| i) | Payment of DICGC Insurance Premium | 1.17 | 1.22 |
| ii) | Arrears in payment of DICGC premium | - | - |

f) Disclosure of facilities granted to directors and their relatives: NIL

9. d)Provisions and contingencies

| Provision debited to Profit and Loss Account | Current Year | Previous Year |
|---|---|---|
| i) Provisions for NPI | - | 12.60 |
| ii) Provision towards NPA | 1.50 | 2.00 |
| iii) Provision made towards Income tax | 4.58 | 4.92 |
| iv) Other Provisions and Contingencies (with details) | | |
| Special provision U/S36(1) viii | 0.30 | 0.45 |
| Provision on Investment depreciation | 9.21 | 2.87 |
| RF -2 Provision | | 3.30 |
| Provision for Unity SFB( Erstwhile PMC) | 8.17 | - |
| Provision for Bangalore Mercantile and Cauvery Bank | 0.36 | - |

ಸ್ಥಳ: ಬೆಂಗಳೂರು.
ದಿನಾಂಕ: 27.06.2023

ಶ್ರೀಮತಿ ವಿನೋದ ಶಿವರಾಮಯ್ಯ
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ಶ್ರೀ ಸಿ.ಎಲ್.ಮರಿಗೌಡ
ನಿರ್ದೇಶಕರು

ಶ್ರೀ ವಿಜಯಸಾರಥಿ ಎಂ.ಎಸ್
ಉಪಾಧ್ಯಕ್ಷರು

ಶ್ರೀ ವಿಜಯಕುಮಾರ್ ಸಿ.ಜಿ
ಅಧ್ಯಕ್ಷರು

ಸ್ಥಾಪನೆ : 1966 ಯಶಸ್ವಿ 56 ವರ್ಷಗಳ ಸಾರ್ಥಕ ಸಹಕಾರ ಬ್ಯಾಂಕಿಂಗ್ ಸೇವೆಯಲ್ಲಿ ನೋಂದಣಿ ಸಂಖ್ಯೆ : ಡಿ.ವೈ.ಆರ್.443

# ದಿ ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ–741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

ಪ್ರಧಾನ ಕಛೇರಿ : 080–23151204, 23152073, ಬಸವೇಶ್ವರನಗರ ಶಾಖೆ : 080–23231238, 23232587, ಅನ್ನಪೂರ್ಣೇಶ್ವರಿನಗರ ಶಾಖೆ : 080–23183734, E-mail : contact@rcbl.co

## ದಿನಾಂಕ 31–03–2023 ರಲ್ಲಿದ್ದಂತೆ ಲಾಭ–ನಷ್ಟ ತ:ಖ್ತೆ

| ದಿನಾಂಕ 31/03/2022ರಂತೆ | ನಷ್ಟ | ದಿನಾಂಕ 31/03/2023ರಂತೆ | ದಿನಾಂಕ 31/03/2022ರಂತೆ | ಲಾಭ | ದಿನಾಂಕ 31/03/2023ರಂತೆ |
|---|---|---|---|---|---|
| 280180236.82 | ಠೇವಣಿಗಳ ಮೇಲಿನ ಬಡ್ಡಿ | 259959855.00 | 246979819.00 | ಸಾಲಗಳು ಮತ್ತು ಇತರೆಗಳ ಮೇಲಿನ ಬಡ್ಡಿ | 229109181.00 |
| 31258761.00 | ಸಿಬ್ಬಂದಿ ವೇತನ ಹಾಗೂ ಭತ್ಯೆಗಳು | 35067667.00 | 155616789.98 | ಹೂಡಿಕೆಗಳ ಮೇಲೆ ಬಡ್ಡಿ ಹಾಗೂ ಆದಾಯ | 168440246.57 |
| 996510.00 | ನಿರ್ದೇಶಕರುಗಳ ಸಭೆಯ ಸಂಭಾವನೆ | 1196520.00 | 7328641.00 | ಮೀಸಲು ನಿಧಿಯ ಮೇಲಿನ ಬಡ್ಡಿ | 9181528.00 |
| 2241459.92 | ಬಾಡಿಗೆ, ತೆರಿಗೆ, ವಿಮೆ, ವಿದ್ಯುತ್, ಇತರೆ ವೆಚ್ಚಗಳು | 2323175.20 | 252352.07 | ಕಮೀಷನ್, ಎಕ್ಸ್ಚೇಂಜ್ ಮತ್ತು ಬ್ರೋಕರೇಜ್ | 228265.86 |
| 465012.00 | ಕಾನೂನು ಸಲಹಾ ವೆಚ್ಚಗಳು | 1266708.00 | 18614803.82 | ಇತರೆ ಜಮಾಗಳ ಆದಾಯ | 4267901.02 |
| 141351.04 | ಅಂಚೆ, ತಂತಿ, ದೂರವಾಣಿ ವೆಚ್ಚಗಳು | 166997.84 | | | |
| 532372.00 | ಲೆಕ್ಕಪರಿಶೋಧನಾ ವೆಚ್ಚಗಳು | 662400.00 | | | |
| 431724.08 | ಮುದ್ರಣ, ಲೇಖನ ಸಾಮಾಗ್ರಿ ಮತ್ತು ಜಾಹೀರಾತು ವೆಚ್ಚಗಳು | 363439.48 | | | |
| 2703559.44 | ಸವಕಳಿ ಮತ್ತು ರಿಪೇರಿ ವೆಚ್ಚಗಳು | 2267221.30 | | | |
| 9584234.89 | ಇತರೆ ವೆಚ್ಚಗಳು | 10034817.78 | | | |
| 32500000.00 | ಅವಕಾಶಗಳು ಮತ್ತು ಅನಿಶ್ಚಿತಗಳು | 12500000.00 | | | |
| 22580980.00 | ಆದಾಯ ತೆರಿಗೆ | 23162327.00 | | | |
| 45176204.68 | ನಿವ್ವಳ ಲಾಭ | 62255993.85 | | | |
| 428792405.87 | ಒಟ್ಟು | 411227122.45 | 428792405.87 | ಒಟ್ಟು | 411227122.45 |

## ದಿನಾಂಕ 31–03–2023 ರಲ್ಲಿದ್ದಂತೆ ಆಸ್ತಿ ಜವಾಬ್ದಾರಿಗಳ ಸಮತೋಲನ ಪಟ್ಟಿ

| ದಿನಾಂಕ 31/03/2022ರಂತೆ | ಜವಾಬ್ದಾರಿಗಳು | ದಿನಾಂಕ 31/03/2023ರಂತೆ | ದಿನಾಂಕ 31/03/2022ರಂತೆ | ಆಸ್ತಿಗಳು | ದಿನಾಂಕ 31/03/2023ರಂತೆ |
|---|---|---|---|---|---|
| 200000000.00 | ಅಧಿಕೃತ ಷೇರು ಬಂಡವಾಳ | 200000000.00 | 14954137.00 | ನಗದು ಶಿಲ್ಕು | 9501983.00 |
| 124932000.00 | ಪಾವತಿಯಾದ ಷೇರು ಬಂಡವಾಳ | 124102400.00 | 234920255.95 | ಅಂತರ್ ಬ್ಯಾಂಕು ಚಾಲ್ತಿ ಖಾತೆಗಳಲ್ಲಿರುವ ಶಿಲ್ಕು | 208567138.56 |
| 522143817.15 | ಮೀಸಲು ನಿಧಿ ಮತ್ತು ಇತರೆ ನಿಧಿಗಳು | 565983480.56 | 476249895.19 | ಅಂತರ್ ಬ್ಯಾಂಕ್‌ಗಳಲ್ಲಿನ ಖಾಯಂ ಠೇವಣಿ | 379416509.19 |
| 3698746378.02 | ಠೇವಣಿಗಳು ಮತ್ತು ಇತರೆ ಖಾತೆಗಳು | 3424797481.64 | 1885603642.26 | ಹೂಡಿಕೆಗಳು | 1868819200.00 |
| 37625992.00 | ನೀರಿಕ್ಷಿತ ಬಡ್ಡಿಯ ಕಾಂಟ್ರಾ | 19998699.00 | 1890864777.95 | ಸಾಲಗಳು ಮತ್ತು ಮುಂಗಡಗಳು | 1778639400.49 |
| 680150659.04 | ಶಾಖೆಗಳ ಹೊಂದಣಿಕೆ | 614060560.20 | 37625992.00 | ನೀರಿಕ್ಷಿತ ಬಡ್ಡಿಯ ಕಾಂಟ್ರಾ | 19998699.00 |
| 115562083.67 | ಠೇವಣಿಗಳ ಮೇಲೆ ಪಾವತಿಸಬೇಕಾದ ಬಡ್ಡಿ | 92821439.86 | 680150659.04 | ಶಾಖೆಗಳ ಹೊಂದಣಿಕೆ | 614060560.20 |
| 35286757.71 | ಇತರೆ ಜವಾಬ್ದಾರಿಗಳು | 33137935.69 | 16814341.00 | ಸ್ಥಿರಾಸ್ತಿ & ಚರಾಸ್ತಿಗಳು | 14760750.00 |
| 45176204.68 | ನಿವ್ವಳ ಲಾಭ | 62255993.85 | 22440191.88 | ಇತರೆ ಆಸ್ತಿಗಳು | 43393750.36 |
| 5259623892.27 | ಒಟ್ಟು ಮೊತ್ತ | 4937157990.80 | 5259623892.27 | ಒಟ್ಟು ಮೊತ್ತ | 4937157990.80 |
| 6931341.06 | ಅನಿಶ್ಚಿತ ಜವಾಬ್ದಾರಿಗಳು<br>ಡಿ.ಇ.ಎ ಫಂಡ್ ಖಾತೆಯ ಮೊತ್ತ | 6791901.06 | | | |

**Disclosure in financial statements – 'Notes to Accounts'-UCBs**

**The Reserve Bank of India vide circular DOR.ACC.REC.No.45l21.04.01812021-22 dated 30/08/2021**

**1. Regulatory Capital**

(Amount in ₹ crore)

| Sr No. | Particulars | 31/03/2023 | 31/03/2022 |
|---|---|---|---|
| i) | Paid up share capital (net of deductions, if any) | 12.41 | 12.49 |
| ii) | Other Tier 1 capital | 29.83 | 28.97 |
| iii) | Tier 1 capital (I + ii) | 42.24 | 41.46 |
| iv) | Tier 2 capital | 7.19 | 6.90 |
| v) | Total capital (Tier 1+Tier 2) | 49.43 | 48.37 |
| vi) | Total Risk Weighted Assets (RWAs) | 206.05 | 210.61 |
| vii) | Paid-up share capital as percentage of RWAs | 6.02% | 5.93% |
| viii) | Tier 1 Ratio (Tier 1 capital as a percentage of RWAs) | 20.50% | 19.69% |
| ix) | Tier 2 Ratio (Tier 2 capital as a percentage of RWAs) | 3.49% | 3.28% |
| x) | Capital to Risk Weighted Assets Ratio (CRAR) (Total Capital as a percentage of RWAs) | 23.99 | 22.97 |

**2. Asset liability management**

**a) Maturity pattern of certain items of assets and liabilities**

(Amount in ₹ crore)

| | 1 to 14 Days | 15 to 28 Days | 29 Days to 3 Months | Over 3 Months and up to 6 Months | Over 6 Months and up to 1 Months | Over 1Year and up to 3 Year | Over 3 Year and up to 5 Year | Over 5 Year | Total |
|---|---|---|---|---|---|---|---|---|---|
| Deposits | 28.68 | 6.00 | 29.88 | 36.62 | 67.64 | 88.38 | 2.48 | 82.80 | 342.48 |
| Advances | 4.9 | 7.01 | 29.79 | 14.53 | 17.73 | 3.70 | 9.43 | 90.77 | 177.86 |
| Investments | 4.9 | 0.36 | 9.50 | 19.00 | 6.45 | 44.78 | 10.89 | 128.94 | 224.82 |
| Borrowings | | | | | | | | | |

**Note: The Investments are matched with the deficit in advances over deposits**

**3. Investments**

**a) Composition of Investment Portfolio**

(Amount in ₹ crore)

| | Government Securities/State Development Loans | Government Securities/State Development Loans |
|---|---|---|
| | **As on 31/03/2023** | **As on 31/03/2022** |
| **Held to Maturity** | 62.59 | 71.52 |
| **Available for Sale** | 91.41 | 91.41 |
| Less: Provision for NPI & IDR | 2.85 | 2.75 |
| Net | 88.56 | 88.66 |
| **Total Investments** | 154.00 | 162.93 |

**b) Movement of Provisions for Depreciation and Investment Fluctuation Reserve**

(Amount in ₹ crore)

| | Particulars | 31/03/2023 | 31/03/2022 |
|---|---|---|---|
| i) | Movement of provisions held towards depreciation on investments | | |
| | a) Openingbalance | 2.75 | 2.75 |
| | b) Add: Provisions made during theyear | 0.10 | 0.00 |
| | c) Less: Write off / write back of excess provisions during theyear | 0.00 | 0.00 |
| | d) Closingbalance | 2.85 | 2.75 |
| ii) | Movement of Investment FluctuationReserve | | |
| | a) Openingbalance | 4.27 | 2.50 |
| | b) Add: Amount transferred during theyear | 0.35 | 1.77 |
| | c) Less:Drawdown | 0.00 | 0.00 |
| | d) Closingbalance | 4.62 | 4.27 |
| iii) | ClosingbalanceinIFRasapercentageofclosingbalanceof investmentsin AFS and HFT/ Currentcategory | 5.05% | 4.67% |

**c) Sale and transfers to/from HTM category**

Where the value of sales and transfers of securities to/from HTM category exceeds 5 per cent of the book value of investments held in HTM category at the beginning of the year, banks shall disclose the market value of the investments held in the HTM category. The excess of book value over market value for which provision is not made shall also be disclosed. The 5 per cent threshold referred to above shall exclude:

i) The one-time transfer of securities to/from HTM category with the approval of Board of Directors undertaken by banks at the beginning of the accounting year - NIL

**d) Non-SLR investment portfolio**

i) Non-performing non-SLR investments: ***NIL***

ii) Issuer composition of non-SLR investments

| Sr No | Issuer | Amount | | Extent of Private Placement | | Extent of 'Below Investment Grade' Securities | | Extent of 'Unrated' Securities | | Extent of 'Unlisted' Securities | |
|---|---|---|---|---|---|---|---|---|---|---|---|
| (1) | (2) | (3) | | (4) | | (5) | | (6) | | (7) | |
| | | Current year | Previous Year | Current year | Previous Year | Current year | Previous Year | Current year | Previous Year | Current year | Previous Year |
| a) | PSUs | | | | | | | | | | |
| b) | FIs | | | | | | | | | | |
| c) | Banks | | | | | | | | | | |
| d) | Private Corporate | | | | | | | | | | |
| e) | Subsidiaries/ Joint Ventures | | | | | | | | | | |
| f) | Others | | | 00.25 | 25.25 | | | | | | |
| g) | Provision held towards depreciation | | | | | | | | | | |
| | Total * | | | 00.25 | 25.25 | | | | | | |

**4. Asset Quality**

**a) Classification of advances and provisions held**

| | Standard | Non-Performing | | | | Total |
|---|---|---|---|---|---|---|
| | **Total Standard Advances** | **Sub- standard** | **Doubtful** | **Loss** | **Total Non- Performing Advances** | |
| **Gross Standard Advances and NPAs** | | | | | | |
| Opening Balance | 178.33 | 7.67 | 2.53 | 0.55 | 10.75 | 189.08 |
| Add: Additions during the year | 40.00 | | | | | |
| Less: Reductions during the year* | 45.68 | | | | | |
| Closing balance | 172.66 | 3.10 | 1.55 | 0.55 | 5.20 | 177.86 |
| *Reductions in Gross NPAs due to: | | | | | | |
| Upgradation | | | | | | |
| Recoveries (excluding recoveries from upgraded accounts) | | | | | | |
| Write-offs | | | | | | |
| **Provisions (excluding Floating Provisions)** | | | | | | |
| Opening balance of provisions held | 0.82 | | | | 13.55 | 14.37 |
| Add: Fresh provisions made during the year | | | | | 1.17 | 1.17 |
| Less: Excess provision reversed/ Write-off loans | | | | | 0.00 | 0.00 |
| Closing balance of provisions held | 0.82 | | | | 14.72 | 15.54 |
| **Net NPAs** | | | | | | |
| Opening Balance | | | | | NIL | |
| Add: Fresh additions during the year | | | | | NIL | |
| Less: Reductions during the year | | | | | NIL | |
| Closing Balance | | | | | NIL | |

| Ratios(in per cent) | 31/03/2023 | 31/03/2022 |
|---|---|---|
| Gross NPA to Gross Advances | 2.93% | 5.69% |
| Net NPA to Net Advances | 0.00% | 0.00% |
| Provision coverage ratio | 283% | 126% |

**b) Sector-wise Advances and Gross NPAs**

(Amounts in ₹ crore)

| Sr. No. | Sector* | 31/03/2023 | | | 31/03/2022 | | |
|---|---|---|---|---|---|---|---|
| | | Outstanding Total Advances | Gross NPAs | Percentage of Gross NPAs to Total Advances inthat sector | Outstanding Total Advances | Gross NPAs | Percentage of Gross NPAs to Total Advances inthat sector |
| i) | **Priority Sector** | | | | | | |
| a) | Agriculture and allied activities | | | | | | |
| b) | Advances to industries sector eligible as priority sector lending | 17.57 | 0.37 | 2.11% | 17.29 | 2.01 | 11.63% |
| c) | Services | | | | | | |
| d) | Other Loans Including Personal loans | 101.73 | 1.71 | 1.68% | 30.95 | 3.09 | 9.98% |
| | Subtotal (i) | 119.30 | 2.08 | 1.74% | 48.24 | 5.10 | 10.57% |
| ii) | **Non-priority Sector** | | | | | | |
| a) | Agriculture and allied activities | | | | | | |
| b) | Industry | | | | | | |
| c) | Services | | | | | | |
| d) | Other Loans Including Personal loans | 128.56 | 0.31 | 0.24 | 140.84 | 5.65 | 4.01% |
| | Sub-total (ii) | 128.56 | 0.31 | 0.24 | 140.84 | 5.65 | 4.01% |
| | **Total (I + ii)** | 247.86 | 2.39 | 0.96% | 189.08 | 10.75 | 5.69% |

**c) Overseas assests, NPA and revenue**

**No Exposure/ transactions during the current/ previous Years.**

**d) Particulars of resolutions plan and restructing**

**ii) Details of accounts subjected to restructing- NIL**

**e) Divergence in assest clarification and provisioning**

| Sr. | Particulars | Amount ( In crores) |
|---|---|---|
| 1. | Gross NPAs as on March 31 2022* as reported by the bank | 10.75 |
| 2. | Gross NPAs as on March 31 2022 as assessed by Reserve Bank of India | 12.22 |
| 3. | Divergence in Gross NPAS(2-1) | 1.47 |
| 4. | Net NPAs as on March 31,2022 as reported by the bank | 0.00 |
| 5. | Net NPAs as on March 31,2022 as assessed by Reserve Bank of India | 0.00 |
| 6. | Divergence in Net NPAs (5-4) | 0.00 |
| 7. | Provisions for NPAs as on March 31,2022 reported by the bank | 13.56 |
| 8. | Provisions for NPAs as on March 31,2022 as assessed by Reserve Bak of India | 13.56 |
| 9. | Divergence in Provisioning (8-7) | 0.00 |
| 10. | Reported Profit before Provisions and Contigencies for the year ended March31,2022 | 4.52 |
| 11. | Reported Net Profit after Tax (PAT) for the year ended March 31,2022 | 4.47 |
| 12. | Adjusted (notional) Net Profit asfter Tax (PAT) for the year ended March 31,2022 after considering the divergence in provisioning | 0.05 |

**March 31,2022 is the close of the reference period in respect of which divergences were assessed**

**c) Fraud accounts**

Banks shall make disclose details on the number and amount of frauds as well as the provisioning thereon as per template given below.

(Amounts in ₹ crore)

| | 31/03/2023 | 31/03/2022 |
|---|---|---|
| Number of frauds reported | 0 | 1 |
| Amount involved in fraud (₹ crore) | 0.00 | 0.55 |
| Amount of provision made for such frauds (₹ crore) | 0.00 | 0.55 |
| Amount of Un-amortised provision debited from 'other reserves' as at the end of the year. (₹ crore) | 0.00 | 0.00 |

i) Disclosure under Resolution Framework for COVID-19-related StressFormat for disclosures to be made starting March 31, 2023 NA

**Exposures**

**a) Exposure to real estate sector: Bank has not Provided any Loans to Real estate Sector NIL**

**b) Unsecured advances**

(Amounts in ₹ crore)

| Particulars | 31/03/2023 | 31/03/2022 |
|---|---|---|
| Total unsecured advances of the bank | 0.49 | 0.59 |

**5. Concentration of deposits, advances and NPAs**

**a) Concentration of deposits**

(Amounts in ₹ crore)

| Particulars | 31/03/2023 | 31/03/2022 |
|---|---|---|
| Total deposits of the twenty largest depositors | 21.54 | 21.44 |
| Percentage of deposits of twenty largest depositors to total deposits of the bank | 6.29% | 5.80 |

**b) Concentration of advances***

(Amounts in ₹ crore)

| Particulars | 31/03/2023 | 31/03/2022 |
|---|---|---|
| Total advance of the twenty largest borrowers | 16.49 | 15.82 |
| Percentage of deposits of twenty largest borrowers to total advance of the bank | 9.27% | 8.36% |

**c) Concentration of NPAs**

(Amounts in ₹ crore)

| Particulars | 31/03/2023 | 31/03/2022 |
|---|---|---|
| Total Exposureof the twenty largest NPA accounts | 7.51 | 7.51 |
| Percentage of deposits of twenty largest NPA accounts to total Exposure of the bank | 53.38% | 69.86% |

**6. Transfers to Depositor Education and Awareness Fund (DEA Fund)**

(Amounts in ₹ crore)

| Sr. No. | Particulars | 31/03/2023 | 31/03/2022 |
|---|---|---|---|
| i) | Opening balance of amounts transferred to DEA Fund | 0.69 | 0.69 |
| ii) | Add: Amounts transferred to DEA Fund during the year | 0.01 | 0.03 |
| iii) | Less: Amounts reimbursed by DEA Fund towards claims | 0.02 | 0.00 |
| iv) | Closing balance of amounts transferred to DEA Fund | 0.68 | 0.69 |

**7. Disclosure of complaints**

**a) Summary information on complaints received by the bank from customers and from the Offices of Banking Ombudsman (OBOs)**

| Sr No | | Particulars | 31/03/2023 | 31/03/2022 |
|---|---|---|---|---|
| | Complaints received by the bank from its customers | | | |
| 1 | | Number of complaints pending at beginning of the year | - | - |
| 2 | | Number of complaints received during the year | 1 | 1 |
| 3 | | Number of complaints disposed during the year | 1 | 1 |
| | 3.1 | Of which, number of complaints rejected by the bank | - | - |
| 4 | | Number of complaints pending at the end of the year | - | - |
| | Maintainable complaints received by the bank from OBOs | | | |
| 5 | | Number of maintainable complaints received by the bank from OBOs | - | - |
| | 5.1. | Of 5, number of complaints resolved in favour of the bank by BOs | - | - |
| | 5.2 | Of 5, number of complaints resolved through conciliation/mediation/advisories issued by BOs | - | - |
| | 5.3 | Of 5, number of complaints resolved after passing of Awards by BOs against the bank | - | - |
| 6 | | Number of Awards unimplemented within the stipulatedtime (other than those appealed) | - | - |

Note: Maintainable complaints refer to complaints on the grounds specifically mentioned in BO Scheme 2006 and covered within the ambit of the Scheme.

**8. Disclosure of penalties imposed by the Reserve Bank of India**

Penalties imposed by the Reserve Bank of India under the provisions of the (i) Banking Regulation Act, 1949 and (ii) Payment and Settlement Systems Act, 2007 shall be disclosedinthe'NotestoAccounts'tothebalancesheetintheconcernedbank's next Annual Report. Banks shall make appropriate disclosures on the nature of the breach, number of instances of default and the quantum of penalty imposed - ***NIL***

**9. Other Disclosures**

**a) Business ratios**

| Particular | 31/03/2023 | 31/03/2022 |
|---|---|---|
| i) Interest Income as a percentage to Working Funds | 9.47% | 9.03% |
| ii) Non-interest income as a percentage to Working Funds | 0.09% | 0.42% |
| iii) Cost of Deposits | 7.59% | 7.58% |
| iv) Net Interest Margin | 2.99% | 3.05% |
| v) Operating Profit as a percentage to Working Funds | 1.98% | 1.82% |
| vi) Return on Assets | 1.45% | 0.86% |
| vii) Business (deposits plus advances) per employee (in₹ crore) | 18.58 | 18.03 |
| viii) Profit per employee (in ₹crore) | 0.31 | 0.27 |

**b) Bancassurance business: Bank has not taken anyBancassurance business**

**c) Disclosures regarding Priority Sector Lending Certificates(PSLCs): The Bank has Purchased PSLCs (General) of Rs.70 Crores to achieve 60% priority sector lending Rs. 70,000/-paid as premium.**

**d) Provisions and contingencies:**

| | Provision debited to Profit and Loss Account | 31/03/2023 | 31/03/2022 |
|---|---|---|---|
| i) | Provisions forNPI | 0.00 | 0.00 |
| ii) | Provision towards NPA | 1.00 | 1.50 |
| iii) | Provision made towards Income tax | 2.32 | 2.25 |
| iv) | Provisions for Investment Fluctuation Reserve | 0.00 | 1.77 |
| v) | General Provision | 0.00 | 0.00 |

**e) Payment of DICGC Insurance Premium:**

| Sr No. | Particulars | 31/03/2023 | 31/03/2022 |
|---|---|---|---|
| i) | Payment of DICGC Insurance Premium | 0.45 | 0.45 |
| ii) | Arrears in payment of DICGC premium | 0.00 | 0.00 |

**f) Disclosure of facilities granted to directors and theirrelative:**

| Sr No. | Director Name and their Relative Details | Loan Balance |
|---|---|---|
| i) | Sri. S.M.Muniraju Director, Loan Account No: 1001073021742 | 9.42 Lakhs |
| ii) | Smt. Vanajakshi.K.H Director, Loan Account No: 1003073000300 | 21.04 Lakhs |

**Bank has not provided any fund or non-fund (guarantees, letters of credit, etc.) facilities extended to director's relatives, companies or firms in which they are interested during this Financial Year.**

ಸಹಿ/–
(ಅನುಷ ಎಂ.ಎನ್)
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ಸಹಿ/–
(ಅಶ್ವಿನಿ ಮಂಜುನಾಥ್.ಇ)
ವ್ಯವಸ್ಥಾಪಕರು

ಸಹಿ/–
(ಡಿ.ಜಟ್ಟೆಯಾಂಡಿ)
ಉಪಾಧ್ಯಕ್ಷರು

ಸಹಿ/–
(ಕೆ.ಎಲ್.ತಿಮ್ಮಪ್ಪ)
ಅಧ್ಯಕ್ಷರು

ಸಹಿ/–
(ಡಾ.ಸಿ.ವೆಂಕಟಾಚಲಪತಿ)
ನಿರ್ದೇಶಕರು

ಸಹಿ/–
(ಸಿ.ಆರ್.ಬಿರಾದರ್)
ನಿರ್ದೇಶಕರು

ಸಹಿ/–
(ಎಚ್.ಹುಚ್ಚೇಗೌಡ)
ನಿರ್ದೇಶಕರು

**ದೃಡೀಕರಣ ಪತ್ರ**

ನಾನು ಮೇಲ್ಕಂಡ "ದಿ ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್ ಲಿ.," ಇದರ 2022–23 ನೇ ಸಾಲಿನ ಲೆಕ್ಕಪರಿಶೋಧನೆಯನ್ನು ನಡೆಸಿರುತ್ತೇನೆ. ನನ್ನ ಅತ್ಯುತ್ತಮ ಜ್ಞಾನ ಹಾಗೂ ನಂಬಿಕೆಯಂತೆ ಲೆಕ್ಕಪರಿಶೋಧನೆಗೆ ಅಗತ್ಯವಾದ ಮಾಹಿತಿ ಹಾಗೂ ವಿವರಣೆಯನ್ನು ಪಡೆದಿರುತ್ತೇನೆ ಹಾಗೂ ಅವು ಸತ್ಯವಾದವುಗಳೆಂದು ಕಂಡುಬಂದಿರುತ್ತದೆ. ನನ್ನ ಅಭಿಪ್ರಾಯದಂತೆ ಹಾಗೂ ನನಗೆ ದೊರೆತ ಮಾಹಿತಿ ವಿವರಣೆಯಂತೆ ಹಾಗೂ ಲಗತ್ತಿಸಿರುವ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುವುದಕ್ಕೆ ಒಳಪಟ್ಟು ಬ್ಯಾಂಕಿನ ಲಾಭ–ನಷ್ಟ ಮತ್ತು ಆಸ್ತಿ–ಜವಾಬ್ದಾರಿ ತ:ಖ್ತೆಯು ಬ್ಯಾಂಕಿನ ಆರ್ಥಿಕ ಸ್ಥಿತಿಯ ನಿಜ ಸಮಂಜಸ ಸ್ಥಿತಿಯನ್ನು ದಿನಾಂಕ 31–03–2023 ರಲ್ಲಿದ್ದಂತೆ ತಿಳಿಯಪಡಿಸುತ್ತದೆ.

ಬಿ.ಆರ್.ಆರ್. ಅಂಡ್ ಕಂ.
ಲೆಕ್ಕ ಪರಿಶೋಧಕರು
ಫರ್ಮ್ ನೊಂದಣಿ ಸಂಖ್ಯೆ: 012266S
ಸಹಿ/–
(ವೆಂಕಟಾಪುರ್ ಬಸಪ್ಪ ಮಹದೇವ್)
ಪಾಲುದಾರರು
ಸ.ಸಂ 218296
ಯು.ಡಿ.ಐ.ಎನ್: 23218296BGWSGV9874

ಸ್ಥಳ: ಬೆಂಗಳೂರು
ದಿನಾಂಕ: 22/06/2023

## ಜುಲೈ 10ರಂದು ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ


ಎಸ್. ವರಲಕ್ಷ್ಮಿ

ಬೆಂಗಳೂರು: 'ಅಂಗನವಾಡಿ ಕಾರ್ಯಕರ್ತೆಯರಿಗೆ ಸರ್ಕಾರ ನೀಡಿರುವ ಮೊಬೈಲ್‌ಗಳನ್ನು ಜುಲೈ 10ರಂದು ವಾಪಸ್ ಮಾಡುವ ಮೂಲಕ ರಾಜ್ಯದಾದ್ಯಂತ ಪ್ರತಿಭಟನೆ ಮಾಡಲಾಗುವುದು' ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್. ವರಲಕ್ಷ್ಮಿ ತಿಳಿಸಿದರು.

ಮಂಗಳವಾರ ನಡೆದ ಅಂಗನವಾಡಿ ನೌಕರರ ಕೌನ್ಸಿಲ್ ಸಭೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, 'ಸರ್ಕಾರ ನೀಡಿರುವ ಮೊಬೈಲ್‌ಗಳಲ್ಲಿ ನೆಟ್‌ವರ್ಕ್, ರ್‍ಯಾಮ್, ಸ್ಟೋರೇಜ್ ಸಮಸ್ಯೆ ಇದೆ. ಹೊಸ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಇಲ್ಲ' ಎಂದು ದೂರಿದರು.

'ಪೋಷಣ್ ಅಭಿಯಾನ ಯೋಜನೆ ಅಡಿಯಲ್ಲಿ ಪೋಷಣ್ ಟ್ರ್ಯಾಕರ್‌ನಲ್ಲಿ ಪ್ರತಿನಿತ್ಯ ಮಕ್ಕಳ, ಪೋಷಕರ ಹಾಜರಾತಿ, ಆಹಾರ ವಿತರಣೆ, ಶಾಲಾಪೂರ್ವ ಶಿಕ್ಷಣ ಚಟುವಟಿಕೆಗಳನ್ನು ಅಪ್‌ಲೋಡ್ ಮಾಡುವುದಕ್ಕೆ ಸಮಸ್ಯೆಯಾಗುತ್ತಿದೆ' ಎಂದು ಹೇಳಿದರು.

'ಈಗಾಗಲೇ ನಾಲ್ಕು ವರ್ಷಗಳ ಹಿಂದೆ ನೀಡಿರುವ ಮೊಬೈಲ್‌ಗಳು ಹಾಳಾಗಿವೆ. ಆದ್ದರಿಂದ, ಆರೋಗ್ಯ ಸಮೀಕ್ಷೆ ಕೈಗೊಳ್ಳಲು ಹೊಸ ಮೊಬೈಲ್‌ಗಳನ್ನು ನೀಡಬೇಕು. ಇಲ್ಲವಾದರೆ, ಕೈಪಿಡಿಯಲ್ಲಿ ದಾಖಲಿಸಲು ಅವಕಾಶ ನೀಡಬೇಕು. ಹಿಂದಿನ ಬಜೆಟ್‌ನಲ್ಲಿ ಘೋಷಿಸಿರುವ ₹1 ಸಾವಿರ ಗೌರವಧನವನ್ನು ಕೂಡಲೇ ಪಾವತಿ ಮಾಡಬೇಕು. ರಾಜ್ಯ ಸರ್ಕಾರ ನೂತನ ಮೊಬೈಲ್‌ಗಳನ್ನು ನೀಡಿದರೆ ಮಾತ್ರ ಆನ್‌ಲೈನ್ ಆರೋಗ್ಯ ಸಮೀಕ್ಷೆ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದ, ಖಜಾಂಚಿ ಕಮಲ ಇದ್ದರು.

## ಒತ್ತುವರಿ: 1 ವರ್ಷ ಶಿಕ್ಷೆ

ಬೆಂಗಳೂರು: ಮಹದೇವಪುರದಲ್ಲಿ ರಾಜಕಾಲುವೆ ಒತ್ತುವರಿ ಮಾಡಿಕೊಂಡಿದ್ದ ರವೀಂದ್ರ ಶಂಕರ್ ಅವರಿಗೆ 1 ವರ್ಷ ಸಾದಾ ಶಿಕ್ಷೆ ವಿಧಿಸಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಬಿಬಿಎಂಪಿ ಮಹದೇವಪುರ ವಲಯದ ಬೃಹತ್ ಮಳೆನೀರು ಗಾಲುವೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರು ಒತ್ತುವರಿ ಬಗ್ಗೆ ದೂರು ನೀಡಿದ್ದರು. ಬಿ. ನಾರಾಯಣಪುರ ಗ್ರಾಮದ ಸರ್ವೆ ನಂ.136ರಲ್ಲಿ ಬಿಬಿಎಂಪಿ ವಾರ್ಡ್ 56ರಲ್ಲಿ 0.11 ಗುಂಟೆ ಕಾಲುವೆಯನ್ನು ಲೌಲಿ ಮೆಮೊರಿಯಲ್ ಶಾಲೆ ಮತ್ತು ಕಾಲೇಜಿನ ಅಧ್ಯಕ್ಷ ರವೀಂದ್ರ ಶಂಕರ್ ಒತ್ತುವರಿ ಮಾಡಿದ್ದಾರೆ ಎಂದು ನ್ಯಾಯಾಲಯದಲ್ಲಿ 2018ರ ಜ.11ರಂದು ಪ್ರಕರಣ ದಾಖಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಲಯ ಜೂನ್ 26ರಂದು ಅಂತಿಮ ತೀರ್ಪು ಪ್ರಕಟಿಸಿದ್ದು, ರವೀಂದ್ರ ಶಂಕರ್ ಭೂ ಕಬಳಿಕೆದಾರ ಎಂದು ತೀರ್ಮಾನಿಸಿ, ಶಿಕ್ಷೆ ವಿಧಿಸಿದೆ. ಅವರು ದಂಡ ಕಟ್ಟಲು ವಿಫಲವಾದರೆ ಮೂರು ತಿಂಗಳು ಹೆಚ್ಚಿನ ಶಿಕ್ಷೆ ಅನುಭವಿಸಬೇಕು ಎಂದು ನ್ಯಾಯಿಕ ಸದಸ್ಯ ಪಾಟೀಲ ನಾಗಲಿಂಗನಗೌಡ ಹಾಗೂ ಎಸ್. ಪಾಲಯ್ಯ ಅವರನ್ನು ಒಳಗೊಂಡ ಕಂದಾಯ ಸದಸ್ಯರು ಆದೇಶ ನೀಡಿದ್ದಾರೆ ಎಂದು ಸರ್ಕಾರಿ ಅಭಿಯೋಜಕರು ತಿಳಿಸಿದ್ದಾರೆ. 1 ತಿಂಗಳಲ್ಲಿ ಜಾಗವನ್ನು ತೆರವುಗೊಳಿಸಲು ಒತ್ತುವರಿದಾರರಿಗೆ ಸೂಚಿಸಲಾಗಿದೆ. ಬಿಬಿಎಂಪಿ ಅಧಿಕಾರಿಗಳು ಜಾಗವನ್ನು ಸ್ವಾಧೀನಕ್ಕೆ ಪಡೆಯುವಂತೆ ನಿರ್ದೇಶಿಸಲಾಗಿದೆ.

## ವ್ಯವಸ್ಥಾಪಕನ ಅಪಹರಿಸಿ ₹ 10 ಲಕ್ಷಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ


ಕೇಶವಮೂರ್ತಿ


ಪ್ರೇಮ್ ಬಾಬು


ಮದನ್


ಸೂರ್ಯ

ಬೆಂಗಳೂರು: ಸಂಸ್ಥೆಯೊಂದರ ವ್ಯವಸ್ಥಾಪಕನ ಅಪಹರಿಸಿ ₹10 ಲಕ್ಷಕ್ಕೆ ಬೇಡಿಕೆಯಿಟ್ಟಿದ್ದ ನಾಲ್ವರು ಅಪಹರಣಕಾರರನ್ನು ಜ್ಞಾನಭಾರತಿ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಕೇಶವಮೂರ್ತಿ (32), ಮದನ್ (28), ಸೂರ್ಯ (21) ಹಾಗೂ ಪ್ರೇಮ್ ಬಾಬು(21) ಬಂಧಿತ ಆರೋಪಿಗಳು.

ಕೆಂಚನಪುರ ಕ್ರಾಸ್‌ನಲ್ಲಿರುವ ಸಂತೋಷ್ ಸೋಶಿಯಲ್ ಸರ್ವಿಸ್ ಸೊಸೈಟಿ (ರಿಯಾಬಿಲಿಟೇಷನ್) ಸೆಂಟರ್ ಮಾಲೀಕನಿಗೆ ಕರೆ ಮಾಡಿ ₹ 10 ಲಕ್ಷಕ್ಕೆ ಬೇಡಿಕೆ ಇಡಲಾಗಿತ್ತು. ಆ ಹಣವನ್ನು ಮಾಲೀಕರು ಕೊಡಲು ನಿರಾಕರಿಸಿದ್ದರಿಂದ 8 ಮಂದಿಯ ಗುಂಪು ಸಂಸ್ಥೆಯ ಬಳಿಗೇ ಬಂದು ಮಾಲೀಕರು ಎಲ್ಲಿ ಬಂದು ವಿಚಾರಿಸಿದ್ದರು. ಮಾಲೀಕರು ಇಲ್ಲ ಎಂದಾಗ, ಆರೋಪಿಗಳು ಸಂಸ್ಥೆಯ ವ್ಯವಸ್ಥಾಪಕನನ್ನೇ ಅಪಹರಿಸಿದ್ದರು. ಮಾಲೀಕನಿಗೆ ಕರೆ ಮಾಡಿ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡ ಜ್ಞಾನಭಾರತಿ ಠಾಣೆ ಪೊಲೀಸ್ ಮೊಬೈಲ್ ಲೊಕೇಷನ್ ಹಾಗೂ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ನಂಜನಗೂಡು ಬಸ್ ನಿಲ್ದಾಣದ ಬಳಿ ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

**₹ 6.50 ಲಕ್ಷದ ಬೈಕ್ ಜಪ್ತಿ:** ರಸ್ತೆಗಳ ಬದಿಯಲ್ಲಿ ನಿಲುಗಡೆ ಮಾಡಿದ್ದ ಬೈಕ್‌ಗಳ ಹ್ಯಾಂಡಲ್ ಲಾಕ್ ಮುರಿದು 7 ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ 7 ಮಂದಿ ಆರೋಪಿಗಳನ್ನು ಜ್ಞಾನಭಾರತಿ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳು ಬ್ಯಾಡರಹಳ್ಳಿ, ಮಾಗಡಿ ರಸ್ತೆ, ವಿಜಯನಗರ, ಚಂದ್ರಾಲೇಔಟ್ ಹಾಗೂ ಜ್ಞಾನಭಾರತಿ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬೈಕ್ ಕಳವು ಮಾಡಿದ್ದರು. ಬಂಧಿತರಿಂದ ₹ 6.50 ಲಕ್ಷದ ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಹಣಕ್ಕಾಗಿ ವಕೀಲರ ಅಪಹರಣ: ಬಂಧನ

ಬೆಂಗಳೂರು: ವಕೀಲರೊಬ್ಬರನ್ನು ವಿಳಾಸ ಕೇಳುವ ನೆಪದಲ್ಲಿ ಅಪಹರಿಸಿ ₹20 ಸಾವಿರ ಸುಲಿಗೆ ಮಾಡಿದ್ದ ಹೊಸಕೆರೆಹಳ್ಳಿಯ ನಂದೀಶ್ (30) ಹಾಗೂ ಯಶವಂತ (31) ಎಂಬುವರನ್ನು ಗಿರಿನಗರದ ಪೊಲೀಸರು ಬಂಧಿಸಿದ್ದಾರೆ.

ಹಾಸನದ ಶಾಂತಿ ಗ್ರಾಮದ ನಿವಾಸಿ, ವಕೀಲ ಅಶೋಕ್ ಅವರು ಬೆಂಗಳೂರಿನ ಹನುಮಂತನಗರದ ನಾಗೇಂದ್ರ ಬ್ಲಾಕ್‌ನಲ್ಲಿ ನೆಲೆಸಿದ್ದರು. ಜೂನ್ 19ರಂದು ರಾತ್ರಿ 2.30ಕ್ಕೆ ಬೆಂಗಳೂರಿಗೆ ಬಂದಿದ್ದು, ಕ್ಯಾಬ್ ಮೂಲಕ ಹನುಮಂತನಗರದ ಪಿಇಎಸ್ ಕಾಲೇಜು ಬಳಿ ಇಳಿದುಕೊಂಡು ಮನೆಗೆ ನಡೆದುಕೊಂಡು ಹೋಗುವ ಸಂದರ್ಭದಲ್ಲಿ ಆಟೊದಲ್ಲಿ ಬಂದ ಐವರು ಆರೋಪಿಗಳು ವಿಳಾಸ ಕೇಳುವ ನೆಪದಲ್ಲಿ ಹಲ್ಲೆ ಮಾಡಿ ಅಪಹರಿಸಿದ್ದರು.

'ಬೆಳಿಗ್ಗೆ ನೈಸ್ ರಸ್ತೆಯಲ್ಲಿ ಸುತ್ತಾಡಿಸಿ ರವಿಶಂಕರ್ ಗುರೂಜಿ ಆಶ್ರಮದ ಬಳಿ ಹಲ್ಲೆ ನಡೆಸಿ ಹಣ ನೀಡುವಂತೆ ಬೆದರಿಕೆ ಹಾಕಿದ್ದರು. ಆದರೆ, ಅಶೋಕ ಅವರ ಬಳಿ ₹ 200 ಮಾತ್ರವೇ ಇತ್ತು. ನಂತರ ಸ್ನೇಹಿತರಿಗೆ ಕರೆ ಮಾಡಿ ಹಣ ಹಾಕಿಸಿಕೊಳ್ಳುವಂತೆ ಧಮ್ಕಿ ಹಾಕಿದ್ದರು. ಅಶೋಕ ಅವರ ಸ್ನೇಹಿತರಿಂದ ₹20 ಸಾವಿರ ಹಣವನ್ನು ಬ್ಯಾಂಕ್ ಖಾತೆಗೆ ಹಾಕಿಸಿಕೊಂಡ ಆರೋಪಿಗಳು ಎಟಿಎಂ ಕಾರ್ಡ್ ಕಸಿದುಕೊಂಡು ಹಣ ಡ್ರಾ ಮಾಡಿಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಅಶೋಕ ಅವರು ಗಿರಿನಗರದ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿದ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ಇತರೆ ಆರೋಪಿಗಳಿಗೆ ಶೋಧ ಕಾರ್ಯ ನಡೆದಿದೆ' ಎಂದು ಪೊಲೀಸರು ಹೇಳಿದರು.

## ಪುನೀತ್ ಕೆರೆಹಳ್ಳಿ ವಿರುದ್ಧ ರೌಡಿಪಟ್ಟಿ ತೆರೆಯಲು ಪೊಲೀಸರ ಸಿದ್ಧತೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ


ಪುನೀತ್ ಕೆರೆಹಳ್ಳಿ

ಬೆಂಗಳೂರು: ರಾಷ್ಟ್ರರಕ್ಷಣಾ ಪಡೆ ಸಂಘಟನೆಯ ಮುಖಂಡ ಪುನೀತ್ ಕುಮಾರ್ ಅಲಿಯಾಸ್ ಪುನೀತ್ ಕೆರೆಹಳ್ಳಿ ವಿರುದ್ಧ ರೌಡಿಪಟ್ಟಿ ತೆರೆಯಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಚಾಮರಾಜಪೇಟೆ ಉಪ ವಿಭಾಗದ ಪೊಲೀಸರು ಪುನೀತ್‌ಗೆ ತಿಳಿವಳಿಕೆ ನೋಟಿಸ್ ಜಾರಿ ಮಾಡಿದ್ದಾರೆ.

ಪುನೀತ್ ವಿರುದ್ಧ ಬೆಂಗಳೂರಿನ ಚಾಮರಾಜಪೇಟೆ, ವಿಜಯನಗರ ಜಿಲ್ಲೆಯ ಹಂಪಿ ಟೂರಿಸಂ ಪೊಲೀಸ್ ಠಾಣೆ, ರಾಮನಗರ ಜಿಲ್ಲೆಯ ಸಾತನೂರು ಸೇರಿದಂತೆ ರಾಜ್ಯದ ಹಲವು ಠಾಣೆಗಳಲ್ಲಿ ದೊಂಬಿ, ಕೊಲೆ, ಹಲ್ಲೆ, ಪ್ರಾಣ ಬೆದರಿಕೆ ಪ್ರಕರಣಗಳು ದಾಖಲಾಗಿವೆ. ಹೀಗಾಗಿ, ರೌಡಿಪಟ್ಟಿ ತೆರೆಯಲು ಸಿದ್ಧತೆ ನಡೆದಿದೆ ಎಂದು ಪೊಲೀಸರು ಹೇಳಿದ್ದಾರೆ.

'ಬಂಧನಕ್ಕೆ ಒಳಗಾಗಿ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಗೊಂಡಿರುವ ನಿಮ್ಮ ವಿರುದ್ಧ ರೌಡಿಪಟ್ಟಿ ತೆರೆಯಲು ಅನುಮತಿಗಾಗಿ ಚಾಮರಾಜಪೇಟೆ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ವರದಿ ಸಲ್ಲಿಸಿದ್ದಾರೆ. ಹಲವು ಪ್ರಕರಣಗಳಲ್ಲಿ ಆರೋಪಿಯಾಗಿರುವ ನಿಮ್ಮ ಮೇಲೆ ಏಕೆ ರೌಡಿಪಟ್ಟಿ ತೆರೆಯಬಾರದು ಎಂಬುದಕ್ಕೆ ನನಗೆ ವಿವರಣೆ ಸಲ್ಲಿಸಬಹುದು. ಇಲ್ಲದಿದ್ದರೆ ವಿವರಣೆ ಇಲ್ಲವೆಂದು ಪರಿಗಣಿಸಿ ರೌಡಿಪಟ್ಟಿ ತೆರೆಯಲಾಗುವುದು' ಎಂದು ಚಿಕ್ಕಪೇಟೆ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರು, ಪುನೀತ್‌ಗೆ ಜಾರಿಗೊಳಿಸಿರುವ ನೋಟಿಸ್‌ನಲ್ಲಿ ಉಲ್ಲೇಖಿಸಿದ್ದಾರೆ.

## ಚಿಕ್ಕರಾಯಪ್ಪ ಅಕ್ರಮಕ್ಕೆ ನೆರವು: ಪ್ರಕರಣ ರದ್ದತಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನೀರಾವರಿ ನಿಗಮದ ಅಧ್ಯಕ್ಷರಾಗಿದ್ದ ಚಿಕ್ಕರಾಯಪ್ಪ ಅವರ ಅಕ್ರಮ ಆಸ್ತಿಯನ್ನು ಸಕ್ರಮಗೊಳಿಸಲು ನೆರವಾದ ಆರೋಪದಲ್ಲಿ ಕಾಂಗ್ರೆಸ್ ಮುಖಂಡ ಎಂ.ಆರ್. ಸೀತಾರಾಂ ವಿರುದ್ಧ ದಾಖಲಾಗಿದ್ದ ಭ್ರಷ್ಟಾಚಾರ ಆರೋಪದ ಪ್ರಕರಣವನ್ನು ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಸೀತಾರಾಂ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿ ವಜಾಗೊಳಿಸಿದೆ.

'ಅರ್ಜಿದಾರರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಎಸಿಬಿ 2018ರ ಮೇ ತಿಂಗಳಲ್ಲಿ 15 ದಿನಗಳ ಅಂತರದಲ್ಲಿ ಎರಡು ನೋಟಿಸ್ ನೀಡಿದೆ. ಮೊದಲ ನೋಟಿಸ್‌ಗೆ ಪ್ರತಿಕ್ರಿಯಿಸಿದ್ದ ಸೀತಾರಾಂ, ಚಿಕ್ಕರಾಯಪ್ಪ (ಪ್ರಕರಣದ ಮೊದಲ ಆರೋಪಿ) ಅವರ ಮಗಳ ಶಿಕ್ಷಣಕ್ಕಾಗಿ ಬಡ್ಡಿ ರಹಿತ ಸಾಲ ನೀಡಿರುವುದಾಗಿ ತಿಳಿಸಿದ್ದಾರೆ. ಆದರೆ, ಎರಡನೇ ನೋಟಿಸ್‌ಗೆ ನೀಡಿರುವ ಉತ್ತರದಲ್ಲಿ, ಸಾಲ ಮಂಜೂರು ಮಾಡಿದ್ದ ಸೊಸೈಟಿ ನಿಷ್ಕ್ರಿಯವಾಗಿದ್ದು, ಹಳೆಯ ದಾಖಲೆಗಳು ಲಭ್ಯವಿಲ್ಲ ಎಂದು ತಿಳಿಸಿದ್ದಾರೆ. ಈ ಬೆಳವಣಿಗೆ ಅತ್ಯಂತ ವಿಚಿತ್ರ ಮತ್ತು ಆಘಾತಕಾರಿಯಾಗಿದೆ' ಎಂದು ನ್ಯಾಯಪೀಠ ತಿಳಿಸಿದೆ.

'ಸೊಸೈಟಿ ಸ್ವತಂತ್ರ ಸಂಸ್ಥೆಯಾಗಿದ್ದು, ಸೀತಾರಾಂ ಅವರು ಸೊಸೈಟಿಯ ಅಧ್ಯಕ್ಷರಾಗಿ ₹ 50 ಲಕ್ಷ ಮೊತ್ತದ ಚೆಕ್‌ಗೆ ಸಹಿ ಹಾಕಿದ್ದಾರೆ. ಈ ₹ 50 ಲಕ್ಷ ಎಲ್ಲಿಂದ ಬಂದಿದೆ, ಚಿಕ್ಕರಾಯಪ್ಪ ಮಗಳ ಶಿಕ್ಷಣಕ್ಕಾಗಿ ಬಡ್ಡಿ ರಹಿತ ಶೈಕ್ಷಣಿಕ ಸಾಲವನ್ನು ನೀಡಲು ಏಕೆ ಆಯ್ಕೆ ಮಾಡಿಕೊಂಡರು ಎಂಬುದಕ್ಕೆ ಸಂಬಂಧಿಸಿದಂತೆ ಸೂಕ್ತ ವಿವರಣೆ ನೀಡಿಲ್ಲ. ಸದ್ಯ ಸೊಸೈಟಿ ನಿಷ್ಕ್ರಿಯಗೊಂಡಿದೆ. ಇಂತಹ ಗಂಭೀರ ಪ್ರಶ್ನೆಗಳಿಗೆ ಸೂಕ್ತ ಪ್ರತಿಕ್ರಿಯೆಯ ಅಗತ್ಯವಿದ್ದು, ಅರ್ಜಿ ವಜಾಗೊಳಿಸಲಾಗುತ್ತಿದೆ' ಎಂದು ನ್ಯಾಯಪೀಠ ತಿಳಿಸಿದೆ.



ಗ್ಲೋಬಲ್ ಇಂಡಿಯಾ ಎಂಟರ್‌ಟೈನ್ಮೆಂಟ್ ಪ್ರೊಡಕ್ಷನ್ ನವದೆಹಲಿಯಲ್ಲಿ ಆಯೋಜಿಸಿದ್ದ 'ಮಿಸ್ ಟೀನ್ ಇಂಡಿಯಾ ಇಂಟರ್‌ನ್ಯಾಶನಲ್ 2023' ಸ್ಪರ್ಧೆಯಲ್ಲಿ ಬೆಂಗಳೂರಿನ ಧ್ವನಿ ಶಂಕರ್ ಅವರು 'ಮಿಸ್ ಟೀನ್ ಇಂಡಿಯಾ ಇಂಟರ್‌ನ್ಯಾಶನಲ್ ಪೆಸಿಫಿಕ್' ಪ್ರಶಸ್ತಿ ಪಡೆದರು.

## ನಾಲ್ಕು ವರ್ಷದ ಮಗುವಿನ ಮೇಲೆ ನಾಯಿ ದಾಳಿ

ಕೆ.ಆರ್.ಪುರ: ಬಸವನಪುರ ಮುಖ್ಯರಸ್ತೆಯ ಕೃಷ್ಣ ಚಿತ್ರಮಂದಿರ ಬಳಿ ರಸ್ತೆಯಲ್ಲಿ ಹೋಗುತ್ತಿದ್ದ ನಾಲ್ಕು ವರ್ಷದ ಬಾಲಕಿಯ ಮೇಲೆ ಜರ್ಮನ್ ಶೆಫರ್ಡ್ ಸಾಕುನಾಯಿ ದಾಳಿ ನಡೆಸಿದೆ.

ವಿನೀಶ್(4) ಗಾಯಗೊಂಡ ಬಾಲಕಿ. ಚಂದ್ರಶೇಖರ್ ಮತ್ತು ಶೀಲಾ ದಂಪತಿಯ ಮಗಳು, ಎಲ್‌ಕೆಜಿ ಕಲಿಯುತ್ತಿರುವ ವಿನೀಶ್ ಬೆಳಿಗ್ಗೆ 7.30ರ ಸಮಯದಲ್ಲಿ ಆಟವಾಡಲು ತನ್ನ ಸಹಪಾಠಿಯ ಮನೆಗೆ ಹೋಗುತ್ತಿದ್ದಳು. ಆನಂದ್ ಎನ್ನುವವರ ಮನೆ ಮುಂಭಾಗಕ್ಕೆ ತಲುಪಿದಾಗ ಮನೆಯಿಂದ ಏಕಾಏಕಿ ಹೊರ ಬಂದ ಜರ್ಮನ್ ಶೆಫರ್ಡ್ ನಾಯಿ ಬಾಲಕಿಯ ಮೇಲೆರಗಿ ಕೈ ಮತ್ತು ಭುಜಕ್ಕೆ ಕಚ್ಚಿ ಗಂಭೀರವಾಗಿ ಗಾಯಗೊಳಿಸಿದೆ.

ಬಾಲಕಿ ಕಿರುಚಿಕೊಂಡಾಗ ಸ್ಥಳೀಯರು ಬಂದು ಬಾಲಕಿಯನ್ನು ರಕ್ಷಿಸಿದ್ದಾರೆ. ಕೆ.ಆರ್. ಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಬಳಿಕ ನಗರದ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಯಿತು. ಮಗುವಿನ ಮೇಲೆ ನಾಯಿ ಎರಗಿ ಕಚ್ಚುತ್ತಿರುವ ದೃಶ್ಯಾವಳಿ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

### ಕೆಜಿಎಫ್ 2 ಚಿತ್ರದ ಸಂಗೀತ ಬಳಕೆ: ಕಾಂಗ್ರೆಸ್ ಅರ್ಜಿ ವಜಾ

ಬೆಂಗಳೂರು: ಭಾರತ ಜೋಡೊ ಯಾತ್ರೆ ವೇಳೆ ಕೆಜಿಎಫ್-2 ಚಿತ್ರದ ಸಂಗೀತ ಬಳಸಿಕೊಂಡಿದ್ದಕ್ಕಾಗಿ ತಮ್ಮ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಎಐಸಿಸಿ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನೇತ್ ಮತ್ತು ಪ್ರಚಾರ ಮಾಧ್ಯಮ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಪ್ರಕಟಿಸಿತು.

**ಪ್ರಕರಣದ ವಿವರ:** 'ರಾಹುಲ್ ಗಾಂಧಿ ನಡೆಸಿದ್ದ ಭಾರತ ಜೋಡೊ ಯಾತ್ರೆಯಲ್ಲಿ ಎಂ.ಆರ್.ಟಿ. ಕಂಪನಿಯ ಅನುಮತಿ ಪಡೆಯದೆ ಕೆಜಿಎಫ್ ಸಿನಿಮಾದ ಸಂಗೀತ ಬಳಸಿಕೊಂಡು ಕಾಂಗ್ರೆಸ್‌ನ ಅಧಿಕೃತ ಸಾಮಾಜಿಕ ಜಾಲತಾಣದ ಖಾತೆಗಳಲ್ಲಿ ವಿಡಿಯೊ ಹಾಗೂ ಪೋಸ್ಟ್ ಹಾಕಲಾಗಿದೆ. ಕಾಂಗ್ರೆಸ್ ತನ್ನ ರಾಜಕೀಯ ಕಾರ್ಯಸೂಚಿ ಮುಂದುವರಿಸಲು ಹಾಗೂ ಪ್ರಚಾರಕ್ಕಾಗಿ ನಮ್ಮ ಹಕ್ಕು ಸ್ವಾಮ್ಯ ಹಾಗೂ ಬೌದ್ಧಿಕ ಆಸ್ತಿ ಹಕ್ಕನ್ನು ಉಲ್ಲಂಘಿಸಿದೆ. ಈ ಸಂಬಂಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಕೋರಿ ಎಂಆರ್‌ಟಿ ಮ್ಯೂಸಿಕ್ ಸಂಸ್ಥೆಯ ಪ್ರತಿನಿಧಿ ಎಂ. ನವೀನ್ ಕುಮಾರ್ 2022ರ ನವೆಂಬರ್ 4ರಂದು ಯಶವಂತಪುರ ಠಾಣೆಗೆ ದೂರು ನೀಡಿದ್ದರು.

ಎಂಆರ್‌ಟಿ ಮ್ಯೂಸಿಕ್ ಕಂಪನಿಯು ಕೆಜಿಎಫ್ ಸಿನಿಮಾದ ಹಿಂದಿ ಹಾಗೂ ಕನ್ನಡ ಸೇರಿದಂತೆ ವಿವಿಧ ಭಾಷೆಗಳ ವಿಡಿಯೊ ಹಾಗೂ ಮ್ಯೂಸಿಕ್ ಹಕ್ಕುಗಳನ್ನು ಹೊಂದಿದೆ.

### ಅಮೆರಿಕದ ಪ್ರಿಡೇಟರ್ ಡ್ರೋನ್‌ಗೆ ಸರಿಸಾಟಿಯಾದ ತಪಸ್ 201 ಡ್ರೋನ್

# ತಪಸ್ 200ನೇ ಹಾರಾಟ ಯಶಸ್ವಿ

ಪ್ರಜಾವಾಣಿ ವಾರ್ತೆ

**ನಾಯಕನಹಟ್ಟಿ (ಚಿತ್ರದುರ್ಗ):** ಏರೊನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್ (ಎಡಿಇ) ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಿದ ಸ್ವದೇಶಿ ನಿರ್ಮಿತ 'ತಪಸ್- 201' ಮಾನವ ರಹಿತ ವಿಮಾನ (ಯುಎವಿ) ಇಲ್ಲಿನ ಭಾರತೀಯ ರಕ್ಷಣಾ ಸಂಶೋಧನಾ ಸಂಸ್ಥೆಯ (ಡಿಆರ್‌ಡಿಒ) ಏರೊನಾಟಿಕಲ್ ಟೆಸ್ಟ್ ರೇಂಜ್‌ನಲ್ಲಿ 200ನೇ ಹಾರಾಟವನ್ನು ಯಶಸ್ವಿಯಾಗಿ ಪೂರೈಸಿದೆ.

ಭಾರತೀಯ ಸೇನೆ, ವಾಯುಪಡೆ, ನೌಕಾಪಡೆಯ (ಟ್ರೈ ಸರ್ವೀಸ್) ತಂಡಕ್ಕೆ 'ತಪಸ್-201'ಅನ್ನು ಮಂಗಳವಾರ ಮೊದಲ ಬಾರಿಗೆ ಪ್ರದರ್ಶಿಸಲಾಯಿತು. ಇದರ ಹಾರಾಟ ಕಂಡು ಹರ್ಷ ವ್ಯಕ್ತಪಡಿಸಿದ ತಂಡವು, ತಂತ್ರಜ್ಞರು ಮತ್ತು ವಿಜ್ಞಾನಿಗಳ ಕಾರ್ಯವನ್ನು ಶ್ಲಾಘಿಸಿತು. ಈ ಮೂಲಕ 'ತಪಸ್- 201' ಮಾನವ ರಹಿತ ವಿಮಾನವು ಬಳಕೆದಾರರ ಮೌಲ್ಯಮಾಪನ ಪ್ರಯೋಗಗಳಿಗೆ ಸಜ್ಜಾಗಿದೆ ಎಂದು ಡಿಆರ್‌ಡಿಒ ಬುಧವಾರ ಟ್ವೀಟ್ ಮಾಡಿದೆ.

ಈ ಮಾನವರಹಿತ ಸುಧಾರಿತ ಕಣ್ಗಾವಲು ವಿಮಾನಕ್ಕೆ ಆರಂಭದಲ್ಲಿ 'ರುಸ್ತುಂ-2' ಎಂದು ಹೆಸರಿಸಲಾಗಿತ್ತು. ಇದು ಅಮೆರಿಕದ ಪ್ರಿಡೇಟರ್ ಡ್ರೋಣ್‌ನ ಸಾಮರ್ಥ್ಯ ಹೊಂದಿದೆ. ದೇಶಿಯ ತಂತ್ರಜ್ಞಾನವನ್ನು ಬಳಸಿ ಡಿಆರ್‌ಡಿಒ ನಿರ್ಮಿಸಿರುವ ಸ್ವದೇಶಿ ನಿರ್ಮಿತ 'ತಪಸ್-201' ಮಧ್ಯಮ ಶ್ರೇಣಿಯ ಎಲೆಕ್ಟ್ರೋ ಆಪ್ಟಿಕ್, ಲಾಂಗ್ ರೇಂಜ್ ಎಲೆಕ್ಟ್ರೋ ಆಪ್ಟಿಕ್, ಸಿಂಥೆಟಿಕ್ ಅಪರ್ಚರ್ ರಾಡಾರ್, ಎಲೆಕ್ಟ್ರಾನಿಕ್ ಇಂಟೆಲಿಜೆನ್ಸ್, ಸಂವಹನ ಬುದ್ಧಿಮತ್ತೆ ಮತ್ತು 350 ಕೆ.ಜಿ. ವರೆಗಿನ ವಸ್ತು ಸಾಗಿಸುವ ಸಾಮರ್ಥ್ಯ ಹೊಂದಿದೆ.

ಈಚೆಗೆ ಭಾರತೀಯ ನೌಕಾಪಡೆಯು ಕಾರವಾರದ ಐಎನ್‌ಎಸ್ ಸುಭದ್ರಾ ನೌಕಾನೆಲೆಯಿಂದ 'ತಪಸ್-201'ನ ಕಮಾಂಡ್ ಮತ್ತು ಕಂಟ್ರೋಲ್ ಸಾಮರ್ಥ್ಯಗಳನ್ನು ಪರೀಕ್ಷಿಸಲಾಗಿತ್ತು. ಸುಮಾರು 30,000 ಅಡಿಗಳ ಕಾರ್ಯಾಚರಣಾ ಎತ್ತರ ಮತ್ತು 250 ಕಿ.ಮೀ.ಗಿಂತ ಹೆಚ್ಚಿನ ವ್ಯಾಪ್ತಿಯನ್ನು ಹಾಗೂ 24ರಿಂದ 30ಗಂಟೆಗಳಿಗೂ ಹೆಚ್ಚು ಅವಧಿಯವರೆಗೆ ಹಾರಾಟ ನಡೆಸಲು ಸಮರ್ಥವಾಗಿದೆ. ಹಗಲು ಮತ್ತು ರಾತ್ರಿ ವೇಳೆಯೂ ನಿರಂತರವಾಗಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಇದಕ್ಕೆ ಇದೆ.

ರಾಜ್ಯ ಪೊಲೀಸ್, ಗಡಿ ಭದ್ರತಾ ಪಡೆ, ಕೇಂದ್ರೀಯ ಮೀಸಲು ಪೊಲೀಸ್ ಮತ್ತು ಕರಾವಳಿ ಭದ್ರತಾ ಪಡೆಯಂತಹ ಆಂತರಿಕ ಭದ್ರತಾ ಪಡೆಗಳು ಸಹ 'ತಪಸ್'ನ ಬಳಕೆಗೆ ಕಾತರವಾಗಿವೆ. ಇದು ಮಾನವ ರಹಿತ ವಿಮಾನ ಗುಪ್ತಚರ, ಕಣ್ಗಾವಲು ಮತ್ತು ವಿಚಕ್ಷಣ ಪಾತ್ರ ನಿರ್ವಹಿಸಲು, ಬಹು ಉಪಯೋಗಿ ಬಳಕೆಯಾಗಲು ಸಿದ್ಧವಾಗಿದೆ.



ನಾಯಕನಹಟ್ಟಿ ಸಮೀಪದ ಡಿಆರ್‌ಡಿಒ ಏರೊನಾಟಿಕಲ್ ಟೆಸ್ಟ್ ರೇಂಜ್2 ಕ್ಯಾಂಪಸಿನಲ್ಲಿ ಮಂಗಳವಾರ ವಿಜ್ಞಾನಿಗಳ ತಂಡ ಕೇಂದ್ರದ ಸೇನಾ ಪಡೆಯ ತಂಡದ ಎದುರು ಸ್ವದೇಶಿ ನಿರ್ಮಿತ ತಪಸ್ (ಯುಎವಿ) ಅನ್ನು ಯಶಸ್ವಿಯಾಗಿ ಪ್ರದರ್ಶಿಸಿತು.

# ವಂದೇ ಭಾರತ್: ದರ ಮರುನಿಗದಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು–ಧಾರವಾಡದ ಮಧ್ಯೆ ಮಂಗಳವಾರ ಆರಂಭಗೊಂಡಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ದರವನ್ನು ರೈಲ್ವೆ ಇಲಾಖೆ ಮರುನಿಗದಿ ಮಾಡಿದೆ.

ಎಸಿ ಚೇರ್ ಕಾರ್‌ಗೆ (ಸಿಸಿ) ಮೊದಲ ನಿಲ್ದಾಣಕ್ಕೆ ದರ ಇಳಿಸಿದರೆ, ಉಳಿದವುಗಳಿಗೆ ದರ ಏರಿಸಿದೆ. ಎಕ್ಸಿಕ್ಯೂಟಿವ್ ಕ್ಲಾಸ್‌ನಲ್ಲಿ (ಇಸಿ) ಪ್ರಯಾಣಿಸುವವರಿಗೆ ಎಲ್ಲ ನಿಲ್ದಾಣಗಳಿಗೂ ದರ ಏರಿಸಲಾಗಿದೆ.

ಮಂಗಳವಾರ ಒಂದೇ ದಿನ ದೇಶದಾದ್ಯಂತ ಐದು ವಂದೇ ಭಾರತ್ ರೈಲುಗಳಿಗೆ ಚಾಲನೆ ನೀಡಲಾಗಿತ್ತು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ನಿಲ್ದಾಣದಿಂದ ಯಶವಂತಪುರಕ್ಕೆ ಮತ್ತು ಧಾರವಾಡದಿಂದ ಹುಬ್ಬಳ್ಳಿ ಜಂಕ್ಷನ್‌ಗೆ ಸಿಸಿ ದರ ₹ 410 ಇದ್ದಿದ್ದನ್ನು ₹ 365ಕ್ಕೆ ಇಳಿಸಿದೆ. ಇಸಿ ದರವನ್ನು ₹ 545ರಿಂದ ₹ 690ಕ್ಕೆ ಏರಿಸಿದೆ.

ಪರಿಷ್ಕೃತ ದರಪಟ್ಟಿ (₹ ಗಳಲ್ಲಿ)

| ಎಲ್ಲಿಂದ | ಎಲ್ಲಿಗೆ | ಎಸಿ ಚೇರ್ ಕಾರ್ (ಹಳೇದರ) | ಎಕ್ಸಿಕ್ಯುಟಿವ್ ಕ್ಲಾಸ್ (ಹಳೇದರ) |
|---|---|---|---|
| ಕೆಎಸ್‌ಆರ್ ಬೆಂಗಳೂರು | ಯಶವಂತಪುರ | 365 (410) | 690 (545) |
| ಕೆಎಸ್‌ಆರ್ ಬೆಂಗಳೂರು | ದಾವಣಗೆರೆ | 935 (915) | 1760 (1740) |
| ಕೆಎಸ್‌ಆರ್ ಬೆಂಗಳೂರು | ಹುಬ್ಬಳ್ಳಿ ಜಂಕ್ಷನ್ | 1155 (1135) | 2200 (2180) |
| ಕೆಎಸ್‌ಆರ್ ಬೆಂಗಳೂರು | ಧಾರವಾಡ | 1185 (1165) | 2265 (2010) |
| ಧಾರವಾಡ | ಕೆಎಸ್‌ಆರ್ ಬೆಂಗಳೂರು | 1350 (1330) | 2460 (2440) |
| ಧಾರವಾಡ | ಯಶವಂತಪುರ | 1350 (1340) | 2460 (2440) |
| ಧಾರವಾಡ | ದಾವಣಗೆರೆ | 765 (745) | 1305 (1282) |
| ಧಾರವಾಡ | ಹುಬ್ಬಳ್ಳಿ ಜಂಕ್ಷನ್ | 365 (410) | 690 (545) |

# ಸ್ತ್ರೀಶಕ್ತಿ ಸಂಘದ ಸಾಲ ಮನ್ನಾಕ್ಕೆ ಆಗ್ರಹ ಸಿ.ಎಂ ನಿವಾಸದೆದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸ್ತ್ರೀಶಕ್ತಿ ಸಂಘದ ಸಾಲ ಮನ್ನಾ ಮಾಡಲು ಆಗ್ರಹಿಸಿ ಮಂಡ್ಯ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸ್ತ್ರೀಶಕ್ತಿ ಸಂಘದ ಸದಸ್ಯರು ಮುಖ್ಯಮಂತ್ರಿ ನಿವಾಸದ ಬಳಿ ಬುಧವಾರ ಪ್ರತಿಭಟನೆ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಮಾಡಿ ಸಾಲಮನ್ನಾ ಮಾಡುವಂತೆ ಕೋರಿದರು.

'6ನೇ ಗ್ಯಾರಂಟಿ'ಯಾಗಿ ಸ್ತ್ರೀಶಕ್ತಿ ಸಂಘದ ಸಾಲವನ್ನು ಮನ್ನಾ ಮಾಡಬೇಕು. ಇದರಿಂದ ರಾಜ್ಯದ ಸಾವಿರಾರು ಮಹಿಳೆಯರಿಗೆ ನೆರವಾಗಲಿದೆ. ಕನಿಷ್ಠ ₹50 ಸಾವಿರದ ವರೆಗಿನ ಸಾಲವನ್ನು ಮನ್ನಾ ಮಾಡಬೇಕು. ಅಲ್ಲದೇ ಹೊಸ ಸಾಲ ಒದಗಿಸಬೇಕು ಎಂದು ಕೋರಿದರು.

ವಿಧಾನಸಭೆ ಚುನಾವಣೆ ಪ್ರಚಾರಕ್ಕೆಂದು ಕೋಲಾರ ಜಿಲ್ಲೆಗೆ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಬಂದಿದ್ದರು. ಅಂದಿನ ಪ್ರಚಾರ ಸಭೆಯಲ್ಲಿ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಆಡಳಿತಕ್ಕೆ ಬಂದರೆ ಸ್ತ್ರೀಶಕ್ತಿ ಸಂಘದ ಸಾಲವನ್ನೂ ಮನ್ನಾ ಮಾಡಲಾಗುವುದು ಎಂದು ಭರವಸೆ ನೀಡಿದ್ದರು. ಅದರಂತೆ ಸಾಲ ಮನ್ನಾ ಯೋಜನೆ ಘೋಷಣೆ ಮಾಡಬೇಕು. ಸಿದ್ದರಾಮಯ್ಯ ಅವರ ಮೇಲೆ ವಿಶ್ವಾಸವಿದೆ. ಅವರು ನುಡಿದಂತೆ ನಡೆದು ಕೊಳ್ಳುತ್ತಾರೆ ಎನ್ನುವ ನಂಬಿಕೆಯೂ ಇದೆ. ಕೊಟ್ಟ ಮಾತಿನಂತೆ ಸಾಲಮನ್ನಾ ಯೋಜನೆ ಪ್ರಕಟಿಸಿ, ಮಹಿಳೆಯರಿಗೆ ನೆರವಾಗಲಿ ಎಂದು ಕೋರಿದರು.

ಕಳೆದ ಕೆಲವು ವರ್ಷಗಳಿಂದ ಸ್ತ್ರೀಶಕ್ತಿ ಸಂಘದ ಸದಸ್ಯರು ಸಂಕಷ್ಟದಲ್ಲಿದ್ದಾರೆ. ಜೀವನ ನಿರ್ವಹಣೆ ಮಾಡಲಿಕ್ಕೆ ಸಾಲ ಮಾಡಿದ್ದಾರೆ. ಆದ್ದರಿಂದ ಸಾಲವನ್ನು ಮನ್ನಾ ಮಾಡಲೇಕು ಎಂದು ಕೋರಿದರು.

## 'ಎಲ್ಲ ನಿರುದ್ಯೋಗಿಗಳಿಗೆ ಯುವನಿಧಿ ನೀಡಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಖಿಲ ಭಾರತ ಡೆಮಾಕ್ರಟಿಕ್ ಯುಥ್ ಆರ್ಗನೈಸೇಷನ್‌ನ (ಎಐಡಿವೈಒ) 58ನೇ ಸ್ಥಾಪನಾ ದಿನದ ಅಂಗವಾಗಿ ರಾಜ್ಯ ಸಮಿತಿಯ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಹಲವು ಬೇಡಿಕೆಗಳ ಈಡೇರಿಕೆಗೆ ಮನವಿ ಮಾಡಿದೆ.

'ಕಾಂಗ್ರೆಸ್‌ನ ಗ್ಯಾರಂಟಿಗಳಲ್ಲಿ ಒಂದಾಗಿರುವ ಯುವನಿಧಿ ಭತ್ಯೆಯನ್ನು ರಾಜ್ಯದಲ್ಲಿರುವ ಎಲ್ಲ ನಿರುದ್ಯೋಗಿಗಳಿಗೆ ವಿಸ್ತರಿಸಬೇಕು. ಇತ್ತೀಚಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಐದು ನಿಗಮಗಳಲ್ಲಿರುವ ಖಾಲಿ ಹುದ್ದೆಗಳ ಭರ್ತಿಗೆ ಹೊರಡಿಸಿರುವ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ₹1 ಸಾವಿರ ಅರ್ಜಿ ಶುಲ್ಕವನ್ನು ಕಡಿತಗೊಳಿಸಬೇಕು. ನೇಮಕಾತಿಗೆ ಪ್ರವೇಶ ಪರೀಕ್ಷೆ ನಡೆಯುವ ದಿನ ಅಭ್ಯರ್ಥಿಗಳಿಗೆ ಉಚಿತ ಪ್ರಯಾಣದ ವ್ಯವಸ್ಥೆ ಕಲ್ಪಿಸಬೇಕು' ಎಂದು ಒತ್ತಾಯಿಸಿದೆ. 'ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಕೂಡಲೇ ಭರ್ತಿ ಮಾಡಿಕೊಳ್ಳಬೇಕು. ನೇಮಕಾತಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ನಿಯಂತ್ರಿಸಬೇಕು. ದ್ವೇಷದ ರಾಜಕಾರಣ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಭರಿಸುವ ಎಲ್ಲಾ ರೀತಿಯ ಅರ್ಜಿ ಶುಲ್ಕಗಳನ್ನು ಕೈಬಿಡಬೇಕು. ಮಾದಕ ವಸ್ತುಗಳಿಗೆ ಕಡಿವಾಣ ಹಾಕಬೇಕು' ಎಂದಿದೆ.

ನಿಯೋಗದಲ್ಲಿ ಎಐಡಿವೈಒ ರಾಷ್ಟ್ರೀಯ ಉಪಾಧ್ಯಕ್ಷ ಜಿ. ಶಶಿಕುಮಾರ್, ರಾಜ್ಯ ಘಟಕದ ಅಧ್ಯಕ್ಷ ಶರಣಪ್ಪ, ಉದ್ನಾಳ್, ರಾಜ್ಯ ಕಾರ್ಯದರ್ಶಿ ಸಿದ್ಧಲಿಂಗ ಬಾಗೇವಾಡಿ, ಉಪಾಧ್ಯಕ್ಷ ಕೃಷ್ಣ, ಖಜಾಂಚಿ ಜಯಣ್ಣ, ಸದಸ್ಯರಾದ ರಾಜಶೇಖರ, ಪೂರ್ಣಿಮಾ, ಅರುಣಕುಮಾರ್ ಇದ್ದರು.

## ಗೃಹಜ್ಯೋತಿ: 76 ಲಕ್ಷ ಗ್ರಾಹಕರ ನೋಂದಣಿ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಗೃಹಬಳಕೆಯ ವಿದ್ಯುತ್‌ಗೆ 200 ಯುನಿಟ್‌ವರೆಗೆ ಉಚಿತವಾಗಿ ನೀಡುವ ಗೃಹಜ್ಯೋತಿ ಯೋಜನೆಗೆ 76 ಲಕ್ಷಕ್ಕೂ ಅಧಿಕ ಗ್ರಾಹಕರು ನೋಂದಣಿ ಮಾಡಿಕೊಂಡಿದ್ದಾರೆ.

ಜೂನ್ 18ರಂದು ನೋಂದಣಿ ಪ್ರಕ್ರಿಯೆ ಆರಂಭಗೊಂಡಿತ್ತು. ರಾಜ್ಯದ ಆರು ವಿದ್ಯುತ್ ಕಂಪನಿಗಳ ವ್ಯಾಪ್ತಿಯಲ್ಲಿ ಬುಧವಾರ ಸಂಜೆ 4ರ ವರೆಗೆ 76,09,701 ಗ್ರಾಹಕರು ನೋಂದಾಯಿಸಿಕೊಂಡಿದ್ದಾರೆ.

ಗೃಹ ಜ್ಯೋತಿ ಯೋಜನೆಗೆ ವಿದ್ಯುತ್ ಕಚೇರಿ, ನಾಡಕಚೇರಿ, ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್ ಫೋನ್‌ಗಳಲ್ಲಿ ಅಧಿಕೃತ ಪೋರ್ಟಲ್ https://sevasindhugs.karnataka.gov.in ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಬೆಂಗಳೂರು ಒನ್, ಗ್ರಾಮ ಒನ್, ಕರ್ನಾಟಕ ಒನ್ ಹಾಗೂ ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿಯೂ ನೋಂದಾಯಿಸಿಕೊಳ್ಳಬಹುದು. ಹೆಚ್ಚುವರಿ ಹಣಕ್ಕೆ ಯಾರಾದರೂ ಬೇಡಿಕೆಯಿಟ್ಟಲ್ಲಿ ಗ್ರಾಹಕರು 24x7 ಸಹಾಯವಾಣಿ 1912ಕ್ಕೆ ಕರೆಮಾಡಿ ತಿಳಿಸಬಹುದು.

ಈ ಯೋಜನೆಯ ಕುರಿತಾದ ಮಾಹಿತಿಗಾಗಿ ಗ್ರಾಹಕರು ಇಂಧನ ಇಲಾಖೆಯ ಅಧಿಕೃತ ವೆಬ್‌ಸೈಟ್ https://energy.karnataka.gov.in ಗೆ ಭೇಟಿ ನೀಡಬಹುದು. ನಕಲಿ ವೆಬ್‌ಸೈಟ್‌ಗಳನ್ನು ಆಶ್ರಯಿಸಬಾರದು ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.



## ಚಂದಾಪುರದ ಒಳಚರಂಡಿ ಕಾಮಗಾರಿಗೆ ₹106 ಕೋಟಿ ವೆಚ್ಚ


ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆನೇಕಲ್ ತಾಲ್ಲೂಕು ಚಂದಾಪುರ ಪಟ್ಟಣದ ಒಳಚರಂಡಿ ಕಾಮಗಾರಿಯನ್ನು ₹106 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಬುಧವಾರ ನಡೆದ ಸಚಿವ ಸಂಪುಟ ಸಭೆ ಆಡಳಿತಾತ್ಮಕ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಹೆಬ್ಬಲಗೋಡಿ, ಬೊಮ್ಮಸಂದ್ರ, ಜಿಗಣಿ ಪಟ್ಟಣಗಳ ಕೊಳಚೆ ನೀರು ಚಂದಾಪುರ ಪಟ್ಟಣದ ಕೆರೆಗೆ ಸೇರುತ್ತಿದೆ. ಇದರಿಂದ ಕೆರೆ ಕಲುಷಿತ-ವಾಗುತ್ತಿದ್ದು, ಇದನ್ನು ತಡೆಯಲು ನಗರ ನೀರು ಸರಬರಾಜು ಮತ್ತು ಒಳಮಂಡಳಿ ವತಿಯಿಂದ ಒಳಚರಂಡಿ ನಿರ್ಮಿಸಲಾಗುವುದು ಎಂದರು.

ಈ ಯೋಜನೆಗೆ ರಾಜ್ಯ ಸರ್ಕಾರ ₹80.10 ಕೋಟಿ, ಸಾಲ ₹21.36 ಕೋಟಿ, ಸ್ಥಳೀಯ ಸಂಸ್ಥೆಯಿಂದ ₹5.34 ಕೋಟಿ ಒದಗಿಸಲಾಗುವುದು ಎಂದೂ ಹೇಳಿದರು.



ನಗರದ ನ್ಯಾಷನಲ್ ಕಾಲೇಜಿನಲ್ಲಿ ಮಂಗಳವಾರ ಜನಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅರ್ಥಶಾಸ್ತ್ರಜ್ಞ ಪ್ರಭಾತ್ ಪಟ್ನಾಯಿಕ್ (ಎಡದಿಂದ ಎರಡನೆಯವರು) ಅವರು 'ನಿರುದ್ಯೋಗ' ಪುಸ್ತಕವನ್ನು ಬಿಡುಗಡೆ ಮಾಡಿದರು. (ಎಡದಿಂದ) ಜನಪ್ರಕಾಶನ ಪ್ರಕಾಶಕ ಬಿ.ರಾಜಶೇಖರಮೂರ್ತಿ, ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ ದಾಸ್, ಪುಸ್ತಕದ ಲೇಖಕ ಟಿ.ಆರ್. ಚಂದ್ರಶೇಖರ್ ಇದ್ದರು – ಪ್ರಜಾವಾಣಿ ಚಿತ್ರ

## 'ಉದ್ಯೋಗ ಆಧಾರಿತ ಅಭಿವೃದ್ಧಿಗೆ ಸಿಗದ ಆದ್ಯತೆ'

ಪ್ರಜಾವಾಣಿ ವಾರ್ತೆ

**ಕೃತಿ:** ನಿರುದ್ಯೋಗ
**ಲೇಖಕ:** ಡಾ.ಟಿ.ಆರ್. ಚಂದ್ರಶೇಖರ್
**ಪ್ರಕಾಶನ:** ಜನಪ್ರಕಾಶನ
**ಬೆಲೆ:** ₹ 120

**ಬೆಂಗಳೂರು:** 'ಕೇಂದ್ರದಲ್ಲಿ ನರೇಂದ್ರ ಮೋದಿ ಸರ್ಕಾರವು ಅಸ್ತಿತ್ವಕ್ಕೆ ಬಂದ ಮೇಲೆ ಉದ್ಯೋಗ ಆಧಾರಿತ ಅಭಿವೃದ್ಧಿಗೆ ಆದ್ಯತೆ ಸಿಗುತ್ತಿಲ್ಲ' ಎಂದು ನವದೆಹಲಿಯ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಿಕ್ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಡಾ.ಟಿ.ಆರ್. ಚಂದ್ರಶೇಖರ್ ಅವರ 'ನಿರುದ್ಯೋಗ' ಕೃತಿ ಲೋಕಾರ್ಪಣೆ ಹಾಗೂ ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡಿದರು.

'ಬಂಡವಾಳ ಶಾಹಿಗಳಿಗೆ ಪೂರಕವಾದ ನೀತಿಗಳನ್ನು ಜಾರಿಗೆ ತರಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ಕೈಗಳಿಗೆ ಕೆಲಸ ನೀಡಲು ಜಾರಿಗೆ ತಂದಿದ್ದ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಇನ್ನೂ ಸಮಗ್ರವಾಗಿ ಜಾರಿಗೆ ತರಬೇಕಿತ್ತು. ಆದರೆ, ಕೆಲಸವನ್ನು ಕೇಂದ್ರ ಮಾಡಲಿಲ್ಲ. ನಗರ ಕೇಂದ್ರಿತ ಉದ್ಯೋಗಕ್ಕೆ ಆದ್ಯತೆ ನೀಡಬೇಕಿತ್ತು' ಎಂದು ಹೇಳಿದರು.

'ಕೇಂದ್ರವು ನವ ಉದಾರೀಕರಣ ನೀತಿಯನ್ನು ಅತ್ಯಂತ ವೇಗವಾಗಿ ಜಾರಿಗೆ ತಂದಿದ್ದರ ಪರಿಣಾಮ ಭಾರತದಲ್ಲಿ ನಿರುದ್ಯೋಗ ಸಮಸ್ಯೆ ತೀವ್ರಗೊಂಡಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ನಿರುದ್ಯೋಗ ಸಮಸ್ಯೆಯಿಂದ ದೇಶದ ಅಭಿವೃದ್ಧಿಯೂ ಕುಂಠಿತಗೊಳ್ಳಲಿದೆ. ಜನರಲ್ಲಿ ಖರೀದಿಸುವ ಸಾಮರ್ಥ್ಯ ಹೆಚ್ಚಿಸಬೇಕಿತ್ತು. ಅದನ್ನೂ ಮಾಡಿಲ್ಲ. ಬರೀ ಬಂಡವಾಳಶಾಹಿಗಳನ್ನೇ ಬೆಳೆಸುತ್ತಿದೆ' ಎಂದು ಹೇಳಿದರು.

'ಬಡವರಿಗೆ ಅಕ್ಕಿ ನೀಡುವ ವಿಚಾರದಲ್ಲೂ ಕೇಂದ್ರವು ರಾಜಕೀಯ ಮಾಡಿದೆ. ಇಂತಹ ಹೀನಾಯ ಸ್ಥಿತಿಗೆ ಬಿಜೆಪಿ ಇಳಿಯಬಾರದಿತ್ತು' ಎಂದರು.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಮಾತನಾಡಿ, 'ನಿರುದ್ಯೋಗ ಸಮಸ್ಯೆ ಹೆಚ್ಚಳದಿಂದ ಭಯೋತ್ಪಾದನೆ, ಕೋಮುವಾದ, ಮೂಲಭೂತವಾದ, ಅಪರಾಧ ಚಟುವಟಿಕೆಗಳು ಹೆಚ್ಚಲಿವೆ. ಮೊದಲು ನಿರುದ್ಯೋಗ ಸಮಸ್ಯೆ ನಿವಾರಿಸಬೇಕು' ಎಂದು ಆಗ್ರಹಿಸಿದರು.

ಜನಪ್ರಕಾಶನದ ಬಿ.ರಾಜಶೇಖರಮೂರ್ತಿ ಹಾಗೂ ಕಿಗ್ಗ ರಾಜಶೇಖರ್ ಹಾಜರಿದ್ದರು.

ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳಾಗಿ ನಿಯೋಜನೆಗೊಂಡ ಕೆಇಎಸ್ ಅಧಿಕಾರಿಗಳು

# ಕೊರತೆ ಇದ್ದರೂ ಅನ್ಯ ಇಲಾಖೆಗೆ ಶಿಕ್ಷಕರು

• ಚಂದ್ರಹಾಸ ಹಿರೇಮಳಲಿ

| 2,81,862 | 2,15,803 | 66,059 | 13,351 | 35,000 | 2,409 |
|---|---|---|---|---|---|
| ಮಂಜೂರಾದ ಹುದ್ದೆಗಳು | ಕಾರ್ಯನಿರ್ವಹಿಸುತ್ತಿರುವವರು | ಖಾಲಿ ಹುದ್ದೆಗಳು | ನೇಮಕಾತಿ ಪಟ್ಟಿಯಲ್ಲಿನ ಶಿಕ್ಷಕರು | ಅತಿಥಿ ಶಿಕ್ಷಕರು | ಕೆಇಎಸ್ ಅಧಿಕಾರಿಗಳು |

**ಬೆಂಗಳೂರು:** ಹೈಕೋರ್ಟ್ ತಡೆಯಾಜ್ಞೆಯಿಂದಾಗಿ 15 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದ್ದು, ಶಾಲೆಗಳಲ್ಲಿ ಶಿಕ್ಷಕರ ಕೊರತೆ ಎದುರಾಗಿದೆ. ಪರಿಸ್ಥಿತಿ ಹೀಗಿದ್ದರೂ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅನ್ಯ ಇಲಾಖೆಗಳಿಗೆ ತೆರಳಿದ್ದ ಶಿಕ್ಷಕರು, ಅಧಿಕಾರಿಗಳ ನಿಯೋಜನೆಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರದ್ದು ಮಾಡಿಲ್ಲ.

ಕರ್ನಾಟಕ ಶಿಕ್ಷಣ ಸೇವೆ (ಕೆಇಎಸ್) ಮೂಲಕ ಆಯ್ಕೆಯಾಗಿರುವ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನ್ಯಾಸಕರು, ಹಿರಿಯ ಉಪನ್ಯಾಸಕರು, ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು, ಪ್ರೌಢಶಾಲೆ, ಪ್ರಾಥಮಿಕ ಶಾಲೆಗಳ ಶಿಕ್ಷಕರು ಸಹ ನಿಯೋಜನೆ ಮೇಲೆ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತಾಲ್ಲೂಕು ಪಂಚಾಯಿತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಜಿಲ್ಲಾ ಪಂಚಾಯಿತಿ, ವಿವಿಧ ನಿಗಮ, ಮಂಡಳಿ, ಪ್ರಾಧಿಕಾರಗಳಿಗೆ ಶಿಕ್ಷಣ ಇಲಾಖೆಯ ಸಿಬ್ಬಂದಿ ನಿಯೋಜನೆಗೊಂಡಿದ್ದಾರೆ.

ಪ್ರಜಾವಾಣಿ ವಿಶೇಷ

### ಶಿಕ್ಷಣ ಇಲಾಖೆಯ ಆಯುಕ್ತರ ರದ್ದತಿ ಆದೇಶಗಳಿಗೂ ಕಿಮ್ಮತ್ತಿಲ್ಲ

ಶಿಕ್ಷಣ ಇಲಾಖೆ ಹಿಂದೆಲ್ಲ ಒತ್ತಡಗಳಿಗೆ ಮಣಿದು ಅನ್ಯ ಇಲಾಖೆಗಳಿಗೆ ನಿಯೋಜನೆ ಮಾಡಿದೆ. ನಂತರ ಅಧಿಕಾರ ವಹಿಸಿಕೊಂಡ ಕೆಲ ಆಯುಕ್ತರು ತುರ್ತು ಅಗತ್ಯವಿರುವ ಹುದ್ದೆಗಳ ನಿಯೋಜನೆಗಳನ್ನು ರದ್ದು ಮಾಡಿದರೂ, ಎರವಲು ಸೇವೆ ಪಡೆದುಕೊಂಡ ಇಲಾಖೆಗಳು ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿಲ್ಲ. ಶಿಕ್ಷಣ ಇಲಾಖೆಯ ಆಯುಕ್ತ ಆರ್.ವಿಶಾಲ್ ಅವರು ಜಿಲ್ಲಾ ಪಂಚಾಯಿತಿಗಳ ವಿವಿಧ ಹುದ್ದೆಗಳಿಗೆ ನೇಮಕಗೊಂಡಿದ್ದ ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿ ನಿಯೋಜನೆ ರದ್ದು ಮಾಡಿ ಎರಡು ತಿಂಗಳ ಹಿಂದೆ ಆದೇಶ ಹೊರಡಿಸಿದ್ದರು. ಆದರೆ, ಜಿಲ್ಲಾ ಪಂಚಾಯಿತಿ ಸಿಇಒಗಳು ಅವರನ್ನು ಮಾತ್ರ ಇಲಾಖೆಗೆ ಕಳುಹಿಸಿಲ್ಲ.

**ಕಾರ್ಯ ನಿರ್ವಾಹಕೇತರ ಹುದ್ದೆಗೆ ಬಂದಾಕ್ಷಣ ಅನ್ಯ ಇಲಾಖೆಯತ್ತ ಚಿತ್ತ:** ಶಿಕ್ಷಣ ಇಲಾಖೆಯಲ್ಲಿ ಜಿಲ್ಲಾ ಉಪ ನಿರ್ದೇಶಕರು (ಡಿಡಿಪಿಐ), ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಹುದ್ದೆಗಳಿಗೆ ಸಾಕಷ್ಟು ಬೇಡಿಕೆ ಇದೆ. ಪ್ರಭಾವಿ ಅಧಿಕಾರಿಗಳು ಹಿಂದೆಲ್ಲ ತಮ್ಮ ಸಂಪೂರ್ಣ ಸೇವೆಯನ್ನು ಇಂತಹ ಹುದ್ದೆಗಳಲ್ಲೇ ಪೂರೈಸುತ್ತಿದ್ದರು. ಪ್ರಭಾವಿಗಳಲ್ಲದ ಪ್ರತಿಭಾವಂತರು ಪ್ರೌಢಶಾಲಾ ಮುಖ್ಯ ಶಿಕ್ಷಕರಾಗಿ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿನ (ಡಯಟ್) ಕಾರ್ಯ ನಿರ್ವಾಹಕೇತರ ಹುದ್ದೆಗಳಿಗೆ (ನಾನ್ ಎಕ್ಸಿಕ್ಯುಟಿವ್) ಸೀಮಿತರಾಗುತ್ತಿದ್ದರು. ಇಂತಹ ವ್ಯವಸ್ಥೆ ಬದಲಿಸಲು ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ನಿಯಮ ಜಾರಿಯ ನಂತರ ಹಲವು ಪ್ರಭಾವಿ ಅಧಿಕಾರಿಗಳು ತಮ್ಮ ಕಾರ್ಯ ನಿರ್ವಾಹಕ ಹುದ್ದೆಗಳ ಸೇವಾವಧಿ ಮುಗಿದ ತಕ್ಷಣ ಅನ್ಯ ಇಲಾಖೆಗಳಿಗೆ ನಿಯೋಜನೆ ಪಡೆಯುತ್ತಿದ್ದಾರೆ.

‘ನಿಯಮಗಳಂತೆ ಮೂರು ವರ್ಷಗಳು ಡಿಡಿಪಿಐ, ಬಿಇಒಗಳಾಗಿ ಸೇವೆ ಸಲ್ಲಿಸಿದವರನ್ನು ಕಾರ್ಯನಿರ್ವಾಹಕೇತರ ಹುದ್ದೆಗಳಿಗೆ ವರ್ಗಾವಣೆ ಮಾಡುವುದು ಕಡ್ಡಾಯ. ಆಗ ಅವಧಿ ಪೂರೈಸಿದವರು ತಮಗಿರುವ ರಾಜಕೀಯ ಪ್ರಭಾವ ಬಳಸಿ ಅನ್ಯ ಇಲಾಖೆಗಳಿಗೆ ನಿಯೋಜನೆ ಮಾಡಿಸಿಕೊಳ್ಳುತ್ತಾರೆ. ಶಿಕ್ಷಣ ಇಲಾಖೆಯ ಒಬ್ಬ ಮುಖ್ಯ ಶಿಕ್ಷಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ನಿಯೋಜನೆಗೊಂಡು, ಅಲ್ಲಿದ್ದುಕೊಂಡೇ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರ ಜವಾಬ್ದಾರಿಯನ್ನೂ ನಿಭಾಯಿಸಿದರು. ಹಣ ಹೂಡಿ, ಹಣ ಗಳಿಸುವ ಜಾಣ್ಮೆ ಇದು. 50ಕ್ಕೂ ಹೆಚ್ಚು ಪ್ರೌಢಶಾಲೆಗಳ ಮುಖ್ಯಶಿಕ್ಷಕರು ತಾಲ್ಲೂಕು ಪಂಚಾಯಿತಿ ಇಒಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಲವು ಶಿಕ್ಷಕರು ಜಿಲ್ಲಾ ಪಂಚಾಯಿತಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಯಾವ ಸರ್ಕಾರ ಬಂದರೂ ವ್ಯವಸ್ಥೆ ಬದಲಾಗಿಲ್ಲ’ ಎನ್ನುತ್ತಾರೆ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು.

> **ಅನ್ಯ ಇಲಾಖೆಗಳಿಗೆ ನಿಯೋಜನೆ ಮಾಡಿರುವುದು ಅತ್ಯಲ್ಪ. ನಿಯೋಜನೆ ರದ್ದು ಮಾಡಿದ್ದರೂ, ವಾಪಸ್ ಬಾರದ ನೌಕರರ ಮಾಹಿತಿ ಪಡೆಯಲಾಗುವುದು.**
> **ಆರ್.ವಿಶಾಲ್, ಆಯುಕ್ತರು**
> ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

> **ಪಿಯು ಉಪನ್ಯಾಸಕರೊಬ್ಬರನ್ನು ಪ್ರವಾಸೋದ್ಯಮ ಇಲಾಖೆಗೆ ನಿಯೋಜಿಸಲಾಗಿದೆ. ಬದಲಿ ವ್ಯವಸ್ಥೆ ಮಾಡಿಲ್ಲ. ಇದರಿಂದ ಮಕ್ಕಳ ಕಲಿಕೆಗೆ ಅಡ್ಡಿಯಾಗಿದೆ**
> **ಚನ್ನಮಲ್ಲಿಕಾರ್ಜುನ**
> ಪೋಷಕರು, ದಾವಣಗೆರೆ.

> **ಬಿಇಒ ಹುದ್ದೆಗಳಿಗೆ ಅರ್ಹರಾಗಿರುವ 900 ಅಧಿಕಾರಿಗಳು ಇದ್ದಾರೆ. ಬಹುತೇಕರು ಒಮ್ಮೆಯೂ ಆ ಸ್ಥಾನ ಅಲಂಕರಿಸಿಲ್ಲ. ಪ್ರಭಾವಿಗಳೇ ಆ ಹುದ್ದೆ ಪಡೆಯುತ್ತಾರೆ.**
> **ಜಿ.ನಾಗರಾಜ್,** ಅಧ್ಯಕ್ಷ, ಕರ್ನಾಟಕ ಆಡಳಿತ ಸುಧಾರಣಾ ವೇದಿಕೆ

## ಸುದ್ದಿ 2 ನಿಮಿಷ

### ಲೂಯಿಪ್ಯಾಶ್ಚರ್ ಪ್ರಶಸ್ತಿಗೆ ಡಾ. ಶ್ರೀಕೃಷ್ಣ ಇಸಳೂರ ಆಯ್ಕೆ

**ಶಿರಸಿ:** ಬೆಂಗಳೂರಿನ ಹೆಬ್ಬಾಳದಲ್ಲಿರುವ ಪಶುವೈದ್ಯಕೀಯ ಮಹಾವಿದ್ಯಾಲಯದ ಸೂಕ್ಷ್ಮಾಣು ಜೀವಿ ಶಾಸ್ತ್ರ ವಿಭಾಗ, ರೇಬೀಸ್ ರೋಗ ನಿರ್ಣಯ ಪ್ರಯೋಗಾಲಯದ ನಿರ್ದೇಶಕ ಶಿರಸಿಯ ಇಸಳೂರಿನ ಡಾ.ಶ್ರೀಕೃಷ್ಣ ಇಸಳೂರ ಅವರು ರಾಷ್ಟ್ರ ಮಟ್ಟದ ಪ್ರತಿಷ್ಠಿತ ಲೂಯಿ ಪ್ಯಾಶ್ಚರ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ವಿಶ್ವಪ್ರಾಣಿ ಆರೋಗ್ಯ ಸಂಸ್ಥೆಯ ಮಾನ್ಯತೆ ಪಡೆದ, ದಕ್ಷಿಣ ಏಷ್ಯಾ ಮತ್ತು ಆಗ್ನೇಯ ಏಷ್ಯಾದಲ್ಲಿಯೇ ಏಕೈಕ ರೇಬಿಸ್ ಪ್ರಯೋಗಾಲಯ ಇದಾಗಿದ್ದು, ಜಾಗತಿಕ ಮಟ್ಟದಲ್ಲಿ 12ನೇ ಪ್ರಯೋಗಾಲಯವಾಗಿದೆ. ಈ ಪ್ರಶಸ್ತಿಯನ್ನು ಡಾ. ಇಸಳೂರು ಮತ್ತು ಅವರ ತಂಡದವರು ಪ್ರಾಣಿಗಳಲ್ಲಿ ರೇಬೀಸ್ ಕಾಯಿಲೆಯ ಬಗ್ಗೆ ಅಂತರರಾಷ್ಟ್ರೀಯ ಮಟ್ಟದ ಸಂಶೋಧನೆ, ತರಬೇತಿ ಮತ್ತು ನಿಯಂತ್ರಣದಲ್ಲಿ ಮಾಡಿರುವ ಕೊಡುಗೆ ಗಮನಿಸಿ ನೀಡಲಾಗಿದೆ.

ಜುಲೈ 8 ರಂದು ಉತ್ತರಪ್ರದೇಶದ ಲಕ್ನೋದಲ್ಲಿ ನಡೆಯುವ ಡಾ. ರಾಮ ಮನೋಹರ ಲೋಹಿಯಾ ವೈದ್ಯಕೀಯ ರಾಷ್ಟ್ರೀಯ ಸಮಾವೇಶದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

### ‘ಅಂಬೇಡ್ಕರ್ ವಿಚಾರ ದಮನ’

**ಕಲಬುರಗಿ:** ‘ಉತ್ತರ ಭಾರತದಲ್ಲಿ ಮನುವಾದದ ಬೆಂಬಲಿಗರು ಡಾ.ಬಿ.ಆರ್. ಅಂಬೇಡ್ಕರ್ ವಿಚಾರಗಳನ್ನು ತುಳಿಯುವ ಕೆಲಸ ಮಾಡುತ್ತಿದ್ದಾರೆ’ ಎಂದು ಅಂಬೇಡ್ಕರ್ ಅವರ ಮೊಮ್ಮಗ ಹಾಗೂ ಭಾರತೀಯ ಬೌದ್ಧ ಮಹಾಸಭಾದ ಕಾರ್ಯಾಧ್ಯಕ್ಷ ಭೀಮರಾವ್ ಯಶ್ವಂತ್ ರಾವ್ ಅಂಬೇಡ್ಕರ್ ಹೇಳಿದರು.

ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾ ಘಟಕ ನಗರದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ದೇಶದಾದ್ಯಂತ ಅಂಬೇಡ್ಕರ್ ಅವರ ವಿಚಾರಗಳ ಧರ್ಮ ಕ್ರಾಂತಿ ನಡೆಯುತ್ತಿದೆ. ಆದರೆ, ಉತ್ತರ ಭಾರತದಲ್ಲಿ ಅವುಗಳನ್ನು ತುಳಿಯಲಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

## ಶಿವಕುಮಾರ್ ದೆಹಲಿಗೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ವರಿಷ್ಠರು ಹಾಗೂ ಕೇಂದ್ರದ ಸಚಿವರನ್ನು ಗುರುವಾರ ಹಾಗೂ ಶುಕ್ರವಾರ ದೆಹಲಿಯಲ್ಲಿ ಭೇಟಿ ಮಾಡಿ ಸಮಾಲೋಚನೆ ನಡೆಸಲಿದ್ದಾರೆ.

ವಿಧಾನ ಪರಿಷತ್‌ನ ಮೂರು ಸದಸ್ಯ ಸ್ಥಾನಗಳು ಖಾಲಿಯಾಗಿವೆ. ಈ ಸ್ಥಾನಗಳಿಗೆ ನಾಮನಿರ್ದೇಶನ ಮಾಡಬೇಕಿದೆ. ಈ ಸ್ಥಾನಗಳಿಗೆ ಕಾಂಗ್ರೆಸ್ ಮುಖಂಡರಾದ ಎಂ.ಆರ್.ಸೀತಾರಾಮ್, ಮನ್ಸೂರ್ ಅಲಿ ಖಾನ್ ಹಾಗೂ ಸುಧಾಮ್ ದಾಸ್ ಹೆಸರನ್ನು ಅಖೈರುಗೊಳಿಸಲಾಗಿದೆ. ಸುಧಾಮ್ ದಾಸ್ ನಾಮನಿರ್ದೇಶನಕ್ಕೆ ಕಾಂಗ್ರೆಸ್ ವಲಯದಲ್ಲಿ ವಿರೋಧ ವ್ಯಕ್ತವಾಗಿದೆ. ಮೂರು ಸ್ಥಾನಗಳ ನಾಮನಿರ್ದೇಶನದ ಕುರಿತು ವರಿಷ್ಠರ ಜತೆಗೆ ಶಿವಕುಮಾರ್ ಚರ್ಚಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ಗಣಂಗೂರು: ಜು. 1ರಿಂದ ‘ಟೋಲ್’ ಸಂಗ್ರಹ


ಪ್ರಜಾವಾಣಿ ವಾರ್ತೆ

**ಮಂಡ್ಯ:** ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ 2ನೇ ಹಂತದ ಟೋಲ್ ಸಂಗ್ರಹ ಶ್ರೀರಂಗಪಟ್ಟಣ ತಾಲ್ಲೂಕಿನ ಗಣಂಗೂರು ಟೋಲ್ ಕೇಂದ್ರದಲ್ಲಿ ಜುಲೈ 1ರಂದು ಆರಂಭವಾಗಲಿದೆ.

ಬೆಂಗಳೂರಿನಿಂದ ಮದ್ದೂರು ತಾಲ್ಲೂಕು ನಿಡಘಟ್ಟವರೆಗೆ ಈಗಾಗಲೇ ಮೊದಲ ಹಂತದ ಟೋಲ್ ಸಂಗ್ರಹಿಸಲಾಗುತ್ತಿದೆ. ನಿಡಘಟ್ಟದಿಂದ ಮೈಸೂರುವರೆಗೆ ಕಾಮಗಾರಿ ಅಪೂರ್ಣವಾಗಿದ್ದರಿಂದ ಟೋಲ್ ಸಂಗ್ರಹಿಸುತ್ತಿರಲಿಲ್ಲ. ನಿಡಘಟ್ಟದಿಂದ ಮೈಸೂರು ಪ್ರವೇಶಿಸುವ ಮಣಿಪಾಲ್ ಆಸ್ಪತ್ರೆವರೆಗೆ 60 ಕಿ.ಮೀ ಅಂತರವಿದ್ದು, ಗಣಂಗೂರು ಟೋಲ್‌ನಲ್ಲಿ ಶುಲ್ಕ ಸಂಗ್ರಹ ಆರಂಭಗೊಳ್ಳಲಿದೆ. ಈ ಬಗ್ಗೆ ಹೆದ್ದಾರಿ ಪ್ರಾಧಿಕಾರ ಪ್ರಕಟಣೆ ಹೊರಡಿಸಿದೆ.

ಕೇಂದ್ರದಲ್ಲಿ ಸ್ವಚ್ಛತೆ, ದೀಪಗಳ ಅಳವಡಿಕೆ ಮೊದಲಾದ ಕೆಲಸಗಳಲ್ಲಿ ಸಿಬ್ಬಂದಿ ತೊಡಗಿದ್ದಾರೆ.

ಬೆಂಗಳೂರಿನಿಂದ ಮೈಸೂರು ಕಡೆಗೆ ಪ್ರಯಾಣಿಸುವವರು ಬೆಂಗಳೂರು ನಗರ ಜಿಲ್ಲೆಯ ಕಣಮಿಣಕಿ ಗ್ರಾಮದ ಬಳಿಯ ಟೋಲ್‌ನಲ್ಲಿ ಶುಲ್ಕ ಪಾವತಿಸಬೇಕು. ಅದು ನಿಡಘಟ್ಟದವರೆಗೂ ಅನ್ವಯವಾಗುತ್ತದೆ. ನಿಡಘಟ್ಟದಿಂದ ಹೊಸ ಟೋಲ್ ಆರಂಭಗೊಳ್ಳಲಿದ್ದು, ಗಣಂಗೂರು ಟೋಲ್‌ನಲ್ಲಿ ಶುಲ್ಕ ಪಾವತಿಸಿಸಬೇಕು, ಅದು ಮೈಸೂರು ಪ್ರವೇಶದವರೆಗೂ ಅನ್ವಯವಾಗಲಿದೆ.



ಶ್ರೀರಂಗಪಟ್ಟಣ ತಾಲ್ಲೂಕು ಗಣಂಗೂರು ಟೋಲ್ ಕೇಂದ್ರದ ನೋಟ —ಪ್ರಜಾವಾಣಿ ಚಿತ್ರ

> **ಅಧಿಕೃತ ಪ್ರಕಟಣೆಯ ಅನ್ವಯ ಜುಲೈ 1ರಿಂದ ಟೋಲ್ ಸಂಗ್ರಹ ಆರಂಭವಾಗಲಿದೆ. ಯಾವುದೇ ಬದಲಾವಣೆ ಇಲ್ಲ**
> **ರಾಹುಲ್ ಗುಪ್ತಾ,**
> ಯೋಜನಾ ನಿರ್ದೇಶಕ, ಹೆದ್ದಾರಿ ಪ್ರಾಧಿಕಾರ

**ಕಾಮಗಾರಿ ಅಪೂರ್ಣ:** ಆರು ಪಥದ ಪ್ರಮುಖ ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು, ಎರಡೂ ಕಡೆ ಸರ್ವೀಸ್ ರಸ್ತೆ ಇನ್ನೂ ಪೂರ್ಣಗೊಂಡಿಲ್ಲ. ಚರಂಡಿ, ಕೆಳ ಸೇತುವೆಗಳಲ್ಲಿ ಮೂಲ ಸೌಲಭ್ಯ ಒದಗಿಸಿಲ್ಲ.

ಈ ಹಿನ್ನೆಲೆಯಲ್ಲಿ ಈಚೆಗೆ ಬೆಂಗಳೂರಿನಲ್ಲಿ ಸಭೆ ನಡೆಸಿದ್ದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ‘ಸರ್ವೀಸ್ ರಸ್ತೆ ಕಾಮಗಾರಿ ಪೂರ್ಣಗೊಳ್ಳುವವರೆಗೂ ಟೋಲ್ ಸಂಗ್ರಹಿಸಬಾರದು’ ಎಂದು ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದ್ದರು. ಆದರೆ, ಪ್ರಾಧಿಕಾರದ ಅಧಿಕಾರಿಗಳು ಟೋಲ್ ಸಂಗ್ರಹದ ದಿನಾಂಕ ಹಾಗೂ ಶುಲ್ಕ ವಿವರ ಪ್ರಕಟಿಸಿದ್ದಾರೆ.

‘ಎಕ್ಸ್‌ಪ್ರೆಸ್ ವೇಯಲ್ಲಿ ಕನಿಷ್ಠ ಸೌಲಭ್ಯಗಳಿಲ್ಲ, ವೇಗ ನಿಯಂತ್ರಣ ವ್ಯವಸ್ಥೆ ಇಲ್ಲ, ಸರ್ವೀಸ್ ರಸ್ತೆ ಕಾಮಗಾರಿ ಪೂರ್ಣಗೊಂಡಿಲ್ಲ. ಹೀಗಾಗಿ ಈಗಲೇ ಟೋಲ್ ಸಂಗ್ರಹಿಸುವುದು ಬೇಡ ಎಂದು ನಾನು ಅಧಿಕಾರಿಗಳಿಗೆ ಸೂಚಿಸಿದ್ದೆ. ಆದರೆ, ಕೇಂದ್ರ ಸರ್ಕಾರದ ಸೂಚನೆಯಂತೆ ಟೋಲ್ ಸಂಗ್ರಹ ಆರಂಭಿಸುತ್ತಿರುವುದಾಗಿ ಜಿಲ್ಲಾಧಿಕಾರಿ, ಎಸ್ಪಿಗೆ ಮಾಹಿತಿ ಬಂದಿದೆ’ ಎಂದು ಸಚಿವ ಎನ್. ಚಲುವರಾಯಸ್ವಾಮಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

**ಟೋಲ್ ಶುಲ್ಕದ ವಿವರ (₹ಗಳಲ್ಲಿ)**

| | ಏಕಮುಖ ಸಂಚಾರ | ಅದೇ ದಿನ ವಾಪಸ್ |
|---|---|---|
| ಕಾರ್, ಜೀಪ್, ವ್ಯಾನ್ | 155 | 235 |
| ಲಘು ವಾಣಿಜ್ಯ ವಾಹನ, ಲಘು ಸರಕು ವಾಹನ/ಮಿನಿ ಬಸ್ | 250 | 375 |
| ಟ್ರಕ್/ಬಸ್ (ಎರಡು ಆ್ಯಕ್ಸೆಲ್) | 525 | 790 |
| ಮೂರು ಆ್ಯಕ್ಸೆಲ್ ವಾಣಿಜ್ಯ ವಾಹನ | 575 | 860 |
| ಭಾರಿ ವಾಹನಗಳು (4–6 ಆ್ಯಕ್ಸೆಲ್) | 825 | 1,240 |
| 7ಕ್ಕಿಂತ ಹೆಚ್ಚು ಆ್ಯಕ್ಸೆಲ್ | 1,005 | 1,510 |

### ಈಗಾಗಲೇ ಶುರುವಾಗಬೇಕಿತ್ತು: ಪ್ರತಾಪ

**ಮೈಸೂರು:** ‘ಗಣಂಗೂರು ಟೋಲ್‌ನಲ್ಲಿ ಟೋಲ್ ಸಂಗ್ರಹ ಈಗಾಗಲೇ ಆರಂಭವಾಗಬೇಕಿತ್ತು, ಕೆಲವು ಸಮಸ್ಯೆಗಳಿದ್ದ ಕಾರಣ ಹಾಗೂ ಕೆಲವೆಡೆ ಕಾಮಗಾರಿ ಪೂರ್ಣಗೊಂಡಿರಲಿಲ್ಲ. ಹಾಗಾಗಿ ನಾನೇ ತಡೆದಿದ್ದೆ. ಈಗ ಪ್ರಾಧಿಕಾರದವರು ಪ್ರಸ್ತಾಪಿಸಿದ್ದಾರೆ, ಅದನ್ನು ಪರಿಶೀಲಿಸಿ ಪ್ರತಿಕ್ರಿಯಿಸುವೆ’ ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, ‘ಸಿದ್ದಲಿಂಗಪುರದ ಸಮೀಪ ಫ್ಲೈಓವರ್ ಕಾಮಗಾರಿ ಮುಗಿದಿಲ್ಲ, ಮೂಲ ಸೌಕರ್ಯಗಳನ್ನು ಕಲ್ಪಿಸಬೇಕಿದೆ ಅದಕ್ಕೆ 8–10 ತಿಂಗಳು ಬೇಕಾಗುತ್ತದೆ’ ಎಂದರು.

‘ಹೊಸದಾಗಿ ₹ 480 ಕೋಟಿ ವೆಚ್ಚದಲ್ಲಿ ಭೂಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ. ₹ 1,200 ಕೋಟಿ ವೆಚ್ಚದಲ್ಲಿ ಪ್ರವೇಶ– ನಿರ್ಗಮನ, ವಿಶ್ರಾಂತಿ ಪ್ರದೇಶ, ಫ್ಲೈಓವರ್, ಅಂಡರ್‌ಪಾಸ್ ನಿರ್ಮಿಸಲಾಗುವುದು’ ಎಂದು ಮಾಹಿತಿ ನೀಡಿದರು.

**ರೇಸಿಂಗ್ ಟ್ರ್ಯಾಕ್ ಅಲ್ಲ:** ‘ಎಕ್ಸ್‌ಪ್ರೆಸ್ ವೇ ಸಂಚಾರಕ್ಕಿರುವ ರಸ್ತೆಯಷ್ಟೇ. ರೇಸಿಂಗ್ ಟ್ರ್ಯಾಕ್ ಅಲ್ಲ. ಎಲ್ಲಿ ಅವೈಜ್ಞಾನಿಕ ಕಾಮಗಾರಿ ನಡೆದಿದೆ ಎಂಬುದನ್ನು ಗಮನಕ್ಕೆ ತಂದರೆ ಸರಿಪಡಿಸಲಾಗುವುದು’ ಎಂದರು.

## ಪರೀಕ್ಷಾ ಶುಲ್ಕ ಇಳಿಸಿದ ಕೆಇಎ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

**ಬೆಂಗಳೂರು:** ರಾಜ್ಯ ಸರ್ಕಾರದ ಅಡಿಯಲ್ಲಿರುವ ವಿವಿಧ ನಿಗಮಗಳಲ್ಲಿ ಖಾಲಿ ಇರುವ 700ಕ್ಕೂ ಹೆಚ್ಚು ಹುದ್ದೆಗಳಿಗೆ ನೇರ ನೇಮಕಾತಿಗೆ ನಿಗದಿಪಡಿಸಿದ್ದ ಪರೀಕ್ಷಾ ಶುಲ್ಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕಡಿಮೆ ಮಾಡಿದೆ.

ಪ್ರತಿ ಹುದ್ದೆಗೆ ಅರ್ಜಿ ಸಲ್ಲಿಸಲು ಬಯಸುವ ಸಾಮಾನ್ಯ ಅರ್ಹತೆ ಮತ್ತು ಇತರ ಪ್ರವರ್ಗಗಳ (ಪ್ರವರ್ಗ 2ಎ, 2ಬಿ, 3ಎ, 3ಬಿ) ಅಭ್ಯರ್ಥಿಗಳು ಪರೀಕ್ಷಾ ಶುಲ್ಕವಾಗಿ ₹ 1,000, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ 1ರ ಅಭ್ಯರ್ಥಿಗಳು ₹ 750, ಅಂಗವಿಕಲ ಮತ್ತು ಮಾಜಿ ಸೈನಿಕರು ₹ 250 ಶುಲ್ಕ ಕಟ್ಟಬೇಕು ಎಂದು ಅಧಿಸೂಚನೆಯಲ್ಲಿ ಕೆಇಎ ತಿಳಿಸಿತ್ತು.

ಇದೀಗ ಅದನ್ನು ಪರಿಷ್ಕರಿಸಿದ್ದು, ಸಾಮಾನ್ಯ ವರ್ಗದ ಅಭ್ಯರ್ಥಿಗಳು ₹ 500, ಹಿಂದುಳಿದ ವರ್ಗದ (2ಎ, 2ಬಿ, 3ಎ, 3ಬಿ) ಅಭ್ಯರ್ಥಿಗಳು ₹ 300, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ 1ರ ಅಭ್ಯರ್ಥಿಗಳು ₹ 200, ಅಂಗವಿಕಲ ಮತ್ತು ಮಾಜಿ ಸೈನಿಕರು ₹ 100 ಶುಲ್ಕ ಕಟ್ಟಬೇಕು.

‘ಆಹಾರ ನಿಗಮ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ವಿದ್ಯುನ್ಮಾನ ಅಭಿವೃದ್ಧಿ ನಿಗಮ (ಕಿಯೋನಿಕ್ಸ್), ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಈ ಪರಿಷ್ಕೃತ ಶುಲ್ಕ ಅನ್ವಯವಾಗಲಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಇದೇ 30ರ ಮಧ್ಯಾಹ್ನ 1 ಗಂಟೆಯಿಂದ ಚಲನ್ ಡೌನ್‌ಲೋಡ್ ಮಾಡಿಕೊಂಡು ಶುಲ್ಕ ಪಾವತಿಸಬಹುದು’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದ್ದಾರೆ.

‘ಪರೀಕ್ಷಾ ಶುಲ್ಕ’ ಕಡಿಮೆ ಮಾಡುವಂತೆ ಉದ್ಯೋಗಾಕಾಂಕ್ಷಿಗಳು ಆಗ್ರಹಿಸಿದ್ದರು. ಈ ಬಗ್ಗೆ ‘ಪ್ರಜಾವಾಣಿ’ಯ ಜೂನ್ 25ರ ಸಂಚಿಕೆಯಲ್ಲಿ ‘ಕೆಇಎ: ‘ಪರೀಕ್ಷಾ ಶುಲ್ಕ’ದ ಹೊರೆ!’ ಶೀರ್ಷಿಕೆಯಲ್ಲಿ ಸುದ್ದಿ ಪ್ರಕಟಿಸಿತ್ತು.



ಆಷಾಢ ಏಕಾದಶಿಯ ಮುನ್ನಾ ದಿನ ಬುಧವಾರ ವಿಠಲ ದೇವರ ದರ್ಶನ ಪಡೆಯಲು ಮಹಾರಾಷ್ಟ್ರದ ಪಂಢರಪುರಕ್ಕೆ ಭಾರಿ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು —ಪ್ರಜಾವಾಣಿ ಚಿತ್ರ

## ಪಂಢರಪುರ: ಆಷಾಢ ಏಕಾದಶಿ ಇಂದು

ಪ್ರಜಾವಾಣಿ ವಾರ್ತೆ

**ಸೊಲ್ಲಾಪುರ:** ಆಷಾಢ ಏಕಾದಶಿ ಪ್ರಯುಕ್ತ ಜೂನ್ 29ರಂದು ಪಂಢರಪುರ ವಿಠಲ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಯಲಿದೆ. ರಾಜ್ಯದ ಭಾರಿ ಸಂಖ್ಯೆಯ ಭಕ್ತರೂ ಪಾಲ್ಗೊಳ್ಳಲಿದ್ದಾರೆ. ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ದಂಪತಿ ಶುಕ್ರವಾರ ನಡೆಯಲಿರುವ ವಿಶೇಷ ಪೂಜೆಯಲ್ಲಿ ಭಾಗವಹಿಸಲಿದ್ದಾರೆ.

ಸುಮಾರು 12 ಲಕ್ಷ ಭಕ್ತರು ಪಂಢರಪುರಕ್ಕೆ ಆಗಮಿಸಬಹುದು ಎಂದು ಅಂದಾಜಿಸಲಾಗಿದೆ. ರಾಜ್ಯದ ಹಲವು ನಗರಗಳಿಂದ ವಿಶೇಷ ರೈಲುಗಳ ವ್ಯವಸ್ಥೆ ಮಾಡಲಾಗಿದೆ. ಭಕ್ತರು ಉಪವಾಸವಿದ್ದು, ವಿಠಲನ ನಾಮಸ್ಮರಣೆ ಮಾಡುತ್ತಾರೆ. ಹೀಗಾಗಿ ಅವರಿಗೆ ಅಲ್ಪೋಪಹಾರದ ವ್ಯವಸ್ಥೆಯನ್ನೂ ಮಾಡಲಾಗಿದೆ. ಭಕ್ತರಿಗೆ ವಿಠಲನ ದರ್ಶನ ಸುಲಭವಾಗಿ ದೊರೆಯುವ ನಿಟ್ಟಿನಲ್ಲಿ ವಿಐಪಿ ದರ್ಶನ ಬಂದ್ ಮಾಡಲಾಗಿದೆ.

**ನಿಪ್ಪಾಣಿ(ಬೆಳಗಾವಿ ಜಿಲ್ಲೆ) ವರದಿ:** ಆಷಾಢ ಏಕಾದಶಿ ಸಂದರ್ಭದಲ್ಲೇ ‘ಬಕ್ರೀದ್’ ಆಚರಣೆ ಇರುವ ಹಿನ್ನೆಲೆಯಲ್ಲಿ ಕುರ್ಬಾನಿ (ಪ್ರಾಣಿಬಲಿ) ನೀಡುವುದನ್ನು ಮುಸ್ಲಿಮರು ಒಂದು ದಿನ ಮುಂದೂಡಿದ್ದಾರೆ.

ನಿಪ್ಪಾಣಿಯ ವಿಠ್ಠಲ-ರುಕ್ಮಿಣಿ ಮಂದಿರದಲ್ಲಿ ‘ಆಷಾಢ ಏಕಾದಶಿ’ ಪೂಜೆ ನಡೆಯಲಿದ್ದು, ರಾಜ್ಯ ಹಾಗೂ ಹೊರರಾಜ್ಯದಿಂದ ಅಪಾರ ಸಂಖ್ಯೆ ಭಕ್ತರು ಬರುತ್ತಾರೆ. ಅಂದೇ ಬಕ್ರೀದ್ ಇದ್ದು, ಕುರ್ಬಾನಿ ನೀಡುವುದನ್ನು ಒಂದು ದಿನ ಮುಂದೂಡುವಂತೆ ವಿಠಲ ಮಂದಿರದ ಟ್ರಸ್ಟಿಗಳು ಕೋರಿದ್ದರು.

ಇದಕ್ಕೆ ಮುಸ್ಲಿಮರು ಒಪ್ಪಿಗೆ ಸೂಚಿಸಿದ್ದು, ಹಬ್ಬದ ದಿನದಂದು ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಿದ್ದಾರೆ. ಮಾರನೇ ದಿನ ಕುರ್ಬಾನಿ ನೀಡಲಿದ್ದಾರೆ.

## ಐಎಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 8 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ, ಹುದ್ದೆ ನಿರೀಕ್ಷೆಯಲ್ಲಿದ್ದ ಐವರು ಐಎಎಸ್ ಅಧಿಕಾರಿಗಳಿಗೆ ಹುದ್ದೆ ನೀಡಿ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

ನವೀನ್ ರಾಜ್‌ಸಿಂಗ್ ಅವರನ್ನು ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಬಿಬಿಎಂಪಿ ವಿಶೇಷ ಆಯುಕ್ತ (ಚುನಾವಣೆ) ಉಜ್ವಲ್ ಕುಮಾರ್ ಘೋಷ್ ಅವರಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಆಯುಕ್ತರ ಹೊಣೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಸುಷ್ಮಾ ಗೋಡ್‌ಬೋಲೆ ಅವರನ್ನು ಮೌಲ್ಯಮಾಪನ ಪ್ರಾಧಿಕಾರದ ಮುಖ್ಯ ಮೌಲ್ಯಮಾಪನ ಅಧಿಕಾರಿ, ಯಶವಂತ್ ವಿ. ಗುರುಕರ್ ಅವರನ್ನು ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಿಸಲಾಗಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತ ಆರ್.ವಿಶಾಲ್‌ರನ್ನು ವರ್ಗಾವಣೆ ಮಾಡಲಾಗಿದ್ದು, ಅವರ ಸ್ಥಾನಕ್ಕೆ ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ಬಿ.ಬಿ. ಕಾವೇರಿ ಅವರನ್ನು ನೇಮಿಸಲಾಗಿದೆ.

**ವರ್ಗಾವಣೆಯಾದವರು**

| | |
|---|---|
| ಡಿ.ಎಸ್. ರಮೇಶ್ | ನಿರ್ದೇಶಕ, ತೋಟಗಾರಿಕೆ ಇಲಾಖೆ |
| ಪೊಮ್ಮಲ ಸುನಿಲ್‌ಕುಮಾರ್ | ಆಯುಕ್ತ, ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಪ್ರಾಧಿಕಾರ |
| ಸತೀಶ ಬಿ.ಸಿ. | ಜಂಟಿ ನಿರ್ದೇಶಕ (ಆಡಳಿತ), ಆಡಳಿತ ತರಬೇತಿ ಸಂಸ್ಥೆ, ಮೈಸೂರು |
| ಎಚ್.ಎನ್. ಗೋಪಾಲಕೃಷ್ಣ | ಆಯುಕ್ತ, ಕಾರ್ಮಿಕ ಇಲಾಖೆ |
| ಎಂ.ಆರ್. ರವಿಕುಮಾರ್ | ವ್ಯವಸ್ಥಾಪಕ ನಿರ್ದೇಶಕ, ಮೈಸೂರು ಸಕ್ಕರೆ ಕಂಪನಿ |
| ಸಿ.ಎನ್. ಮೀನಾ ನಾಗರಾಜ್ | ಜಿಲ್ಲಾಧಿಕಾರಿ, ಚಿಕ್ಕಮಗಳೂರು |
| ಕೆ. ಆನಂದ | ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದಕ್ಷಿಣ ಕನ್ನಡ |
| ಜಯವಿಭವ ಸ್ವಾಮಿ | ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಖನಿಜ ನಿಗಮ |
| ಜಿ. ಪ್ರಭು | ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ತುಮಕೂರು |
| ಉಕೇಶ್ ಕುಮಾರ್ | ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ |

## ಎಸ್ಸಿಎಸ್ಟಿ ಗುತ್ತಿಗೆದಾರರ ಕಾಮಗಾರಿ ಮೊತ್ತ ₹1 ಕೋಟಿಗೆ: ನಿರ್ಧಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಿಶಿಷ್ಟ ಜಾತಿ ಮತ್ತು ಪಂಗಡದ ಗುತ್ತಿಗೆದಾರರಿಗೆ ಮೀಸಲಾತಿಯಡಿ ನೀಡುವ ಕಾಮಗಾರಿಗಳ ಮೊತ್ತವನ್ನು ₹50 ಲಕ್ಷದಿಂದ ₹1 ಕೋಟಿಗೆ ಏರಿಸಲು ಸರ್ಕಾರ ತೀರ್ಮಾನಿಸಿದೆ.

ಸರ್ಕಾರದ ವಿವಿಧ ಇಲಾಖೆಗಳ ಕಾಮಗಾರಿಗಳ ಟೆಂಡರ್ ಕರೆಯುವಾಗ ಟೆಂಡರ್‌ಗಳ ಸಂಖ್ಯೆಯಲ್ಲಿ ಶೇ 24.1ರಷ್ಟು ಮೀಸಲಾತಿ ನೀಡುವ ನಿಯಮವನ್ನು ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಜಾರಿಗೊಳಿಸಲಾಗಿತ್ತು. ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಚುನಾವಣೆ ದಿನಾಂಕ ಘೋಷಣೆಗೂ ಮುನ್ನ ನಡೆದ ಸಚಿವ ಸಂಪುಟ ಸಭೆಯಲ್ಲಿ ಕಾಮಗಾರಿ ಮೊತ್ತದ ಮಿತಿಯನ್ನು ₹1 ಕೋಟಿವರೆಗೆ ಹೆಚ್ಚಿಸಿ ಸುಗ್ರೀವಾಜ್ಞೆ ಹೊರಡಿಸಿತ್ತು.

ಮಿತಿಯ ಹೆಚ್ಚಳಕ್ಕೆ ವಿಧಾನ ಮಂಡಲದ ಉಭಯ ಸದನಗಳಲ್ಲಿ ಒಪ್ಪಿಗೆ ಪಡೆಯಲು ಮಂಡಿಸಬೇಕಾದ ತಿದ್ದುಪಡಿ ಮಸೂದೆಗೆ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

### ಪ್ರಮುಖ ಅಂಶಗಳು

- ಕೃಷ್ಣಾ, ಕಾವೇರಿ, ಮಹದಾಯಿ ನೀರಾವರಿ ಯೋಜನೆಗಳ ನ್ಯಾಯ ಮಂಡಳಿಗಳ ತೀರ್ಪು ಪರಿಶೀಲಿಸಿ ಜಾರಿಗೊಳಿಸುವ ಮತ್ತು ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಸಂಪುಟ ಉಪ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ.
- ಸಂಘ ಸಂಸ್ಥೆಗಳು ನಡೆಸಿದ ಹೋರಾಟದ ಸಂದರ್ಭಗಳಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಅಪರಾಧ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವ ಸಂಬಂಧ ಪರಿಶೀಲನೆ ನಡೆಸಲು ಸಂಪುಟ ಉಪಸಮಿತಿ ರಚಿಸಲು ತೀರ್ಮಾನಿಸಲಾಗಿದೆ. ಯಾವುದೇ ಸಂಘಟನೆಗಳಿಗೆ ಸೇರಿದ್ದರೂ ನಿರಪರಾಧಿಗಳ ಮೇಲೆ ತಪ್ಪಾಗಿ ಪ್ರಕರಣಗಳು ದಾಖಲಾಗಿದ್ದರೆ, ಅವುಗಳನ್ನು ಹಿಂದಕ್ಕೆ ಪಡೆಯಲಾಗುವುದು.
- ಬೃಹತ್ ಪ್ರಮಾಣದ ಕೈಗಾರಿಕಾ ಬಂಡವಾಳ ಹೂಡಿಕೆಗಳ ಮೇಲೆ ಉತ್ತೇಜನ ಧನ ಮತ್ತು ವಿಶೇಷ ರಿಯಾಯ್ತಿಗಳನ್ನು ನೀಡುವ ಸಂಬಂಧ ತೀರ್ಮಾನ ತೆಗೆದುಕೊಳ್ಳಲು ಸಂಪುಟ ಉಪಸಮಿತಿ ರಚಿಸಲು ತೀರ್ಮಾನ.
- ರಾಜ್ಯದ ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸ್ಮಾರ್ಟ್ ಸಿಟಿ ವಿಶೇಷ ಅಭಿವೃದ್ಧಿ ವಾಹಕಗಳಿಗೆ ನೀಡಿದ್ದ ಯೋಜನಾ ವರದಿಗಳ ಪರಿಷ್ಕರಣೆ, ಕಾಲಾವಧಿ ವಿಸ್ತರಣೆ ಮತ್ತು ಹಣಕಾಸು ಹಂಚಿಕೆ ಅಧಿಕಾರವನ್ನು ವಾಪಸ್ ಪಡೆಯಲಾಗಿದೆ. ಈಗಿರುವ ಮುಂಗಡ ಪತ್ರದ ಮಿತಿಯಲ್ಲಿ ₹980 ಕೋಟಿಯಲ್ಲಿ ಉಪಯೋಜನೆ ಕೈಗೊಳ್ಳಲು ಅನುಮತಿ.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಮುಂದಿನ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲಾಗುವುದು ಎಂದು ಹೇಳಿದರು.

## ರಾಜ್ಯದ ಹಲವೆಡೆ ಮಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಹಲವು ಜಿಲ್ಲೆಗಳಲ್ಲಿ ಬುಧವಾರ ಉತ್ತಮ ಮಳೆಯಾಗಿದೆ.

ಮಂಗಳೂರು ನಗರದಲ್ಲಿ ಸಂಜೆ ಬಿರುಸಾಗಿ ಸುರಿಯಿತು. ಉಡುಪಿ ಜಿಲ್ಲೆಯಲ್ಲಿ ಸರಾಸರಿ 7.5 ಸೆಂ.ಮೀ ಮಳೆಯಾಗಿದೆ. ಕುಂದಾಪುರದಲ್ಲಿ 5, ಬಳ್ಕೂರಿನಲ್ಲಿ 4.9 ಸೆಂ.ಮೀಟರ್ ಮಳೆ ದಾಖಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ರಭಸದ ಮಳೆ ಸುರಿಯಿತು. ಕರಾವಳಿ ಭಾಗದಲ್ಲಿ ನಿರಂತರ ಮಳೆ ಸುರಿದರೆ, ಘಟ್ಟದ ಮೇಲಿನ ಭಾಗದಲ್ಲಿ ಆಗಾಗ ಮಳೆ ಸುರಿಯಿತು. ಮಂಗಳವಾರ ರಾತ್ರಿಯಿಂದ ಬುಧವಾರ ನಸುಕಿನ ಜಾವದವರೆಗೆ ಮಳೆ ಸುರಿದ ಪರಿಣಾಮ ಕಾರವಾರ ತಾಲ್ಲೂಕಿನ ಗ್ರಾಮೀಣ ಭಾಗದ ಕೆಲವೆಡೆ, ಕುಮಟಾ ಪಟ್ಟಣದ ಅಳ್ವೆಕೋಡಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ನೀರು ನಿಂತಿತ್ತು. ಭಟ್ಕಳ ಪಟ್ಟಣದ ಮುಖ್ಯ ರಸ್ತೆಯಲ್ಲಿ ಬೃಹತ್ ಗಾತ್ರದ ಆಲದ ಮರ ಉರುಳಿ ಬಿದ್ದು ಕೆಲ ಹೊತ್ತು ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು.

ಧಾರವಾಡ ಜಿಲ್ಲೆಯಲ್ಲಿ ತುಂತುರು ಮಳೆಯಾಗಿದೆ.

**ಕರಾವಳಿಯಲ್ಲಿ ಭಾರಿ ಮಳೆ ಸಾಧ್ಯತೆ (ಬೆಂಗಳೂರು ವರದಿ):** ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಲವೆಡೆ ಗುರುವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಂದಿನ ಐದು ದಿನ ಭಾರಿ ಮಳೆಯಾಗಲಿದೆ. ಈ ಮೂರು ಜಿಲ್ಲೆಗಳಿಗೆ ಗುರುವಾರ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಅವಹೇಳನ ಆರೋಪ

## ಅಮಿತ್ ಮಾಳವೀಯ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಟ್ವಿಟರ್ ಖಾತೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ವಿಡಿಯೊ ಪೋಸ್ಟ್ ಮಾಡಿದ್ದ ಆರೋಪದ ಮೇಲೆ ಬಿಜೆಪಿ ಐಟಿ ಸೆಲ್ ಉಸ್ತುವಾರಿ ಅಮಿತ್ ಮಾಳವೀಯ ವಿರುದ್ಧ ನಗರದ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಕಾಂಗ್ರೆಸ್ ದೇಶದ್ರೋಹಿ ಎಂದು ಹೇಳಿ ಮಾಳವೀಯ ಅವರು ವಿಡಿಯೊ ಪೋಸ್ಟ್ ಹಾಕಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಕೆಪಿಸಿಸಿ ಸದಸ್ಯ ರಮೇಶ್ ಬಾಬು ದೂರು ನೀಡಿದ್ದರು.

### ಸ್ಮೃತಿ ಇರಾನಿ ವಾಗ್ದಾಳಿ

**ನವದೆಹಲಿ (ಪಿಟಿಐ):** ಪಕ್ಷದ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ವಿರುದ್ಧ ಕರ್ನಾಟಕದಲ್ಲಿ ಎಫ್‌ಐಆರ್ ದಾಖಲಿಸಿರುವ ಕ್ರಮವನ್ನು ಬಿಜೆಪಿ ಬುಧವಾರ ಖಂಡಿಸಿದೆ.

‘ತನಗೆ ಅಧಿಕಾರ ಸಿಕ್ಕ ಕೂಡಲೇ ಸತ್ಯವನ್ನು ತುಳಿಯುವ ಸಲುವಾಗಿ ಗಾಂಧಿ ಕುಟುಂಬ ಎಷ್ಟು ಕೀಳು ಮಟ್ಟಕ್ಕೆ ಇಳಿಯಬಲ್ಲದು ಎಂಬುದಕ್ಕೆ ಈ ನಡೆಯೇ ಸಾಕ್ಷಿ’ ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ವಾಗ್ದಾಳಿ ನಡೆಸಿದ್ದಾರೆ.

‘ಭಾರತದಲ್ಲಿರುವ ಚುನಾಯಿತ ಸರ್ಕಾರವನ್ನು ಉರುಳಿಸಲು ಬಯಸುವ ಕೋಟ್ಯಧಿಪತಿ ಜಾರ್ಜ್ ಸೊರೋಸ್‌ರಂತಹ ವ್ಯಕ್ತಿಗಳನ್ನು ಇತ್ತೀಚೆಗೆ ಅಮೆರಿಕಕ್ಕೆ ಭೇಟಿ ನೀಡಿದಾಗ ರಾಹುಲ್ ಗಾಂಧಿ ಭೇಟಿ ಮಾಡಿದ್ದರು’ ಎಂದು ಟೀಕಿಸುವ ಮೂಲಕ ಅವರು ಪಕ್ಷ ಮಾಡಿದ್ದ ಆರೋಪಗಳನ್ನು ಪುನರುಚ್ಚರಿಸಿದ್ದಾರೆ.

‘ರಾಹುಲ್ ಗಾಂಧಿ ಪಾಲ್ಗೊಂಡಿದ್ದ ಕಾರ್ಯಕ್ರಮವನ್ನು ತಂಜೀಮ್ ಅನ್ಸಾರಿ ನಂಟಿನ ಇಸ್ಲಾಮಿಕ್ ಸರ್ಕಲ್ ಆಫ್ ನಾರ್ತ್ ಅಮೆರಿಕ ಎಂಬ ಸಂಘಟನೆ ಆಯೋಜಿಸಿತ್ತು. ಅನ್ಸಾರಿಗೆ ಜಮಾತ್–ಎ–ಇಸ್ಲಾಮಿ ಸಂಘಟನೆಯೊಂದಿಗೂ ನಂಟಿದೆ’ ಎಂದು ಇರಾನಿ ಹೇಳಿದ್ದಾರೆ.

‘ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಅಮಿತ್ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗುವುದು. ಅಮಿತ್ ಅವರು ಜೂನ್ 17ರಂದು ತಮ್ಮ ಟ್ವಿಟರ್ ಖಾತೆಯಲ್ಲಿ ಅನಿಮೇಟೆಡ್ ವಿಡಿಯೊವನ್ನು ಪೋಸ್ಟ್ ಮಾಡಿದ್ದಾರೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ರಾಹುಲ್ ಗಾಂಧಿ ಅವರು ವಿದೇಶದಲ್ಲಿ ಭಾರತ ವಿರೋಧಿ ಚಟುವಟಿಕೆ ನಡೆಸುತ್ತಾರೆ. ರಾಹುಲ್ ಹಾಗೂ ಕಾಂಗ್ರೆಸ್ ಪಕ್ಷವು ದೇಶವನ್ನು ಒಡೆಯುವ ಕೆಲಸ ಮಾಡುತ್ತಿದೆ ಎನ್ನುವ ರೀತಿಯಲ್ಲಿ ವಿಡಿಯೊದಲ್ಲಿ ಹೇಳಲಾಗಿದೆ. ಇದು ಸಮಾಜವನ್ನು ಪ್ರಚೋದನೆಗೊಳಿಸುತ್ತದೆ’ ಎಂದು ರಮೇಶ್ ಬಾಬು ದೂರಿನಲ್ಲಿ ಉಲ್ಲೇಖಿಸಿದ್ದರು.

‘ಇಸ್ಲಾಮಿಕ್ ನಂಬಿಕೆಯ ಜನರೊಂದಿಗೆ ರಾಹುಲ್ ಗಾಂಧಿ ಅವರು ನಡೆಸಿದ್ದ ಸಂವಾದದ ಅನಿಮೇಷನ್ ಅನ್ನು ತಪ್ಪಾಗಿ ನಿರೂಪಿಸಲಾಗಿದೆ. ಇದು ಜನರ ನಡುವೆ ದ್ವೇಷ ಉಂಟು ಮಾಡುವ ಸಾಧ್ಯತೆ ಇದೆ. ಕೋಮು ಸೌಹಾರ್ದತೆ ಹಾಳು ಮಾಡಲಿದೆ’ ಎಂದು ತಿಳಿಸಿದ್ದರು.

## ‘ಯತ್ನಾಳಗೆ ಹೆಲಿಕಾಪ್ಟರ್ ಕೊಟ್ಟಿದ್ದು ನಿರರ್ಥಕ’

**ವಿಜಯಪುರ:** ‘ವಿಜಯಪುರ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋಲಲು ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇರ ಕಾರಣ. ಜಿಲ್ಲೆಯಲ್ಲೇ ಅಭ್ಯರ್ಥಿಗಳನ್ನು ಗೆಲ್ಲಿಸಲಾಗದ ಯತ್ನಾಳಗೆ ಚುನಾವಣೆ ಪ್ರಚಾರಕ್ಕೆ ಪಕ್ಷ ಹೆಲಿಕಾಪ್ಟರ್ ಕೊಡಿಸಿದ್ದು, ನಿರರ್ಥಕ’ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ವಾಗ್ದಾಳಿ ನಡೆಸಿದರು.

‘ಸಿ.ಎಂ ಆಗಲು ಸಾವಿರಾರು ಕೋಟಿ ಕೊಡಬೇಕು. ಮಂತ್ರಿ ಮಾಡಲು ₹100 ಕೋಟಿ, ನಿಗಮದ ಅಧ್ಯಕ್ಷರನ್ನಾಗಿ ಮಾಡಲು ಕೋಟಿ ಕೋಟಿ ಹಣ ಸುರಿಯಬೇಕು ಎಂಬೆಲ್ಲ ಹೇಳಿಕೆಗಳಿಂದ ಬಿಜೆಪಿಗೆ ದೊಡ್ಡ ಹೊಡೆತವಾಗಿದ್ದು ಈ ಪುಣ್ಯಾತ್ಮನಿಂದ’ ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

# ಅರಾವಳಿ 'ಹಸಿರು ಗೋಡೆ' ಯೋಜನೆ

## ಮರುಭೂಮಿ ವಿಸ್ತರಣೆ ತಡೆಗೆ ಭಾರತದ ಪ್ರಯತ್ನ


ಅರಾವಳಿ ಪರ್ವತ ಶ್ರೇಣಿ ಚಿತ್ರ: ವಿಕಿ ಕಾಮನ್ಸ್

ಯು.ಟಿ. ಆಯಿಶ ಫರ್ಝಾನ

ಮರುಭೂಮಿ ವಿಸ್ತರಣೆ ತಡೆ ಹಾಗೂ ಭೂ ಸವಕಳಿ ತಪ್ಪಿಸುವ ಹಿನ್ನೆಲೆಯಲ್ಲಿ ಭಾರತದ ಅರಾವಳಿ ಬೆಟ್ಟಗಳ ಸುತ್ತ 'ಹಸಿರು ಗೋಡೆ' ನಿರ್ಮಿಸುವ 'ಅರಾವಳಿ ಹಸಿರು ಗೋಡೆ ಯೋಜನೆ'ಗೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಖಾತೆ ಸಚಿವ ಭೂಪೇಂದರ್ ಯಾದವ್ ಅವರು ಇತ್ತೀಚೆಗೆ ಚಾಲನೆ ನೀಡಿದರು.

ಇದು ಭಾರತದ ನಾಲ್ಕು ರಾಜ್ಯಗಳಲ್ಲಿರುವ ಅರಾವಳಿ ಶ್ರೇಣಿಯ ಸುತ್ತಲಿನ 5 ಕಿಮೀ ಬಫರ್ ಪ್ರದೇಶವನ್ನು ಹಸಿರೀಕರಣಗೊಳಿಸುವ ಪ್ರಮುಖ ಉಪಕ್ರಮ. ಅಂತರರಾಷ್ಟ್ರೀಯ ಅರಣ್ಯ ದಿನಾಚರಣೆ ಹಿನ್ನೆಲೆಯಲ್ಲಿ, ಹರಿಯಾಣದ ಟಿಕ್ಲಿ ಗ್ರಾಮದಲ್ಲಿ ಆಯೋಜಿಸಲಾದ ಸಮಾರಂಭದಲ್ಲಿ ಸಚಿವರು ಈ ಯೋಜನೆಗೆ ಚಾಲನೆ ನೀಡಿದರು

> ಯಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ –ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ.

### ಅರಾವಳಿ ಹಸಿರು ಗೋಡೆ ಯೋಜನೆ

ಇದು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲ ಯದ (MoEFCC) ಒಂದು ದೂರದೃಷ್ಟಿಯ ಭಾಗ. ಮರುಭೂಮಿ ವಿಸ್ತರಣೆ ತಡೆ ಮತ್ತು ಭೂಮಿಯ ರಕ್ಷಣೆಗಾಗಿ ಹಸಿರು ಕಾರಿಡಾರ್‌ಗಳನ್ನು ರಚಿಸುವುದು ಈ ಯೋಜನೆಯ ಉದ್ದೇಶ.

ಈ ಯೋಜನೆಯು ಹರಿಯಾಣ, ರಾಜಸ್ಥಾನ, ಗುಜರಾತ್ ಮತ್ತು ದೆಹಲಿ ರಾಜ್ಯಗಳನ್ನು ಒಳಗೊಂಡಿದೆ. ಈ ರಾಜ್ಯಗಳಲ್ಲಿ 60 ಲಕ್ಷ ಹೆಕ್ಟೇರ್ ಭೂಮಿಯನ್ನು ಅರಾವಳಿ ಬೆಟ್ಟಗಳ ಭೂಪ್ರದೇಶ ವ್ಯಾಪಿಸಿದೆ.

ಕೊಳಗಳು, ಸರೋವರಗಳು ಮತ್ತು ತೊರೆಗಳಂತಹ ಭೂಮಿಯ ಮೇಲ್ಮೈ ಜಲಮೂಲಗಳನ್ನು ಪುನರುಜ್ಜೀವನಗೊಳಿಸುವ ಮತ್ತು ಮರು ಸ್ಥಾಪಿಸುವ ಜೊತೆಗೆ ಕುರುಚಲು ಕಾಡು, ಪಾಳುಭೂಮಿ ಮತ್ತು ಅರಣ್ಯ ಭೂಮಿಯಲ್ಲಿ ಸ್ಥಳೀಯ ಪ್ರಭೇದಗಳ ಸಸ್ಯಗಳನ್ನು ಬೆಳೆಸುವ ಕ್ರಮವನ್ನೂ ಒಳಗೊಂಡಿರುತ್ತದೆ. ಜೊತೆಗೆ, ಸ್ಥಳೀಯ ಸಮುದಾಯಗಳ ಜೀವನೋಪಾಯ ವೃದ್ಧಿಗಾಗಿ ಕೃಷಿ ಅರಣ್ಯೀಕರಣ ಮತ್ತು ಹುಲ್ಲುಗಾವಲು ಅಭಿವೃದ್ಧಿಯ ಚಟುವಟಿಕೆಗಳನ್ನೂ ಈ ಯೋಜನೆ ಒಳಗೊಂಡಿದೆ.

### ಅರಾವಳಿ ಶ್ರೇಣಿ ಎಂದರೇನು?

- ಅರಾವಳಿ ಪರ್ವತ ಶ್ರೇಣಿಯು ಭೂಮಿಯ ಮೇಲಿನ ಅತ್ಯಂತ ಹಳೆಯ ಭೂಸ್ವರೂಪಗಳಲ್ಲಿ ಒಂದು. ಇದರ ಮೂಲ ಪ್ರೊಟೆರೋಜೋಯಿಕ್ ಯುಗದಲ್ಲಿ ಪ್ರಾರಂಭವಾಗುತ್ತದೆ ಎಂದು ಅಂದಾಜಿಸಲಾಗಿದೆ.
- ಇದು ಭಾರತದಲ್ಲಿನ ಮಡಿಕೆ ಪರ್ವತಗಳಲ್ಲಿಯೇ ಅತ್ಯಂತ ಪುರಾತನ ಪರ್ವತಶ್ರೇಣಿ. ಅರಾವಳಿ ಶ್ರೇಣಿ ರಚನೆ, ಹಿಮಾಲಯ ಶ್ರೇಣಿಗಳ ರಚನೆಗಿಂತ ಹಿಂದಿನದು.
- ಭಾರತದ ವಾಯವ್ಯ ಪ್ರದೇಶದಾದ್ಯಂತ ಸರಿಸುಮಾರು 670 ಕಿಮೀಗಳಷ್ಟು ಹರಡಿದ್ದು ದೆಹಲಿಯ ಬಳಿ ಪ್ರಾರಂಭವಾಗಿ ದಕ್ಷಿಣ ಹರಿಯಾಣ ಮತ್ತು ರಾಜಸ್ಥಾನದ ಮೂಲಕ ಹಾದುಹೋಗುತ್ತಾ ಅಹಮದಾಬಾದ್ ಗುಜರಾತ್‌ನಲ್ಲಿ ಕೊನೆಗೊಳ್ಳುತ್ತದೆ. ಇದು ಗುಜರಾತ್‌ನಿಂದ ದೆಹಲಿಯವರೆಗೆ ನೈಋತ್ಯ ದಿಕ್ಕಿನಿಂದ ಈಶಾನ್ಯದವರೆಗೆ ಹಬ್ಬಿಕೊಂಡಿದೆ.
- ಮೌಂಟ್ ಅಬುನಲ್ಲಿರುವ ಗುರು ಶಿಖರ್ 1,722 ಮೀ (5,650 ಅಡಿ) ಎತ್ತರವಿದೆ. ಇದು ಅರಾವಳಿ ಶ್ರೇಣಿಯ ಅತ್ಯುನ್ನತ ಶಿಖರವಾಗಿದೆ. ಅರಾವಳಿ ಬೆಟ್ಟಗಳು ದಖ್ಖನ್ ಪ್ರಸ್ಥಭೂಮಿಯ ಪಶ್ಚಿಮ ಮತ್ತು ವಾಯವ್ಯ ದಿಕ್ಕಿನ ಅಂಚಿನಲ್ಲಿವೆ.
- ಭಾರತದ ಥಾರ್ ಮರುಭೂಮಿಯು ಅರಾವಳಿ ಬೆಟ್ಟಗಳ ಪಶ್ಚಿಮದ ಅಂಚಿನಲ್ಲಿದೆ.

### ಯೋಜನೆಯ ಉದ್ದೇಶಗಳು

- ಅರಾವಳಿ ಶ್ರೇಣಿಯ ಪರಿಸರದ ಗುಣಮಟ್ಟವನ್ನು ಸುಧಾರಿಸುವುದು
- ಥಾರ್ ಮರುಭೂಮಿಯ ಪೂರ್ವಾಭಿಮುಖ ವಿಸ್ತರಣೆ ತಡೆಗಟ್ಟುವುದು. ಮಣ್ಣಿನ ಸವಕಳಿ, ಮರುಭೂಮಿ ಮತ್ತು ದೂಳಿನ ಬಿರುಗಾಳಿಯನ್ನು ತಡೆಯುವ ಹಸಿರು ತಡೆಗೋಡೆಗಳನ್ನು ಸೃಷ್ಟಿಸುವುದು. ಈ ಮೂಲಕ ಭೂಮಿಯ ಅವನತಿಯನ್ನು ಕಡಿಮೆ ಮಾಡುವುದು.
- ಅರಾವಳಿ ಪ್ರದೇಶದಲ್ಲಿ ಸ್ಥಳೀಯ ಪ್ರಭೇದದ ಸಸ್ಯ ಸಂಕುಲವನ್ನು ಬೆಳೆಸುವ ಮೂಲಕ ವನ್ಯಜೀವಿಗಳಿಗೆ ಆವಾಸಸ್ಥಾನವನ್ನು ಒದಗಿಸುವುದು; ನೀರಿನ ಗುಣಮಟ್ಟ ಮತ್ತು ಪ್ರಮಾಣವನ್ನು ಸುಧಾರಿಸಿ ಅರಾವಳಿ ಪರ್ವತಗಳ ಶ್ರೇಣಿಯ ಜೀವವೈವಿಧ್ಯ ಮತ್ತು ಪರಿಸರ ವ್ಯವಸ್ಥೆಯನ್ನು ಸುಧಾರಿಸುವುದು.
- ಆದಾಯ, ಉದ್ಯೋಗ, ಆಹಾರ ಭದ್ರತೆ ಮತ್ತು ಸಾಮಾಜಿಕ ಪ್ರಯೋಜನಗಳನ್ನು ಸೃಷ್ಟಿಸುವ ಅರಣ್ಯೀಕರಣ, ಕೃಷಿ-ಅರಣ್ಯೀಕರಣ ಮತ್ತು ಜಲ ಸಂರಕ್ಷಣಾ ಚಟುವಟಿಕೆಗಳಲ್ಲಿ ಸ್ಥಳೀಯ ಸಮುದಾಯಗಳನ್ನು ಒಳಗೊಳ್ಳುವ ಮೂಲಕ ಸುಸ್ಥಿರ ಅಭಿವೃದ್ಧಿ ಮತ್ತು ಜೀವನೋಪಾಯದ ಅವಕಾಶಗಳ ಹೆಚ್ಚಳವನ್ನು ಉತ್ತೇಜಿಸುವುದು.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅರಣ್ಯ ಇಲಾಖೆಗಳು, ಸಂಶೋಧನಾ ಸಂಸ್ಥೆಗಳು, ನಾಗರಿಕ ಸಮಾಜ ಸಂಸ್ಥೆಗಳು, ಖಾಸಗಿ ವಲಯದ ಘಟಕಗಳು ಮತ್ತು ಸ್ಥಳೀಯ ಸಮುದಾಯಗಳಂತಹ ವಿವಿಧ ಭಾಗೀದಾರರಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆ.
- ಯುಎನ್‌ಸಿಸಿಡಿ (United Nations Convention to Combat Desertification - ಮರುಭೂಮಿ ವಿಸ್ತರಣೆ ತಡೆ ಹೋರಾಟಕ್ಕಾಗಿ ವಿಶ್ವಸಂಸ್ಥೆಯ ಸಮಾವೇಶ), ಸಿಬಿಡಿ (Convention on Biodiversity- ಜೀವವೈವಿಧ್ಯ ಸಮಾವೇಶ) ಮತ್ತು ಯುಎನ್‌ಎಫ್‌ಸಿಸಿ (United Nations Framework Convention on Climate Change–ಹವಾಮಾನ ಬದಲಾವಣೆ ತಡೆಗೆ ನೀತಿ ನಿರೂಪಣೆಗೆ ವಿಶ್ವಸಂಸ್ಥೆಯ ಸಮಾವೇಶ) ಯಂತಹ ವಿವಿಧ ಅಂತರರಾಷ್ಟ್ರೀಯ ಒಪ್ಪಂದಗಳ ಅಡಿಯಲ್ಲಿ ಭಾರತವು ನೀಡಿರುವ ಬದ್ಧತೆಗಳಿಗೆ ತನ್ನ ಕೊಡುಗೆಯನ್ನು ನೀಡುವುದು.

### ಯೋಜನೆ ಅನುಷ್ಠಾನ ಹೇಗೆ ?

ಹರಿಯಾಣದ ಅರಾವಳಿ ಪರ್ವತ ಶ್ರೇಣಿಗಳ ಪ್ರತಿ ಜಿಲ್ಲೆಯಲ್ಲಿ ಆರಂಭಿಕ ಹಂತದಲ್ಲಿ ತಲಾ 5 ಜಲಮೂಲಗಳಂತೆ ಒಟ್ಟು 75 ಜಲಮೂಲಗಳನ್ನು ಯೋಜನೆಯಡಿ ಪುನರುಜ್ಜೀವನಗೊಳಿಸಲಾಗುತ್ತದೆ. ಇದರಲ್ಲಿ ಗುರುಗ್ರಾಮ, ಫರಿದಾಬಾದ್, ಭಿವಾನಿ, ಮಹೇಂದರ್‌ಗಢ ಮತ್ತು ಹರಿಯಾಣದ ರೇವಾರಿ ಜಿಲ್ಲೆಗಳ ಹಾಳಾದ ಭೂಮಿಯೂ ಸೇರುತ್ತದೆ. ❖



---

# 458 ಕಾನ್‌ಸ್ಟೆಬಲ್(ಡ್ರೈವರ್) ಹುದ್ದೆಗಳು

## ಐಟಿಬಿಪಿ

ಮಂಜುನಾಥ ಭದ್ರಶೆಟ್ಟಿ


ಸಾಂದರ್ಭಿಕ ಚಿತ್ರ: ಪಿಟಿಐ

ಕೇಂದ್ರ ಗೃಹ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಇಂಡೊ ಟಿಬೆಟಿಯನ್ ಗಡಿ ಭದ್ರತಾ ಪಡೆಯಲ್ಲಿ (ಐಟಿಬಿಪಿ) ಖಾಲಿ ಇರುವ 458 'ಕಾನ್‌ಸ್ಟೆಬಲ್ ಡ್ರೈವರ್' ಹುದ್ದೆಗಳ ಭರ್ತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಜೂನ್ 27ರಿಂದ ಅರ್ಜಿ ಸಲ್ಲಿಕೆ ಆರಂಭವಾಗಿದೆ. ಜುಲೈ 26ಕ್ಕೆ ಅರ್ಜಿ ಸಲ್ಲಿಸಲು ಕೊನೆ ದಿನ. ಅರ್ಜಿ ಸಲ್ಲಿಕೆ ಹಾಗೂ ಹೆಚ್ಚಿನ ಮಾಹಿತಿಗೆ www.recruitment.itbppolice.nic.in ಜಾಲತಾಣಕ್ಕೆ ಭೇಟಿ ನೀಡಿ. ಇದು ಪುರುಷ ಅಭ್ಯರ್ಥಿಗಳಿಗಷ್ಟೇ ಮೀಸಲಾಗಿರುವ ಹುದ್ದೆಗಳಾಗಿವೆ.

### ವಿದ್ಯಾರ್ಹತೆ ಹಾಗೂ ವಯೋಮಿತಿ

10 ನೇ ತರಗತಿ ಅಥವಾ ಮೆಟ್ರಿಕುಲೇಶನ್ ಪಾಸ್ ಆಗಿರುವ, ಕಡ್ಡಾಯವಾಗಿ ಹೆವಿ ವೆಹಿಕಲ್ ಡ್ರೈವಿಂಗ್ ಲೈಸನ್ಸ್ (ಬೃಹತ್ ವಾಹನ ಚಾಲನಾ ಪರವಾನಗಿ) ಹೊಂದಿರುವವರು ಅರ್ಜಿ ಸಲ್ಲಿಸಬಹುದು.

- ವಯೋಮಿತಿ: ಕನಿಷ್ಠ 21 ವರ್ಷ ಗರಿಷ್ಠ 27 ವರ್ಷ. ಎಸ್.ಸಿ, ಎಸ್.ಟಿ, ಒಬಿಸಿ, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ವಯೋ ಮಿತಿಯಲ್ಲಿ ಸಡಿಲಿಕೆ ಇದೆ.

### ಅರ್ಜಿ ಶುಲ್ಕ, ವೇತನ ಶ್ರೇಣಿ

ಅರ್ಜಿ ಸಲ್ಲಿಸಲು ₹100 ಶುಲ್ಕ ನಿಗದಿಪಡಿಸಲಾಗಿದೆ. ಎಸ್‌ಸಿ, ಎಸ್‌ಟಿ, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಶುಲ್ಕದಲ್ಲಿ ವಿನಾಯಿತಿ ಇದೆ. ವೇತನ ಶ್ರೇಣಿ ₹21,700–69,100 ವರೆಗಿದೆ. ಇದರಲ್ಲಿ ಇಲಾಖೆ ಕಾಲಕಾಲಕ್ಕೆ ನಿಯಮಾನುಸಾರ ಹೆಚ್ಚಿಸುವ ವೇತನ ಇತರೆ ಭತ್ಯೆಗಳು ಸೇರುತ್ತವೆ.

### ನೇಮಕಾತಿ ಹೇಗೆ?

ಈ ನೇಮಕಾತಿಯು ನಾಲ್ಕು ಹಂತಗಳಲ್ಲಿ ನಡೆಯಲಿದೆ. ಕಂಪ್ಯೂಟರ್ ಆಧರಿತ ಪರೀಕ್ಷೆ (ಸಿಬಿಟಿ), ದೈಹಿಕ ಸಾಮರ್ಥ್ಯ ಪರೀಕ್ಷೆ (ಇಟಿ, ಪಿಎಸ್‌ಟಿ), ಪ್ರಾಯೋ ಗಿಕ ಪರೀಕ್ಷೆ ಮತ್ತು ವೈದ್ಯಕೀಯ ಪರೀಕ್ಷೆ ನಡೆಯಲಿದೆ.

ಮೊದಲ ಹಂತದ ಸಿಬಿಟಿಯಲ್ಲಿ 100 ಅಂಕಗಳಿಗೆ ಬಹು ಆಯ್ಕೆಯ 100 ಪ್ರಶ್ನೆಗಳ ಒಂದು ಪತ್ರಿಕೆ ಮಾತ್ರ ಇರುತ್ತದೆ.

ಸಿಬಿಟಿ ಪರೀಕ್ಷೆ ಇಂಗ್ಲಿಷ್, ಹಿಂದಿ ಹಾಗೂ ಕನ್ನಡವೂ ಸೇರಿದಂತೆ 10 ಪ್ರಾದೇಶಿಕ ಭಾಷೆಗಳಲ್ಲಿ ನಡೆಯಲಿದೆ. ಇದು ಸಾಮಾನ್ಯ ಜ್ಞಾನ, ಸಾಮಾನ್ಯ ಗ್ರಹಿಕೆ, ಸಾಮಾನ್ಯ ಗಣಿತದ ಜೊತೆ ಎಸ್‌ಎಸ್‌ಎಲ್‌ಸಿ ಮಟ್ಟದ ಪಠ್ಯಕ್ರಮವನ್ನು ಹೊಂದಿರುತ್ತದೆ. ಇದಕ್ಕಾಗಿ ಆಸಕ್ತರು 5ನೇ ತರಗತಿಯಿಂದ ಎಸ್‌ಎಸ್‌ಎಲ್‌ಸಿವರೆಗಿನ ಪಠ್ಯಗಳನ್ನು ಓದಿಕೊಳ್ಳಬಹುದು. ಜೊತೆಗೆ ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಬಹುದು. ಇದರೊಂದಿಗೆ ಪ್ರಚಲಿತ ಮಾಹಿತಿಗಾಗಿ ದಿನಪತ್ರಿಕೆಗಳನ್ನು ಓದಬೇಕಾಗುತ್ತದೆ.

ದೈಹಿಕ ಸಾಮರ್ಥ್ಯ ಪರೀಕ್ಷೆ, ಡ್ರೈವಿಂಗ್ ಲೈಸನ್ಸ್‌ನ ಪ್ರಾಯೋಗಿಕ ಪರೀಕ್ಷೆ ಹಾಗೂ ವೈದ್ಯಕೀಯ ಪರೀಕ್ಷೆಗಳ ಅರ್ಹತಾ ಮಾನದಂಡಗಳಿಗಾಗಿ ಆಸಕ್ತ ಅಭ್ಯರ್ಥಿಗಳು ಐಟಿಬಿಪಿಯ ಅಧಿಕೃತ ನೇಮಕಾತಿ ಅಧಿಸೂಚನೆಯನ್ನು ನೋಡಬೇಕು. ❖

## ಕೆಇಎ: ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ರಾಜ್ಯದ ವಿವಿಧ ನಿಗಮ, ಮಂಡಳಿಗಳಲ್ಲಿ ಖಾಲಿ ಇರುವ 670 ಹುದ್ದೆಗಳಿಗೆ ನೇರ ನೇಮಕಾತಿ ಪ್ರಕ್ರಿಯೆ ಆರಂಭಿಸಿದೆ.

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (KEONICS) ನಲ್ಲಿ ವಿವಿಧ ಸ್ತರದ ಒಟ್ಟು 26 ಹುದ್ದೆಗಳು, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದಲ್ಲಿ (KFCSC) ಖಾಲಿ ಇರುವ ವಿವಿಧ ಸ್ತರದ ಒಟ್ಟು 386 ಹುದ್ದೆಗಳು, ಕರ್ನಾಟಕ ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ (KARBWWB) ಖಾಲಿ ಇರುವ ವಿವಿಧ ಸ್ತರದ ಒಟ್ಟು 186 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಹಾಗೆಯೇ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ನಲ್ಲಿ (MSIL) ಖಾಲಿ ಇರುವ ವಿವಿದ ಸ್ತರದ ಒಟ್ಟು 72 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಜೂನ್ 23 ರಿಂದ ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದ್ದು, ಜುಲೈ 22 ಕೊನೆ ದಿನ. ಪ್ರತಿ ಹುದ್ದೆಗೂ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳು ಪ್ರತ್ಯೇಕವಾಗಿದ್ದು ಆಸಕ್ತ ಅಭ್ಯರ್ಥಿಗಳು https://cetonline.karnataka.gov.in/kea/karrec23 ವೆಬ್‌ಸೈಟ್‌ಗೆ ಭೇಟಿ ನೀಡಿ ಆಯಾ ಅಧಿಸೂಚನೆಗಳನ್ನು ನೋಡಿಕೊಂಡು ಅರ್ಜಿ ಸಲ್ಲಿಸಬೇಕು.

---

# ಮಾದರಿ ಪ್ರಶ್ನೋತ್ತರಗಳು

**ಆರ್‌ಆರ್‌ಬಿ ನೇಮಕಾತಿ ಪರೀಕ್ಷೆ**

ಪ್ರಾದೇಶಿ ಗ್ರಾಮೀಣ ಬ್ಯಾಂಕ್(ಆರ್‌ಆರ್‌ಬಿ) ಹುದ್ದೆಗಳ ಭರ್ತಿಗಾಗಿ ನಡೆಯುವ ಪರೀಕ್ಷೆಗಳಲ್ಲಿನ ತಾರ್ಕಿಕತೆ (ಲಾಜಿಕಲ್ ರೀಸನಿಂಗ್) ವಿಷಯಕ್ಕೆ ಸಂಬಂಧಪಟ್ಟ ಮಾದರಿ ಪ್ರಶ್ನೋತ್ತರಗಳನ್ನು ನೀಡಲಾಗಿದೆ.

ಆರ್.ಕೆ. ಬಾಲಚಂದ್ರ

ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ (ಆರ್‌ಆರ್‌ಬಿ)ಗಳಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿಗಾಗಿ ಐಬಿಪಿಎಸ್ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಕಳೆದ ಸಂಚಿಕೆಯಲ್ಲಿ ಮಾಹಿತಿ ನೀಡಲಾಗಿತ್ತು.
ಪರೀಕ್ಷೆಗೆ ನಿಗದಿಪಡಿಸಿರುವ ತಾರ್ಕಿಕತೆ (ಲಾಜಿಕಲ್ ರೀಸನಿಂಗ್) ವಿಷಯಕ್ಕೆ ಸಂಬಂಧಿಸಿದಂತೆ ಎರಡು ಮಾದರಿ ಪ್ರಶ್ನೋತ್ತರಗಳನ್ನು ನೀಡಲಾಗಿತ್ತು. ಈ ಸಂಚಿಕೆಯಲ್ಲಿ ಉಳಿದ ವಿಷಯಗಳಿಗೆ ಸಂಬಂಧಿಸಿದ ಒಂದೊಂದು ಮಾದರಿ ಪ್ರಶ್ನೋತ್ತರವನ್ನು ನೀಡಲಾಗಿದೆ.

### 3. ಸಾದೃಶ್ಯಗಳು (Analogies)

1) ದಳ - ಹೂವು : ಈ ಜೋಡಿ ಪದಗಳಿಗೆ ಹೊಂದುವಂತಹ ಕೆಳಗೆ ನೀಡಿರುವ ಯಾವುದಾದರೂ ಜೋಡಿ ಪದವನ್ನು ಗುರುತಿಸಿ

ಎ) ಪೆನ್: ಪೇಪರ್ ಬಿ) ಎಂಜಿನ್: ಕಾರು
ಸಿ) ಬೆಕ್ಕು : ನಾಯಿ ಡಿ) ಚೆಂಡು : ಆಟ

ಉತ್ತರ: ಬಿ

ವಿವರಣೆ: ಹೂವಿನ ಒಂದು ಭಾಗ ದಳವಾಗಿದೆ. ಹಲವಾರು ದಳಗಳು ಸೇರಿ ಒಂದು ಹೂವಾಗಿದೆ. ಅದೇ ರೀತಿಯಲ್ಲಿ, ಕೊಟ್ಟ ಎ ಬಿ ಸಿ ಡಿ ಆಯ್ಕೆಗಳಲ್ಲಿ ಈ ರೀತಿಯ ಒಂದಕ್ಕೊಂದು ಸಂಬಂಧ ಇರುವುದು ಬಿ ಆಯ್ಕೆಯಲ್ಲಿ ಮಾತ್ರ. ಅಂದರೆ ಎಂಜಿನ್, ಕಾರಿನ ಒಂದು ಭಾಗವಾಗಿದೆ. ಪೆನ್ನು-ಪೇಪರ್, ಬೆಕ್ಕು -ನಾಯಿ, ಚೆಂಡು-ಆಟ - ಇವುಗಳಲ್ಲಿ ಯಾವುದೂ ಅಂತರ್ಗತವಾಗಿ ಸಂಬಂಧವಿಲ್ಲ. ಆದ್ದರಿಂದ ಸರಿಯಾದ ಉತ್ತರ ಬಿ ಆಗಿದೆ.

### 4. ಕಾರಣ ಮತ್ತು ಪರಿಣಾಮ (Cause and Effect)

1) ಎರಡು ಹೇಳಿಕೆ ಮತ್ತು ಕಾರಣಗಳನ್ನು ಗಮನಿಸಿ.
I. ನಗರದ ಎಲ್ಲಾ ಕಾಲೇಜುಗಳು ವಾರದಲ್ಲಿ ಮೂರು ದಿನಗಳ ಕಾಲ ಮುಚ್ಚಬೇಕು.
II. ಅನೇಕ ವಿದ್ಯಾರ್ಥಿಗಳು ಸ್ಥಳೀಯ ಕಾಲೇಜುಗಳನ್ನು ತೊರೆದಿದ್ದಾರೆ.

ಎ) ಹೇಳಿಕೆ II ಕಾರಣ ಮತ್ತು ಹೇಳಿಕೆ I ಅದರ ಪರಿಣಾಮವಾಗಿದೆ.
ಬಿ) ಹೇಳಿಕೆ I ಕಾರಣ ಮತ್ತು ಹೇಳಿಕೆ II ಅದರ ಪರಿಣಾಮವಾಗಿದೆ.
ಸಿ) ಎರಡೂ ಹೇಳಿಕೆಗಳು ಸ್ವತಂತ್ರ ಕಾರಣಗಳ ಪರಿಣಾಮಗಳಾಗಿವೆ.
ಡಿ) ಎರಡೂ ಹೇಳಿಕೆಗಳು ಸ್ವತಂತ್ರ ಕಾರಣಗಳಾಗಿವೆ.
ಇ) ಎರಡೂ ಹೇಳಿಕೆಗಳು ಕೆಲವು ಸಾಮಾನ್ಯ ಕಾರಣಗಳ ಪರಿಣಾಮಗಳಾಗಿವೆ

ಉತ್ತರ: ಸಿ

ವಿವರಣೆ: ವಾರದಲ್ಲಿ ಕೆಲವು ದಿನಗಳವರೆಗೆ ಕಾಲೇಜುಗಳನ್ನು ಮುಚ್ಚುವುದು ಮತ್ತು ವಿದ್ಯಾರ್ಥಿಗಳು ಕಾಲೇಜುಗಳನ್ನು ತೊರೆಯುವುದು ಎರಡೂ ಬೇರೆ ಬೇರೆ ಸ್ವತಂತ್ರ ಸಮಸ್ಯೆಗಳಾಗಿವೆ. ಹಾಗಾಗಿ ಸ್ವತಂತ್ರ ಕಾರಣಗಳ ಪರಿಣಾಮಗಳಾಗಿರಬೇಕು ಎಂಬ ಆಯ್ಕೆ ಸರಿಯಾಗಿದೆ.

### 5. ಮೌಖಿಕ ವರ್ಗೀಕರಣ (Verbal Classification)

1) ಯಾವ ಪದವು ಈ ಗುಂಪಿಗೆ ಸೇರಿಲ್ಲ?

ಎ)ಇಂಚು ಬಿ)ಕಿಲೋಗ್ರಾಂ ಸಿ)ಸೆಂಟಿಮೀಟರ್ ಡಿ)ಯಾರ್ಡ್

ಉತ್ತರ: ಬಿ

ವಿವರಣೆ: ಕಿಲೋಗ್ರಾಂ ಅನ್ನು ತೂಕದ ಮಾಪನವಾಗಿ ಅಳೆಯಲು ಬಳಸುವ ಸಾಧನ. ಉಳಿದೆಲ್ಲವು ವಿಸ್ತೀರ್ಣ ಅಳೆಯಲು ಬಳಸಲಾಗುತ್ತದೆ.

### 6. ಪದಗಳ ತಾರ್ಕಿಕ ಅನುಕ್ರಮ (Logical Sequence of Words)

1) ಕೆಳಗಿನ ಪದಗಳನ್ನು ಅರ್ಥಪೂರ್ಣ ಅನುಕ್ರಮದಲ್ಲಿ ಜೋಡಿಸಿ.

1. ಸೋಂಕು 2. ಸಮಾಲೋಚನೆ
3. ವೈದ್ಯರು 4. ಚಿಕಿತ್ಸೆ
5. ಚೇತರಿಕೆ


ಎ) 1, 3, 4, 5, 2 ಬಿ) 1, 3, 2, 4, 5
ಸಿ) 1, 2, 3, 4, 5 ಡಿ) 2, 3, 5, 1, 4

ಉತ್ತರ: ಬಿ

ವಿವರಣೆ: ಪದಗಳ ತಾರ್ಕಿಕ ಅನುಕ್ರಮ ಹೀಗಿರಬೇಕು. ಸೋಂಕು ಮೊದಲು ಸಂಭವಿಸುತ್ತದೆ, ನಂತರ ವೈದ್ಯರನ್ನು ಭೇಟಿ ಮಾಡುತ್ತಾರೆ. ವೈದ್ಯರು ಸಮಾಲೋಚನೆಯ ನಂತರ ಚಿಕಿತ್ಸೆಯನ್ನು ಪ್ರಾರಂಭಿಸುತ್ತಾರೆ. ನಂತರ ಚೇತರಿಕೆಯ ಹಂತ ಪ್ರಾರಂಭವಾಗುತ್ತದೆ.ಇದು ಅರ್ಥಪೂರ್ಣ ಅನುಕ್ರಮವಾಗಿದೆ.

### 7. ಡೈರೆಕ್ಷನ್ ಸೆನ್ಸ್ ಟೆಸ್ಟ್ (Direction Sense Test)

1) ಟಾಮ್ ಎಂಬ ವ್ಯಕ್ತಿ ಪೂರ್ವ ದಿಕ್ಕಿಗೆ ಮುಖ ಮಾಡಿ ನಿಂತಿದ್ದಾನೆ. ಪೀಟರ್ ಎಂಬುವವನು ಟಾಮ್‌ನ ಎದುರಿಗೆ ಪಶ್ಚಿಮ ದಿಕ್ಕಿನೆಡೆಗೆ ಮುಖ ಮಾಡಿ ನಿಂತಿದ್ದಾನೆ. ಜಾನ್ ಎಂಬ ವ್ಯಕ್ತಿ ಟಾಮ್ ನ ಬಲಬದಿಗೆ ದಕ್ಷಿಣ ದಿಕ್ಕಿನಲ್ಲಿ ನಿಂತಿದ್ದಾನೆ. ಮೈಕ್ ಜಾನ್‌ನ ಬಲಬದಿಯಲ್ಲಿ ನಿಂತಿದ್ದಾನೆ. ಹಾಗಾದರೆ ಮೈಕ್ ಪೀಟರ್‌ನ ಯಾವ ದಿಕ್ಕಿನಲ್ಲಿ ನಿಂತಿದ್ದಾನೆ?





ಎ) ಆಗ್ನೇಯ ಬಿ) ನೈಋತ್ಯ
ಸಿ) ದಕ್ಷಿಣ ಡಿ) ಈಶಾನ್ಯ


ಉತ್ತರ: ಬಿ

### 8. ತಾರ್ಕಿಕ ವೆನ್ ರೇಖಾಚಿತ್ರಗಳು (Logical Venn Diagrams)

1) ಕೆಳಗಿನ ಯಾವ ರೇಖಾಚಿತ್ರವು ಸಿಂಹಗಳು, ಆನೆಗಳು ಮತ್ತು ಪ್ರಾಣಿಗಳನ್ನು ಸರಿಯಾಗಿ ಪ್ರತಿನಿಧಿಸುತ್ತದೆ?




ಉತ್ತರ: ಎ




ವಿವರಣೆ: ಸಿಂಹಗಳು ಮತ್ತು ಆನೆಗಳ ನಡುವೆ ಪರಸ್ಪರವಾಗಿ ಯಾವುದೇ ಸಂಬಂಧವನ್ನು ಹೊಂದಿಲ್ಲ, ಆದರೆ ಅವು ಎರಡೂ ಪ್ರಾಣಿಗಳಾಗಿವೆ. ಹಾಗಾಗಿ ಉತ್ತರ ಎ ಸರಿಯಾಗಿದೆ.

### 9. ಹೇಳಿಕೆಯ ಸತ್ಯದ ಪರಿಶೀಲನೆ (Verification of the Truth of the Statement)

1) ಪ್ರಾಣಿ ಯಾವಾಗಲೂ ____________ ಹೊಂದಿದೆ

ಎ) ಚರ್ಮ ಬಿ) ಹೃದಯ ಸಿ) ಶ್ವಾಸಕೋಶಗಳು
ಡಿ) ಜೀವನ
ಇ) ಕಿವಿಗಳು

ಉತ್ತರ: ಡಿ

ವಿವರಣೆ: ಪ್ರಾಣಿ ಜೀವಿಸಿದರೆ ಮಾತ್ರ ಉಳಿದೆಲ್ಲ ಅಂಗಗಳು ಉಪಯೋಗಕ್ಕೆ ಬರುತ್ತದೆ. ಹಾಗಾಗಿ ಜೀವನ ಸರಿಯಾದ ಉತ್ತರ.

(ಮುಂದುವರಿಯುವುದು)

(ಲೇಖಕರು ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

# ಲೋಕಾಯುಕ್ತ ಬಲೆಗೆ 15 ‘ತಿಮಿಂಗಿಲ’ಗಳು

## ಪೌಲ್ಟ್ರಿ ಫಾರ್ಮ್, ಶಾಪಿಂಗ್ ಕಾಂಪ್ಲೆಕ್ಸ್ ಒಡೆಯ!

ಪ್ರಜಾವಾಣಿ ವಾರ್ತೆ

**ಕೋಲಾರ:** ಅಂದಾಜು ₹2 ಕೋಟಿ ಬೆಲೆ ಬಾಳುವ ಶಾಪಿಂಗ್ ಕಾಂಪ್ಲೆಕ್ಸ್, ₹1.20 ಕೋಟಿ ಮೌಲ್ಯದ ಎರಡು ಪೌಲ್ಟ್ರಿ ಎ.ಸಿ ಶೆಡ್, ₹ 25 ಲಕ್ಷ ಮೌಲ್ಯದ ಮನೆ, 700 ಗ್ರಾಂ ಚಿನ್ನ ಹಾಗೂ 650 ಗ್ರಾಂ ಬೆಳ್ಳಿ ಆಭರಣ...

– ತುಮಕೂರಿನಲ್ಲಿ ಕೆಆರ್‌ಐಡಿಎಲ್ ಸಹಾಯಕ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿರುವ ಕೋದಂಡರಾಮಯ್ಯ ಅವರ ಕೋಲಾರದ ಮನೆಯಲ್ಲಿ ಲೋಕಾಯುಕ್ತ ಅಧಿಕಾರಿಗಳಿಗೆ ಸಿಕ್ಕ ಆಸ್ತಿಯ ವಿವರಗಳಿವು.

ಕೋಲಾರದ ಕುವೆಂಪುನಗರದ ಮನೆ, ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಶ್ರೀನಿವಾಸಪುರ ತಾಲ್ಲೂಕಿನ ಲಕ್ಷ್ಮಿಸಾಗರದಲ್ಲಿರುವ ಮನೆ, ಎರಡು ಪೌಲ್ಟ್ರಿ ಫಾರ್ಮ್‌ಗಳ ಮೇಲೆ ಹತ್ತು ಲೋಕಾಯುಕ್ತ ಅಧಿಕಾರಿಗಳ ತಂಡ ಏಕಕಾಲಕ್ಕೆ ದಾಳಿ ನಡೆಸಿತು.



ಕೆಆರ್‌ಐಡಿಎಲ್ ಸಹಾಯಕ ಎಂಜಿನಿಯರ್ ಕೋದಂಡರಾಮಯ್ಯ (ಒಳಚಿತ್ರದಲ್ಲಿರುವವರು) ಅವರ ಕೋಲಾರ ನಿವಾಸ

## ಅಬಕಾರಿ ನಿರೀಕ್ಷಕನಿಗೆ ಎರಡು ಬಂಗಲೆಗಳು

**ಗೌರಿಬಿದನೂರು:** ಸ್ಥಳೀಯ ಅಬಕಾರಿ ನಿರೀಕ್ಷಕ ವಿ.ರಮೇಶ್ ಅವರ ಮನೆ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ಮಾಡಿ ವಿಚಾರಣೆ ನಡೆಸಿದ್ದಾರೆ. ರಮೇಶ್ ವಾಸವಿರುವ ಬೆಂಗಳೂರಿನ ನಾಗರಬಾವಿ, ಯಲಹಂಕ ಮತ್ತು ಗೌರಿಬಿದನೂರು ಮನೆ ಹಾಗೂ ಕಚೇರಿಯ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ, ಸುಮಾರು ₹2.44 ಕೋಟಿ ಬೆಲೆಯ ಆಸ್ತಿಪತ್ರ ಹಾಗೂ ಇತರ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. ಬೆಂಗಳೂರಿನ ನಾಗರಬಾವಿ, ಯಲಹಂಕ ಹಾಗೂ ಗೌರಿಬಿದನೂರು ನಗರದ ಅವರ ಮನೆಗಳಲ್ಲಿ ಅಧಿಕಾರಿಗಳು ಬುಧವಾರ ಸಂಜೆಯವರೆಗೂ ಶೋಧ ಕಾರ್ಯಾಚರಣೆ ನಡೆಸಿದ್ದಾರೆ.



ವಿ.ರಮೇಶ್

## ಅಮೆರಿಕ ಆಮೆ, 30 ವ್ಯಾನಿಟಿ ಬ್ಯಾಗ್ ಪತ್ತೆ

ಪ್ರಜಾವಾಣಿ ವಾರ್ತೆ


**ಬಾಗಲಕೋಟೆ:** ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಚೇತನಾ ಪಾಟೀಲ ಅವರ ಅಕ್ಕಿಮರಡಿ ಕಾಲೊನಿಯಲ್ಲಿರುವ ಮನೆಯಲ್ಲಿ ವಿವಿಧ ಬ್ರ್ಯಾಂಡ್‌ನ 30ಕ್ಕೂ ಹೆಚ್ಚು ವ್ಯಾನಿಟಿ ಬ್ಯಾಗ್, ವಿದೇಶಿ ತಳಿಯ ಎರಡು ಆಮೆಗಳು, ಅರ್ಧ ಕೆ.ಜಿ ಚಿನ್ನ, ಒಂದೂವರೆ ಕೆ.ಜಿ ಬೆಳ್ಳಿ, ₹24.82 ಲಕ್ಷ ನಗದು, ಬಾಗಲಕೋಟೆ, ಬೆಳಗಾವಿಯಲ್ಲಿ ನಿವೇಶನದ ದಾಖಲೆ ಪತ್ರಗಳು ಲೋಕಾಯುಕ್ತ ದಾಳಿ ವೇಳೆ ಪತ್ತೆಯಾಗಿವೆ.

‘ಅಮೆರಿಕದಲ್ಲಿ ಸಾಕಲಾಗುವ ‘ರೆಡ್ ಇಯರ್ಡ್ ಸ್ಲೈಡರ್’ ತಳಿಯ ಎರಡು ಆಮೆಗಳನ್ನು ಹುಬ್ಬಳ್ಳಿಯಲ್ಲಿ 5 ವರ್ಷಗಳ ಹಿಂದೆ ಖರೀದಿಸಿದ್ದರು. ಇದನ್ನು ಸಾಕಿದರೆ ಸಂಪತ್ತು ಹೆಚ್ಚಾಗುತ್ತದೆ ಎಂಬ ನಂಬಿಕೆಯಿಂದ ಸಾಕಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಈ ಆಮೆಗಳು ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಬರುವುದಿಲ್ಲ. ಆದರೆ, ವಿದೇಶದಿಂದ ಆಮೆಗಳನ್ನು ತರಿಸಿದಾಗ ಆನ್‌ಲೈನ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸಬೇಕು. ಈ ಬಗ್ಗೆ ದಾಖಲೆ ಕೇಳಲಾಗಿದೆ’ ಎಂದು ವಲಯ ಅರಣ್ಯಾಧಿಕಾರಿ ಗುಂಡು ಸಿಂಗ್ ತಿಳಿಸಿದರು.

‘ಸೀರೆ, ಚೂಡಿದಾರ ಬಣ್ಣಕ್ಕೆ ಹೊಂದಾಣಿಕೆಯಾಗುವ ವಿವಿಧ ಬಗೆಯ 30ಕ್ಕೂ ಹೆಚ್ಚು ವ್ಯಾನಿಟಿ ಬ್ಯಾಗ್‌ಗಳು ಪತ್ತೆಯಾಗಿವೆ. ತಾವು ಧರಿಸಿದ ಬಣ್ಣದ ಉಡುಪಿಗೆ ತಕ್ಕಂತೆ ಮ್ಯಾಚಿಂಗ್ ಆಗುವ ಬ್ಯಾಗ್ ಬಳಸುತ್ತಿದ್ದರು ಎಂಬುದು ಗೊತ್ತಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಕೃಷಿ ಇಲಾಖೆಯ ಬೀಳಗಿ ತಾಲ್ಲೂಕಿನ ಸಹಾಯಕ ನಿರ್ದೇಶಕ ಕೃಷ್ಣ ಶಿರೂರ ಅವರ ವಿದ್ಯಾಗಿರಿಯಲ್ಲಿರುವ ಮನೆ ಮೇಲೆ ದಾಳಿ ನಡೆಸಿದ ವೇಳೆ ₹3.50 ಲಕ್ಷ ನಗದು, 300 ಗ್ರಾಂ ಚಿನ್ನ, ಆರು ನಿವೇಶನದ ದಾಖಲೆಗಳು ಸಿಕ್ಕಿವೆ. ಬ್ರಿಜಾ, ಇನ್ನೊವಾ ವಾಹನ ಹೊಂದಿದ್ದಾರೆ’ ಎಂದು ಅವರು ಹೇಳಿದರು.





ಬಾಗಲಕೋಟೆ ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಚೇತನಾ ಪಾಟೀಲ ಮನೆಯಲ್ಲಿ ದೊರೆತಿರುವ ವ್ಯಾನಿಟಿ ಬ್ಯಾಗ್‌ಗಳು ಹಾಗೂ ರೆಡ್ ಇಯರ್ಡ್ ಸ್ಲೈಡರ್ ಆಮೆ



ಜೆ.ಪಿ.ಶೆಟ್ಟಿ



ಚೇತನಾ ಪಾಟೀಲ



ಕೃಷ್ಣ ಶಿರೂರ



ಭೀಮನಗೌಡ ಬಿರಾದಾರ



ಶೇಖರ ಬಹುರೂಪಿ

## ಜೆಸ್ಕಾಂ ಎಂಜಿನಿಯರ್‌ಗೆ 3 ಅಂತಸ್ತಿನ ಐಶಾರಾಮಿ ಮನೆ

**ಬೆಳಗಾವಿ/ಹಗರಿಬೊಮ್ಮನಹಳ್ಳಿ:** ಜೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ಶೇಖರ ಬಹುರೂಪಿ ಅವರ ರಾಮತೀರ್ಥನಗರದ ಮೂರು ಅಂತಸ್ತಿನ ಐಶಾರಾಮಿ ಮನೆ, ಅವರ ಸಹೋದರನ ಮನೆ ಹಾಗೂ ಅಥಣಿ ತಾಲ್ಲೂಕಿನ ಸಂಕೋನಟ್ಟಿ ಗ್ರಾಮದಲ್ಲಿರುವ ಮನೆ, ಪ್ರಸ್ತುತ ಅವರು ಕೆಲಸ ನಿರ್ವಹಿಸುತ್ತಿರುವ ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿಯ ಜೆಸ್ಕಾಂ ವಿಭಾಗೀಯ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದರು.

6 ತಿಂಗಳಿನಿಂದ ಶೇಖರ ಹಗರಿಬೊಮ್ಮನಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದು, ಇದಕ್ಕೂ ಮುನ್ನ ಹೆಸ್ಕಾಂ ಚಿಕ್ಕೋಡಿ ಉಪವಿಭಾಗದಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿದ್ದರು. 2019ರ ಪ್ರವಾಹ ಸಂದರ್ಭದಲ್ಲಿ ರೈತರಿಗೆ ಹಾಗೂ ಗ್ರಾಮಸ್ಥರಿಗೆ ಪ್ರವಾಹ ಪರಿಹಾರ ವಿತರಣೆಯಲ್ಲಿ ಅಕ್ರಮ ಎಸಗಿದ ಆರೋಪದ ಮೇಲೆ ಶೇಖರ ಅಮಾನತುಗೊಂಡಿದ್ದರು.

₹86 ಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಆಗ ಹೆಸ್ಕಾಂನ ಐವರು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸೇರಿ 20 ಸಿಬ್ಬಂದಿ ಅಮಾನತು ಮಾಡಲಾಗಿತ್ತು.

## ಸಹಾಯಕ ಎಂಜಿನಿಯರ್ ಬಳಿ ಚಿನ್ನಾಭರಣ, ವಿಲಾಸಿ ಕಾರು

**ವಿಜಯಪುರ:** ‘ಮುದ್ದೇಬಿಹಾಳ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಸಹಾಯಕ ಎಂಜಿನಿಯರ್ ಜೆ.ಪಿ.ಶೆಟ್ಟಿ ಅವರಿಗೆ ಸೇರಿದ ಬಾಗಲಕೋಟೆ ಜಿಲ್ಲೆಯ ಮುಧೋಳ ಪಟ್ಟಣದಲ್ಲಿರುವ ಮನೆಯಲ್ಲಿ 1,250 ಗ್ರಾಂ ಚಿನ್ನ, ₹30 ಸಾವಿರ ನಗದು, ಆರು ನಿವೇಶನ, ಎರಡು ಮಹಡಿ ಮನೆ ಹಾಗೂ ವಿಜಯಪುರ ನಗರದಲ್ಲಿ ವಿಲಾಸಿ ಕಾರು ಪತ್ತೆಯಾಗಿದೆ’ ಎಂದು ವಿಜಯಪುರ ಲೋಕಾಯುಕ್ತ ಎಸ್.ಪಿ.ಅನಿತಾ ಹದ್ದಣ್ಣವರ ತಿಳಿಸಿದ್ದಾರೆ.

‘ಪ್ರಭಾರ ಎಇಇ ಭೀಮನಗೌಡ ಬಿರಾದಾರ ಅವರ ವಿಜಯಪುರ ನಗರದ ಆರ್‌ಟಿಒ ಕಚೇರಿ ಹಿಂಬದಿ ಇರುವ ಮನೆ ಪರಿಶೀಲಿಸಿದಾಗ 242 ಗ್ರಾಂ ಚಿನ್ನ, 1.98 ಕೆ.ಜಿ ಬೆಳ್ಳಿ ಸಾಮಾನು, ₹1.78 ಲಕ್ಷ ನಗದು, ₹30 ಲಕ್ಷ ಮೊತ್ತದ ಷೇರು ಪತ್ರ, ₹ 5 ಲಕ್ಷ ಬ್ಯಾಂಕ್ ಠೇವಣಿ, ₹ 6.5 ಲಕ್ಷ ಮೊತ್ತದ ಟ್ರ್ಯಾಕ್ಟರ್, ಎರಡು ಗುಂಟೆ ಜಾಗ ಇರುವುದು ಪತ್ತೆಯಾಗಿದೆ’ ಎಂದು ಹೇಳಿದ್ದಾರೆ.



ಚಿಕ್ಕಮಗಳೂರಿನಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ್ದ ನಿರ್ಮಾಣ ಹಂತದ ರೆಸಾರ್ಟ್

## ನಿರ್ಮಿತಿ ಕೇಂದ್ರದ ವ್ಯವಸ್ಥಾಪಕ 16 ನಿವೇಶನ ಮಾಲೀಕ

ಪ್ರಜಾವಾಣಿ ವಾರ್ತೆ

**ಚಿಕ್ಕಮಗಳೂರು:** ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ವೈ. ಗಂಗಾಧರ ಅವರು ಎರಡು ಮನೆ, 16 ನಿವೇಶನಗಳಿಗೆ ಮಾಲೀಕ. ಒಂದು ಪೆಟ್ರೋಲ್ ಬಂಕ್, ರೆಸಾರ್ಟ್‌ನಲ್ಲಿ ಪಾಲುದಾರಿಕೆಯನ್ನೂ ಅವರ ಪತ್ನಿ ಹೆಸರಿನಲ್ಲಿ ಹೊಂದಿದ್ದಾರೆ.



ವೈ.ಗಂಗಾಧರ

ಆದಾಯ ಮೀರಿ ₹3.50 ಕೋಟಿ ಆಸ್ತಿ ಗಳಿಸಿರುವ ದಾಖಲೆಗಳು ಪತ್ತೆಯಾಗಿವೆ. ನಗರದ ಹಲವೆಡೆ ನಿವೇಶನ ಮತ್ತು ಮನೆಗಳನ್ನು ಹೊಂದಿದ್ದಾರೆ. ಪತ್ನಿ ಹೆಸರಿನಲ್ಲಿ ರಾಮನಹಳ್ಳಿಯಲ್ಲಿ ಪೆಟ್ರೋಲ್ ಬಂಕ್ ಮತ್ತು ಅಲ್ಲಂಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಹುಲಿಯಾರಹಳ್ಳಿ ಸಮೀಪದ ನಿರ್ಮಾಣ ಹಂತದ ರೆಸಾರ್ಟ್‌ನಲ್ಲಿ ಶೇ 35ರಷ್ಟು ಪಾಲುದಾರಿಕೆ ಹೊಂದಿದ್ದಾರೆ ಎಂದು ಲೋಕಾಯುಕ್ತ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜಯನಗರದಲ್ಲಿನ ಮನೆ, ರಾಮನಹಳ್ಳಿಯಲ್ಲಿ ಇರುವ ಪೆಟ್ರೋಲ್ ಬಂಕ್, ನಿರ್ಮಾಣ ಹಂತದ ರೆಸಾರ್ಟ್ ಮತ್ತು ನಿರ್ಮಿತಿ ಕೇಂದ್ರದ ಮೇಲೆ ಲೋಕಾಯುಕ್ತ ಅಧಿಕಾರಿಗಳು ಬುಧವಾರ ಬೆಳಿಗ್ಗೆ ದಾಳಿ ನಡೆಸಿದ್ದರು.

## ನಗದು, ಚಿನ್ನಾಭರಣ, ಆಸ್ತಿ ದಾಖಲೆ ಪತ್ರ ವಶ

ಪ್ರಜಾವಾಣಿ ವಾರ್ತೆ

**ರಾಯಚೂರು/ಕಲಬುರಗಿ/ಯಾದಗಿರಿ:** ಸಿಂಧನೂರು ನಗರ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶರಣಪ್ಪ ಮಡಿವಾಳ ಅವರ ಬಾಡಿಗೆ ಮನೆ, ಕಲಬುರಗಿಯಲ್ಲಿ ಫಾರ್ಮ್‌ಹೌಸ್ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಅಧಿಕಾರಿಗಳು ಅಪಾರ ಮೌಲ್ಯದ ನಗದು ಹಾಗೂ ಆಸ್ತಿ ದಾಖಲೆ ಪತ್ರಗಳನ್ನು ವಶಕ್ಕೆ ಪಡೆದಿದ್ದಾರೆ.

ಸಿಂಧನೂರಿನಲ್ಲಿದ್ದ ಬಾಡಿಗೆ ಮನೆ ಹಾಗೂ ಕಚೇರಿಯ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಅಧಿಕಾರಿಗಳು ₹13 ಲಕ್ಷ ನಗದು, 1 ಕೆ.ಜಿ ಚಿನ್ನ, 2 ಕೆಜಿ ಬೆಳ್ಳಿ ಆಭರಣ ಹಾಗೂ ಆಸ್ತಿಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಶರಣಪ್ಪ ಅವರು ಖಣದಾಳ ಗ್ರಾಮದಲ್ಲಿ ₹32.75 ಲಕ್ಷ ಮೌಲ್ಯದ 10 ಎಕರೆ ತೋಟ, ₹12.30 ಲಕ್ಷ ಮೌಲ್ಯದ 3 ಎಕರೆ, ₹6.25 ಲಕ್ಷ ಮೌಲ್ಯದ 1.27 ಎಕರೆ ಜಮೀನು ಹಾಗೂ ಆಳಂದ ತಾಲ್ಲೂಕಿನ ಮುನ್ನಳ್ಳಿ ಗ್ರಾಮದಲ್ಲೂ 3 ಎಕರೆ ಜಮೀನು ಹೊಂದಿದ್ದಾರೆ. ತೋಟದಲ್ಲಿ ₹70 ಲಕ್ಷ ಮೌಲ್ಯದ ಮನೆ ನಿರ್ಮಿಸಿಕೊಂಡಿದ್ದಾರೆ ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

₹10 ಲಕ್ಷ ಮೌಲ್ಯದ ಮಹೇಂದ್ರ ಬುಲೆರೊ, ₹2.30 ಲಕ್ಷ ಮೌಲ್ಯದ ಎರಡು ದ್ವಿಚಕ್ರ ವಾಹನಗಳು, ₹10 ಲಕ್ಷ ನಗದು, ₹ 15 ಲಕ್ಷ ಮೌಲ್ಯದ ಬೆಳ್ಳಿ, ₹ 1 ಲಕ್ಷ ಮೌಲ್ಯದ ಸಾಮಾಗ್ರಿ ಪತ್ತೆಯಾಗಿವೆ.

ನಗರದ ಉದನೂರ ಗ್ರಾಮದಲ್ಲಿ ₹11 ಲಕ್ಷ ಮೌಲ್ಯದ 3 ನಿವೇಶನಗಳು, ಐಯ್ಯರವಾಡಿ ಆಸೀಫ್ ಗಂಜ್ ವಾರ್ಡ್‌ನಲ್ಲಿ ₹2.45 ಲಕ್ಷ ಮೌಲ್ಯದ ಮನೆ, ₹10 ಲಕ್ಷ ಮೌಲ್ಯದ ಚಿನ್ನಾಭರಣ, ₹4 ಲಕ್ಷದ ಕೃಷಿ ಯಂತ್ರೋಪಕರಣಗಳು, ₹12 ಲಕ್ಷ ಮೌಲ್ಯದ ಟ್ರ್ಯಾಕ್ಟರ್ ಮತ್ತು ಟ್ರಾಲಿ ಸೇರಿ ದಾಳಿ ವೇಳೆ ಒಟ್ಟು ₹2.59 ಕೋಟಿ ಮೌಲ್ಯದ ಸ್ಥಿರ ಹಾಗೂ ಚರಾಸ್ತಿ ಪತ್ತೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

**ಎಇಇ ಮನೆ ಮೇಲೆ ದಾಳಿ:** ರಾಯಚೂರಿನಲ್ಲಿ ಲೋಕೋಪಯೋಗಿ ಇಲಾಖೆಯ ಎಇಇ ಜಿ.ಎನ್. ಪ್ರಕಾಶ ಅವರ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಆದಾಯಕ್ಕಿಂತ ಹೆಚ್ಚು ಆಸ್ತಿ ಸಂಪಾದನೆ ಮಾಡಿರುವುದನ್ನು ಪತ್ತೆ ಮಾಡಿದ್ದಾರೆ. ಪ್ರಕಾಶ ಮನೆಯಲ್ಲಿ ನಗದು, ಚಿನ್ನಾಭರಣ ದೊರಕಿದೆ. ಅವರ ಪುತ್ರ ಅಕ್ಷಯ ಹೆಸರಿನಲ್ಲಿ 14 ಎಕರೆ ಮಾವಿನ ತೋಟ ಇರುವುದು ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**₹ 2.40 ಕೋಟಿ ಆಸ್ತಿ ಪತ್ತೆ:** ಯಾದಗಿರಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವಿಶ್ವನಾಥ ರೆಡ್ಡಿ ಅವರ ಕಚೇರಿ ಮತ್ತು ಮನೆಯ ಮೇಲೆ ದಾಳಿ ಮಾಡಿದ ಅಧಿಕಾರಿಗಳು ಅಂದಾಜು ₹ 2.40 ಕೋಟಿ ಮೌಲ್ಯದ ಆಸ್ತಿ ಪತ್ತೆ ಮಾಡಿದ್ದಾರೆ.

ಯಾದಗಿರಿ ನಗರದ ಗ್ರೀನ್ ಸಿಟಿ ಕಾಲೊನಿಯಲ್ಲಿ ನಿರ್ಮಿಸಿರುವ ಭವ್ಯ ಬಂಗಲೆ (₹1 ಕೋಟಿ), ಯಾದಗಿರಿ ನಗರದಲ್ಲಿ 3 ನಿವೇಶನಗಳು (₹ 8 ಲಕ್ಷ), ರಾಯಚೂರಿನಲ್ಲಿ 1 ನಿವೇಶನ, ಚಿತ್ತಾಪುರ ಗ್ರಾಮದಲ್ಲಿ 16.27ಎಕರೆ ಕೃಷಿ ಜಮೀನು (₹ 60 ಲಕ್ಷ), ಯಾದಗಿರಿ ಜಿಲ್ಲೆಯ ನಾಯ್ಕಲ್ ಗ್ರಾಮದಲ್ಲಿ 6 ಎಕರೆ ಕೃಷಿ ಜಮೀನು, ₹8.50 ಲಕ್ಷ ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣಗಳು ಪತ್ತೆಯಾಗಿವೆ.



ಶರಣಪ್ಪ ಮಡಿವಾಳ



ಪ್ರಕಾಶ



ವಿಶ್ವನಾಥ ರೆಡ್ಡಿ



ಕೊಡಗು ಜಿಲ್ಲಾ ಪಂಚಾಯಿತಿಯ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಎಫ್‌ಡಿಎ ಮಹಮ್ಮದ್ ಬಷೀರ್ ಅವರ ಮನೆಯಲ್ಲಿ ಸಿಕ್ಕ ನಗದು

## ಎಫ್‌ಡಿಎ ಬಳಿ ಅಪಾರ ನಗದು, ಅರ್ಧ ಕೆ.ಜಿ. ಚಿನ್ನಾಭರಣ

**ಮಡಿಕೇರಿ:** ಕೊಡಗು ಜಿಲ್ಲಾ ಪಂಚಾಯಿತಿಯ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಪ್ರಥಮ ದರ್ಜೆ ಲೆಕ್ಕ ಸಹಾಯಕ (ಎಫ್‌ಡಿಎ) ಪಿ.ಎಂ.ಅಬ್ದುಲ್ ಬಷೀರ್ ಅವರ ಕುಶಾಲನಗರದ ಗೊಂದಿಬಸವನಹಳ್ಳಿ ಮನೆ, ಅವರ ಸೋದರ ಮಹಮ್ಮದ್ ಅವರ ನಿವಾಸ ಹಾಗೂ ಕಚೇರಿ ಮೇಲೆ ಬುಧವಾರ ಲೋಕಾಯುಕ್ತ ಪೊಲೀಸರು ಏಕಕಾಲಕ್ಕೆ ದಾಳಿ ನಡೆಸಿ, ಲಕ್ಷಾಂತರ ರೂಪಾಯಿ ಹಣ, ಚಿನ್ನಾಭರಣ ಪತ್ತೆ ಹಚ್ಚಿದ್ದಾರೆ.



ಮಹಮ್ಮದ್ ಬಷೀರ್

ಅಬ್ದುಲ್ ಬಷೀರ್ ಮನೆಯಲ್ಲಿ ₹14 ಲಕ್ಷ ನಗದು ಹಾಗೂ ಬ್ಯಾಂಕ್ ಖಾತೆಯಲ್ಲಿ ₹ 23 ಲಕ್ಷ ಹಣ, ಮನೆಯಲ್ಲಿ ಅರ್ಧ ಕೆ.ಜಿ ಚಿನ್ನ, 2 ನಿವೇಶನ, ಒಂದು ಮನೆಯ ದಾಖಲೆ ಹಾಗೂ 2 ಕಾರುಗಳನ್ನು ಲೋಕಾಯುಕ್ತ ಪೊಲೀಸರ ತಂಡ ಪತ್ತೆ ಮಾಡಿದೆ. ಒಟ್ಟು ಆಸ್ತಿ ಮೌಲ್ಯ ₹ 1.4 ಕೋಟಿ ಎಂದು ಅಂದಾಜು ಮಾಡಲಾಗಿದೆ.

‘ಅವರ ಸಹೋದರ ಮಹಮ್ಮದ್ ಅವರ ನಾಪೋಕ್ಲುವಿನ ನಿವಾಸ ಹಾಗೂ ಅಬ್ದುಲ್ ಬಷೀರ್ ಅವರ ಕಚೇರಿಯಲ್ಲಿ ಶೋಧ ಕಾರ್ಯ ನಡೆಸಲಾಯಿತಾದರೂ, ಅಲ್ಲೇನೂ ಸಿಗಲಿಲ್ಲ’ ಎಂದು ಪೊಲೀಸರು ಹೇಳಿದ್ದಾರೆ.

## ಈ ಅಧಿಕಾರಿಗಳು ಕೋಟಿ ಕುಳಗಳು

ಪ್ರಜಾವಾಣಿ ವಾರ್ತೆ

**ತುಮಕೂರು:** ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಎಚ್. ರವಿ, ಪಂಚಾಯತ್ ರಾಜ್ ಎಂಜಿನಿಯರಿಂಗ್ ಶಿರಾ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕೆ.ವಿ.ಪುಟ್ಟರಾಜು ಅವರ ಬಳಿ ಅಪಾರ ಪ್ರಮಾಣದ ಆಸ್ತಿ ಪತ್ತೆಯಾಗಿದೆ.

ಎಂಜಿನಿಯರ್ ಪುಟ್ಟರಾಜು ಅವರ ಅಶೋಕ ನಗರದ ಮನೆ, ಯಲ್ಲಾಪುರದಲ್ಲಿರುವ ವಾಣಿಜ್ಯ ಮಳಿಗೆ, ಶಿರಾ ಮನೆ ಮೇಲೆ ದಾಳಿ ಮಾಡಲಾಗಿದೆ. ಇವರು ಮೂಲತಃ ಭದ್ರಾವತಿಯವರಾಗಿದ್ದು, ಅಲ್ಲಿಯ ಮನೆಯಲ್ಲಿಯೂ ಅಧಿಕಾರಿಗಳು ದಾಖಲೆಗಳಿಗಾಗಿ ಜಾಲಾಡುತ್ತಿದ್ದಾರೆ. ಈವರೆಗೆ ಒಟ್ಟು ₹2.37 ಕೋಟಿ ಮೊತ್ತದ ಚರ ಮತ್ತು ಸ್ಥಿರಾಸ್ತಿ ಪತ್ತೆಯಾಗಿದೆ.

₹65.08 ಲಕ್ಷ ಮೌಲ್ಯದ 1 ಕೆ.ಜಿ 213 ಗ್ರಾಂ ಚಿನ್ನ, ₹5.70 ಲಕ್ಷ ಮೌಲ್ಯದ 8 ಕೆ.ಜಿ ಬೆಳ್ಳಿ ಸಾಮಗ್ರಿ, ₹10 ಲಕ್ಷ ಮೊತ್ತದ ಗೃಹೋಪಯೋಗಿ ವಸ್ತು, ₹43 ಸಾವಿರ ನಗದು, ಬ್ಯಾಂಕ್ ಖಾತೆಯಲ್ಲಿ ₹3.51 ಲಕ್ಷ, ಒಂದು ಕಾರು ಮತ್ತು ಬೈಕ್ ಪುಟ್ಟರಾಜು ಮನೆಯಲ್ಲಿ ಪತ್ತೆಯಾಗಿವೆ.

ಇದಷ್ಟೇ ಅಲ್ಲ, ಅಶೋಕ ನಗರದಲ್ಲಿ ₹66.60 ಲಕ್ಷ ಮೌಲ್ಯದ ಮನೆ, ಯಲ್ಲಾಪುರದಲ್ಲಿ ₹80.68 ಲಕ್ಷ ಮೊತ್ತದ ವಾಣಿಜ್ಯ ಕಟ್ಟಡ, ಯಲ್ಲಾಪುರದಲ್ಲಿ ₹3.48 ಲಕ್ಷ ಬೆಲೆ ಬಾಳುವ ನಿವೇಶನದ ದಾಖಲೆ ಪತ್ರಗಳು ಸಹ ಸಿಕ್ಕಿವೆ.

ರಾತ್ರಿಯೂ ಮುಂದುವರೆದ ಶೋಧ: ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಎಚ್.ರವಿ ವಾಸವಿದ್ದ ನಗರದ ಆರ್.ಟಿ.ನಗರದ ಮನೆ ಮೇಲೆ ದಾಳಿ ನಡೆಸಿರುವ ರಾಮನಗರ ಅಧಿಕಾರಿಗಳು ರಾತ್ರಿಯೂ ಶೋಧ ಕಾರ್ಯಾಚರಣೆ ಮುಂದುವರಿಸಿದ್ದಾರೆ. ಈವರೆಗೆ ಸುಮಾರು ₹4.27 ಕೋಟಿ ಮೊತ್ತದ ಆಸ್ತಿ ಪತ್ತೆಯಾಗಿದೆ.



ಕೆ.ಎಚ್‌.ರವಿ



ಕೆ.ವಿ.ಪುಟ್ಟರಾಜು

ರಾಮನಗರ ವರದಿ: ಇಲ್ಲಿಯ ಶಾಂತಿಲಾಲ್ ಬಡಾವಣೆಯಲ್ಲಿರುವ ರವಿ ಅವರ ಮನೆ ಹಾಗೂ ಸಿಲ್ಕ್ ಫ್ಯಾಕ್ಟರಿಯಿಂದ ಲೋಕಾಯುಕ್ತ ಪೊಲೀಸರು ಆಸ್ತಿ ಪತ್ರ, ನಗದು ಸೇರಿದಂತೆ ಕೆಲವು ದಾಖಲೆ ವಶಪಡಿಸಿಕೊಂಡಿದ್ದಾರೆ.

ಹಾರೋಹಳ್ಳಿ ತಾಲ್ಲೂಕು ಮತ್ತಿಕುಂಟೆ ಗ್ರಾಮದ ಬಳಿ ಇರುವ ಗೋಲ್ಡನ್ ಟ್ರೇಡ್ ಸಿಲ್ಕ್ ಫ್ಯಾಕ್ಟರಿ, ಸ್ವಗ್ರಾಮ ಮಾಗಡಿ ತಾಲ್ಲೂಕು ಕಾಂಚಿದೊಡ್ಡಿಯ ಮನೆಯಲ್ಲಿ ತಪಾಸಣೆ ವೇಳೆ ಆಸ್ತಿ ಪತ್ರ, ಚಿನ್ನಾಭರಣ, ನಗದು, ಇತರೆ ದಾಖಲೆ ಪತ್ತೆಯಾಗಿವೆ. ಸ್ವಲ್ಪ ಪ್ರಮಾಣದ ನಗದು ಪತ್ತೆಯಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

## ನೂತನ ಶಾಸಕರಿಗೆ ಕಲಾಪಗಳಲ್ಲಿ ಮನ್ನಣೆ: ಖಾದರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೊಸದಾಗಿ ಆಯ್ಕೆಯಾದ ಶಾಸಕರು ಜುಲೈ 3ರಿಂದ ಆರಂಭವಾಗುವ ಸದನದ ಕಲಾಪಗಳಲ್ಲಿ ಶಿಸ್ತಿನ ಪ್ರತಿಭಾವಂತ ವಿದ್ಯಾರ್ಥಿಗಳಂತೆ ಭಾಗಿಯಾಗಬೇಕು. ಇಚ್ಛಿಸುವವರಿಗೆ ಮಾತನಾಡಲು ಹೆಚ್ಚಿನ ಅವಕಾಶ ನೀಡಲಾಗುವುದು ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ನೆಲಮಂಗಲದ ಎಸ್‌ಡಿಎಂ ಕ್ಷೇಮವನದಲ್ಲಿ ಮೂರು ದಿನಗಳು ಹಮ್ಮಿಕೊಂಡಿದ್ದ ವಿಧಾನಸಭೆಗೆ ಹೊಸದಾಗಿ ಆಯ್ಕೆಯಾದ ಸದಸ್ಯರಿಗೆ ಹಮ್ಮಿಕೊಂಡಿದ್ದ ತರಬೇತಿ ಶಿಬಿರದ ಸಮಾರೋಪದಲ್ಲಿ ಎಲ್ಲ ಶಾಸಕರನ್ನೂ ಸನ್ಮಾನಿಸಿ ಅವರು ಮಾತನಾಡಿದರು.

ಆರಂಭದಲ್ಲಿ ಕಲಾಪಗಳನ್ನು ತನ್ಮಯತೆಯಿಂದ ವೀಕ್ಷಿಸಬೇಕು. ಅಲ್ಲಿ ನಡೆಯುವ ಚರ್ಚೆಗಳಲ್ಲಿ ಭಾಗವಹಿಸಬೇಕು. ವಿಷಯಗಳನ್ನು ಖಚಿತವಾಗಿ ತಿಳಿದುಕೊಂಡು ಪ್ರತಿಕ್ರಿಯಿಸಬೇಕು. ಅನಗತ್ಯ ಗೈರುಹಾಜರಾಗಬಾರದು ಎಂದರು.

ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ, ಶಾಸಕರಾದವರು ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕು. ಕಾರ್ಯಾಂಗ, ನ್ಯಾಯಾಂಗದ ಜತೆ ಸಮನ್ವಯತೆಯಿಂದ ಕೆಲಸ ಮಾಡಬೇಕು. ನೈತಿಕ ಮೌಲ್ಯಗಳನ್ನು ಪಾಲಿಸಬೇಕು ಎಂದು ಹೇಳಿದರು.

ನಟ ‘ಮುಖ್ಯಮಂತ್ರಿ’ ಚಂದ್ರು, ಶಾಸನಸಭೆಗಳಲ್ಲಿ ಭಾಗವಹಿಸುವ ಸದಸ್ಯರಿಗೆ ವಿಷಯಗಳಲ್ಲಿ ಖಚಿತತೆ ಇರಬೇಕು. ವಿಷಯ ಪ್ರಸ್ತುತಿ, ಮಾತಿನಲ್ಲಿ ಗಂಭೀರತೆಯ ಜತೆಗೆ ಹಾಸ್ಯ ಪ್ರಜ್ಞೆ ಬಳಸಬೇಕು. ಹಿರಿಯರಿಗೆ ಗೌರವ ನೀಡಬೇಕು. ಉತ್ತಮ ನಡವಳಿಕೆ, ನಗು, ಶುದ್ಧ ಭಾಷೆ, ಭಾಷೆಯ ಮೇಲೆ ಹಿಡಿತ ಇರಬೇಕು ಎಂದರು.

ದೆಹಲಿಯ ಪಿ.ಆರ್.ಎಸ್. ಸಂಸ್ಥೆ ಪ್ರತಿನಿಧಿ ಚಕ್ಷುರಾಯ್, ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಿಕೆ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಜವಾಬ್ದಾರಿ ಅರಿತು ಜನರ ಕೆಲಸ ಮಾಡಬೇಕು ಎಂದು ಹೇಳಿದರು.

## 62 ಕಡೆ ‘ಲೋಕಾ’ ಶೋಧ; ₹1 ಕೋಟಿ ನಗದು ಪತ್ತೆ

ಒಂದನೇ ಪುಟದಿಂದ...

ಮಡಿಕೇರಿಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಪ್ರಥಮ ದರ್ಜೆ ಸಹಾಯಕ ಪಿ.ಎಂ. ಅಬ್ದುಲ್ ಬಶೀರ್ ಹಾಗೂ ಸಿಂಧನೂರಿನ ನಗರ ಯೋಜನಾ ಇಲಾಖೆ ಸಹಾಯಕ ನಿರ್ದೇಶಕ ಶರಣಪ್ಪ ಮನೆಯಲ್ಲಿ ತಲಾ ₹ 14 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

**ಕೃಷಿ ಇಲಾಖೆಯವರೇ ಹೆಚ್ಚು:** ಕೃಷಿ ಇಲಾಖೆಯ ಮೂವರು ಅಧಿಕಾರಿಗಳ ಮೇಲೆ ಲೋಕಾಯುಕ್ತ ಪೊಲೀಸರ ದಾಳಿ ನಡೆದಿದೆ. ಚೇತನಾ ಪಾಟೀಲ, ಬೀಳಗಿ ತಾಲ್ಲೂಕಿನ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೃಷ್ಣ ರಾಮಪ್ಪ ಶಿರೂರು ಮತ್ತು ತುಮಕೂರಿನ ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಎಚ್. ರವಿ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಲಾಗಿದೆ. ಮೂವರ ಬಳಿಯಲ್ಲೂ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಗಳು ಪತ್ತೆಯಾಗಿವೆ.

**ಏಳು ಮಂದಿ ಎಂಜಿನಿಯರ್‌ಗಳು:** ಈ ಬಾರಿ ಲೋಕಾಯುಕ್ತ ಪೊಲೀಸರು ದಾಳಿ ಮಾಡಿರುವ ಅಧಿಕಾರಿಗಳಲ್ಲಿ ಏಳು ಮಂದಿ ಎಂಜಿನಿಯರ್‌ಗಳಿದ್ದಾರೆ. ಎಲ್ಲರ ಬಳಿಯೂ ಅಪಾರ ಪ್ರಮಾಣದ ಸ್ಥಿರಾಸ್ತಿ, ನಗದು ಪತ್ತೆಯಾಗಿವೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

‘62 ತಂಡಗಳಲ್ಲಿ ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳು ಬುಧವಾರ ನಸುಕಿನಲ್ಲೇ ಕಾರ್ಯಾಚರಣೆ ಆರಂಭಿಸಿದ್ದರು. ಆರೋಪಿಗಳು ಮತ್ತು ಅವರ ನಿಕಟವರ್ತಿಗಳು, ಬೇನಾಮಿಗಳು ಎಂದು ಶಂಕಿಸಲಾದ ವ್ಯಕ್ತಿಗಳ ಮನೆ, ಕಚೇರಿಗಳಲ್ಲಿ ಶೋಧ ನಡೆಸಲಾಗಿದೆ. ಬ್ಯಾಂಕ್ ದಾಖಲೆಗಳು, ಸ್ಥಿರಾಸ್ತಿ ಒಡೆತನಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಕೆಲವೆಡೆ ಬ್ಯಾಂಕ್ ಲಾಕರ್‌ಗಳನ್ನು ತೆರೆದು ಪರಿಶೀಲಿಸುವುದು ಬಾಕಿ ಇದೆ. ಕೆಲವು ಅಧಿಕಾರಿಗಳಿಗೆ ಸಂಬಂಧಿಸಿದಂತೆ ಗುರುವಾರವೂ ಕಾರ್ಯಾಚರಣೆ ಮುಂದುವರಿಯಲಿದೆ’ ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

**ಯಾರ ಬಳಿ ಎಷ್ಟು ಆಸ್ತಿ?**

| | |
|---|---|
| ಅಜಿತ್ ಕುಮಾರ್ ರೈ, ತಹಶೀಲ್ದಾರ್ ಕೆ.ಆರ್.ಪುರ | ₹1.90 ಕೋಟಿ |
| ಚೇತನಾ ಪಾಟೀಲ, ಕೃಷಿ ಇಲಾಖೆ ಜಂಟಿ ನಿರ್ದೇಶಕಿ, ಬಾಗಲಕೋಟೆ | ₹1.45 ಕೋಟಿ |
| ಕೃಷ್ಣ ರಾಮಪ್ಪ ಶಿರೂರು, ಕೃಷಿ ಇಲಾಖೆ ಸಹಾಯಕ ನಿರ್ದೇಶಕ, ಬೀಳಗಿ | ₹71.88 ಲಕ್ಷ |
| ಜಿನ್ನಪ್ಪ ಪದ್ಮಣ್ಣ ಶೆಟ್ಟಿ, ಎಇಇ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮುದ್ದೇಬಿಹಾಳ | ₹1.42 ಕೋಟಿ |
| ಭೀಮನಗೌಡ, ಜೆಇ, ಲೋಕೋಪಯೋಗಿ ಇಲಾಖೆ ಬಸವನ ಬಾಗೇವಾಡಿ ಉಪ ವಿಭಾಗ | ₹1.90 ಕೋಟಿ |
| ಪಿ.ಎಂ. ಅಬ್ದುಲ್ ಬಶೀರ್, ಪ್ರಥಮ ದರ್ಜೆ ಸಹಾಯಕ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಮಡಿಕೇರಿ | ₹1.14 ಕೋಟಿ |
| ಶರಣಪ್ಪ, ನಗರ ಯೋಜನಾ ಇಲಾಖೆ ಸಹಾಯಕ ನಿರ್ದೇಶಕ, ಸಿಂಧನೂರು | ₹2.03 ಕೋಟಿ |
| ಕೆ.ಎಚ್. ರವಿ, ಕೃಷಿ ಇಲಾಖೆ ಜಂಟಿ ನಿರ್ದೇಶಕ, ತುಮಕೂರು | ₹4.27 ಕೋಟಿ |
| ಜಿ.ಎನ್. ಪ್ರಕಾಶ್, ಎಇಇ, ಲೋಕೋಪಯೋಗಿ ಇಲಾಖೆ, ರಾಯಚೂರು | ₹2.71 ಕೋಟಿ |
| ಶೇಖರ ಹನುಮಂತ ಬಹುರೂಪಿ, ಇಇ, ಜೆಸ್ಕಾಂ, ಹಗರಿಬೊಮ್ಮನಹಳ್ಳಿ ವಿಭಾಗ | ₹3 ಕೋಟಿ |
| ವಿ. ರಮೇಶ್, ಅಬಕಾರಿ ಇನ್‌ಸ್ಪೆಕ್ಟರ್, ಗೌರಿಬಿದನೂರು | ₹2.44 ಕೋಟಿ |
| ವಿಶ್ವನಾಥ ರೆಡ್ಡಿ, ಎಇಇ, ಆರೋಗ್ಯ ಇಲಾಖೆ ಎಂಜಿನಿಯರಿಂಗ್ ವಿಭಾಗ, ರಾಯಚೂರು | ₹1.27 ಕೋಟಿ |
| ಕೆ.ಬಿ. ಪುಟ್ಟರಾಜು, ಎಇ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಶಿರಾ ಉಪ ವಿಭಾಗ | ₹1.04 ಕೋಟಿ |
| ಕೋದಂಡರಾಮಯ್ಯ ವಿ., ಎಇ, ಕೆಆರ್‌ಐಡಿಎಲ್, ತುಮಕೂರು | ₹2.47 ಕೋಟಿ |
| ಗಂಗಾಧರ್ ವೈ., ಯೋಜನಾ ವ್ಯವಸ್ಥಾಪಕ, ನಿರ್ಮಿತಿ ಕೇಂದ್ರ, ಚಿಕ್ಕಮಗಳೂರು | ₹3.75 ಕೋಟಿ |

### ದುಬಾರಿ ಕಾರು

₹ 2.5 ಕೋಟಿ ಮೌಲ್ಯದ ಲ್ಯಾಂಡ್ ಕ್ರೂಸರ್, ನಾಲ್ಕು ಟೊಯೊಟಾ ಫಾರ್ಚೂನರ್ ಮತ್ತು ನಾಲ್ಕು ಮಹಿಂದ್ರಾ ಥಾರ್ ವಾಹನಗಳನ್ನು ಅಜಿತ್ ರೈ ಖರೀದಿಸಿರುವುದಕ್ಕೆ ಸಂಬಂಧಿಸಿದ ದಾಖಲೆಗಳೂ ತನಿಖಾ ತಂಡಕ್ಕೆ ಸಿಕ್ಕಿವೆ

‘ಅಜಿತ್ ಕುಮಾರ್ ನೇರವಾಗಿ ₹ 1.90 ಕೋಟಿ ಮೌಲ್ಯದ ಆಸ್ತಿ ಹೊಂದಿರುವುದಕ್ಕೆ ದಾಖಲೆ ಸಿಕ್ಕಿವೆ. ಅವರ ಬಳಿ ನೂರಾರು ಎಕರೆ ಜಮೀನು ಹಾಗೂ ಹಲವು ಐಷಾರಾಮಿ ಕಾರುಗಳ ದಾಖಲೆಗಳು ಪತ್ತೆಯಾಗಿವೆ. ಬೇನಾಮಿಯಾಗಿ ಈ ಆಸ್ತಿಗಳನ್ನು ಹೊಂದಿರುವ ಶಂಕೆ ಇದೆ’ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಅಜಿತ್‌ಗೆ ಸಂಬಂಧಿಸಿದ 11 ಸ್ಥಳಗಳಲ್ಲಿ ಶೋಧ ನಡೆಯುತ್ತಿದೆ. ಸಹಕಾರ ನಗರದಲ್ಲಿರುವ ಅವರ ಮನೆ, ಬಸವೇಶ್ವರನಗರ, ಚಂದ್ರಾ ಬಡಾವಣೆ, ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನ ಸೊರಕೆಯಲ್ಲಿ ಶೋಧ ನಡೆಸಲಾಗಿದೆ.

ಅಜಿತ್ ಕೆ.ಆರ್.ಪುರ ತಹಶೀಲ್ದಾರ್ ಕಚೇರಿಯನ್ನು ಖಾಸಗಿ ಬಿಲ್ಡರ್‌ಗಳ ಮೂಲಕ ನವೀಕರಣ ಮಾಡಿಸಿದ್ದು, ಅಧಿಕಾರಿಗಳ ಭೇಟಿ ವೇಳೆ ಪತ್ತೆಯಾಗಿತ್ತು. ಸರ್ಕಾರಿ ಜಮೀನು ಒತ್ತುವರಿ ತೆರವಿನಲ್ಲಿ ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ಒಮ್ಮೆ ಸೇವೆಯಿಂದ ಅಮಾನತು ಕೂಡ ಮಾಡಲಾಗಿತ್ತು.

## ತ್ಯಾಗ ಸಂದೇಶದ ಬಕ್ರೀದ್

● ಮಹಮ್ಮದ್ ನೂಮಾನ್

**ಇಂದು ಬಕ್ರೀದ್**

**ಪ್ರವಾದಿ ಇಬ್ರಾಹಿಂ** ಅವರ ತ್ಯಾಗದ ನೆನಪಿನಲ್ಲಿ ಆಚರಿಸುವ ಹಬ್ಬವೇ ‘ಈದುಲ್ ಅದ್‌ಹಾ’. ದೇಶದಾದ್ಯಂತ ಮುಸ್ಲಿಮರು ಇಂದು (ಜೂನ್ 29) ಹಬ್ಬದ ಸಂಭ್ರಮದಲ್ಲಿದ್ದಾರೆ. ಭಾರತದಲ್ಲಿ ಈ ಹಬ್ಬ ‘ಬಕ್ರೀದ್’ ಎಂದೇ ಪ್ರಸಿದ್ಧಿ ಪಡೆದುಕೊಂಡಿದೆ.

ಇಸ್ಲಾಮಿಕ್ ಕ್ಯಾಲೆಂಡರಿನ ‘ದುಲ್ ಹಜ್ಜ್’ ತಿಂಗಳ 10ರಂದು ಬಕ್ರೀದ್ ಅನ್ನು ಆಚರಿಸಲಾಗುತ್ತದೆ. ಪ್ರವಾದಿ ಇಬ್ರಾಹಿಂ ಅವರು, ಕೊನೆಯ ಪ್ರವಾದಿ ಮುಹಮ್ಮದ್ ಅವರಿಗಿಂತ ಎರಡೂವರೆ ಸಾವಿರ ವರ್ಷಗಳ ಹಿಂದೆ ಹುಟ್ಟಿದ್ದರು. ಇಬ್ರಾಹಿಂ ಮತ್ತು ಅವರ ಪುತ್ರ ಇಸ್ಮಾಯಿಲ್ ಅವರ ಜೀವನ, ತತ್ವಗಳು, ದೈವನಿಷ್ಠೆ ಮತ್ತು ತ್ಯಾಗದ ಗುಣಗಳೊಂದಿಗೆ ಈ ಹಬ್ಬ ಬೆಸೆದುಕೊಂಡಿದೆ.

ಜಾನುವಾರು ಬಲಿ: ಜಾನುವಾರುಗಳನ್ನು ಬಲಿ ನೀಡುವುದು ‘ಬಕ್ರೀದ್’ನ ಪ್ರಮುಖ ಆಚರಣೆಯಾಗಿದೆ.

ಪ್ರವಾದಿ ಇಬ್ರಾಹಿಂ ಅವರ ಜೀವನದಲ್ಲಿ ನಡೆದಿದ್ದ ಘಟನೆಯೊಂದರ ನೆನಪಿನಲ್ಲಿ ಜಾನುವಾರು ಬಲಿ ನೀಡಲಾಗುತ್ತದೆ.

ಅಲ್ಲಾಹನ ಆದೇಶದಂತೆ ಇಬ್ರಾಹಿಂ, ತಮ್ಮ ಪುತ್ರ ಇಸ್ಮಾಯಿಲ್ ಅವರನ್ನು ಬಲಿಯರ್ಪಿಸಲು ಮುಂದಾಗುವರು. ತಮ್ಮ ಮಗನನ್ನೇ ಬಲಿ ನೀಡಲು ಸಿದ್ಧವಾಗಿದ್ದ ಇಬ್ರಾಹಿಂ ಅವರ ಭಕ್ತಿಯನ್ನು ಅಲ್ಲಾಹನು ಮೆಚ್ಚಿ ಪುತ್ರನ ಬದಲು ಒಂದು ಟಗರನ್ನು ಬಲಿಯಾಗಿ ಅರ್ಪಿಸುವಂತೆ ಸೂಚಿಸುತ್ತಾರೆ ಎಂದು ಮುಸ್ಲಿಮರ ಧರ್ಮಗ್ರಂಥದಲ್ಲಿ ತಿಳಿಸಲಾಗಿದೆ.

ಇಬ್ರಾಹಿಂ ಅವರ ತ್ಯಾಗವನ್ನು ನೆನಪಿಸಲು ಹಬ್ಬದ ದಿನ ಜಾನುವಾರು ಬಲಿ ಅರ್ಪಿಸಲಾಗುತ್ತದೆ. ಆರ್ಥಿಕವಾಗಿ ಸಬಲರಾಗಿರುವ ಎಲ್ಲರೂ ಪ್ರಾಣಿಬಲಿ ನೀಡಬೇಕು. ಪ್ರಾಣಿಯಿಂದ ಲಭಿಸಿದ ಮಾಂಸವನ್ನು ಸಮನಾಗಿ ಮೂರು ಪಾಲು ಮಾಡಬೇಕು. ಅದರಲ್ಲಿ ಒಂದು ಭಾಗವನ್ನು ಸ್ವತಃ ಬಳಸಿಕೊಳ್ಳಬಹುದು. ಇನ್ನೆರಡು ಪಾಲುಗಳನ್ನು ಸಂಬಂಧಿಕರು ಹಾಗೂ ಬಡವರಿಗೆ ಹಂಚಬೇಕು.

‘ಕುರ್ಬಾನಿ’(ಪ್ರಾಣಿಬಲಿ)ಯನ್ನು ನೀಡುವ ಸಾಮರ್ಥ್ಯವಿದ್ದೂ, ನೀಡದವನು ಹಬ್ಬದ ಪ್ರಾರ್ಥನೆಗಾಗಿ ಈದ್ಗಾಗೆ ಬರುವ ಅಗತ್ಯವಿಲ್ಲ’ ಎಂದು ಪ್ರವಾದಿ ಮುಹಮ್ಮದ್ ಅವರು ಹೇಳಿದ್ದಾರೆ. ಆರೋಗ್ಯವಂತ ಪ್ರಾಣಿಗಳನ್ನು ಮಾತ್ರ ಬಲಿ ನೀಡಬೇಕು. ದೃಷ್ಟಿಯನ್ನು ಕಳೆದುಕೊಂಡಿರುವ, ರೋಗದಿಂದ ಬಳಲುತ್ತಿರುವ, ಅಂಗವೈಕಲ್ಯವನ್ನು ಹೊಂದಿರುವ, ಕೃಶಕಾಯದ ಪ್ರಾಣಿಗಳನ್ನು ಬಲಿ ನೀಡುವಂತಿಲ್ಲ.

ಬಕ್ರೀದ್‌ನ ದಿನ ಬೆಳಿಗ್ಗೆ ಈದ್ಗಾಗಳು ಮತ್ತು ಮಸೀದಿಗಳಲ್ಲಿ ಸಾಮೂಹಿಕ ಈದ್ ನಮಾಜ್ ಇರುತ್ತದೆ. ನಮಾಜ್ ಬಳಿಕ ಪರಸ್ಪರ ಶುಭಾಶಯ ತಿಳಿಸಿ, ಗೆಳೆಯರ ಮತ್ತು ಸಂಬಂಧಿಕರ ಮನೆಗೆ ಭೇಟಿ ನೀಡುವರು. ಮನೆಗಳಲ್ಲಿ ಹಬ್ಬದ ಊಟ, ವಿಶೇಷ ಖಾದ್ಯಗಳನ್ನು ತಯಾರಿಸುವರು. ಗೆಳೆಯರು, ಬಂಧುಗಳನ್ನು ಆಹ್ವಾನಿಸಿ ಜೊತೆಯಾಗಿ ಊಟ ಮಾಡಿ, ಸಂಭ್ರಮ ಹಂಚಿಕೊಳ್ಳುವರು. ಹಬ್ಬದ ದಿನ ದಾನವಾಗಿ ದೊರೆಯುವ ಮಾಂಸ, ಹಣ, ದಿನಸಿ ಸಾಮಗ್ರಿಗಳಿಂದ ಬಡವರಿಗೂ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಕಲ್ಪಿಸುತ್ತದೆ.

# ಪರ್ಸೆಂಟೇಜ್ ವ್ಯವಹಾರ ಶುರು: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): 'ಕಾಂಗ್ರೆಸ್ ಸರ್ಕಾರದಲ್ಲೂ ಪರ್ಸೆಂಟೇಜ್ ವ್ಯವಹಾರ ಶುರುವಾಗಿದೆ. ರೇಟ್ ಫಿಕ್ಸ್ ಮಾಡಲು ಕಾಮಗಾರಿಗಳನ್ನು ಸ್ಥಗಿತಗೊಳಿಸಿದ್ದಾರೆ' ಎಂದು ಶಾಸಕ ಎಚ್.ಡಿ. ಕುಮಾರಸ್ವಾಮಿ ಅವರು ಸರ್ಕಾರದ ವಿರುದ್ಧ ಆರೋಪ ಮಾಡಿದ್ದಾರೆ.

ತಾಲ್ಲೂಕಿನ ಮೈಲನಾಯಕನಹೊಸಹಳ್ಳಿಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾಲ್ಕು ವರ್ಷದಲ್ಲಿ ಬೆಂಗಳೂರಿನಲ್ಲಿ ನಡೆದಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ತನಿಖೆ ಮಾಡುತ್ತೇವೆ ಎಂದು ಸಚಿವರೊಬ್ಬರು ಹೇಳಿದ್ದಾರೆ. ಅಭಿವೃದ್ಧಿ ಕಾರ್ಯಗಳ ತನಿಖೆಯನ್ನು ಯಾವ ರೀತಿ, ಎಲ್ಲಿಂದ ಮಾಡಲು ಸಾಧ್ಯ' ಎಂದು ಪ್ರಶ್ನಿಸಿದರು.

'ಬೆಳಗ್ಗೆಯಾದರೆ ಸಾಕು ಪ್ರತಿ ಸಚಿವರೂ ತನಿಖೆ ಮಾಡುತ್ತೇವೆ ಎಂದು ಹೇಳಿಕೆ ನೀಡುತ್ತಾರೆ. ಐದು ಗ್ಯಾರಂಟಿ ಜೊತೆಗೆ 'ತನಿಖಾ ಗ್ಯಾರಂಟಿ'ಯನ್ನೂ ಕೊಡುತ್ತಿದ್ದಾರೆ. ಇವರ ಯಾವ ತನಿಖೆಗೂ ತಾರ್ಕಿಕ ಅಂತ್ಯ ಇಲ್ಲ. ಸರ್ಕಾರದ ವೈಫಲ್ಯ ಮುಚ್ಚಿಕೊಳ್ಳಲು ಇಂಥ ಹೇಳಿಕೆ ಕೊಡುತ್ತಿದ್ದಾರೆ ಅಷ್ಟೇ' ಎಂದು ಚಾಟಿ ಬೀಸಿದರು.

ಈ ಸರ್ಕಾರದಲ್ಲಿ ವರ್ಗಾವಣೆ ದಂಧೆಯೂ ಅವ್ಯಾಹತವಾಗಿ ನಡೆಯುತ್ತಿದೆ. ಒಂದೇ ಹುದ್ದೆಗೆ ಮುಖ್ಯಮಂತ್ರಿಯೇ ನಾಲ್ಕರಿಂದ ಐದು ಬಾರಿ ಆದೇಶ ಮಾಡಿ, ಐವರನ್ನು ನಿಯುಕ್ತಿಗೊಳಿಸಿದ್ದಾರೆ ಎಂದು ಕುಮಾರಸ್ವಾಮಿ ಟೀಕಿಸಿದರು.

ಕಾಂಗ್ರೆಸ್‌ನವರು ಹೊರಗಡೆ ಮಾತ್ರ 'ಲಂಚ ತೆಗೆದುಕೊಳ್ಳುವುದಿಲ್ಲ, ಲಂಚ ಮುಟ್ಟಲ್ಲ, ನೀವು ಮುಟ್ಟಬೇಡಿ' ಅಂತ ವೀರಾವೇಶದಲ್ಲಿ ಹೇಳುತ್ತಾರೆ. ಆದರೆ, ರಾಜಾರೋಷವಾಗಿ ವರ್ಗಾವಣೆ ದಂಧೆಯಲ್ಲಿ ತೊಡಗಿದ್ದಾರೆ ಎಂದರು.

# 5 ಕೆ.ಜಿ ಅಕ್ಕಿ; ₹170 ಖಾತೆಗೆ

ಒಂದನೇ ಪುಟದಿಂದ...

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಹಾರ ಸಚಿವ ಕೆ.ಎಚ್.ಮುನಿಯಪ್ಪ, 'ನಮಗೆ ಅಕ್ಕಿ ದೊರಕುವುದು ಕಠಿಣವಾಗಿದೆ. ದೆಹಲಿಯಲ್ಲಿ ಕೇಂದ್ರ ಸಚಿವರು ಮತ್ತು ಇತರ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಮಾತನಾಡಿದ್ದೇವೆ. ಅದರ ಅಕ್ಕಿ ಸಿಗುತ್ತಿಲ್ಲ. ಆದ್ದರಿಂದ ಅಕ್ಕಿ ಬದಲಿಗೆ ಹಣ ಕೊಡಲು ತೀರ್ಮಾನಿಸಿದ್ದೇವೆ' ಎಂದರು.

'ಒಂದು ಕುಟುಂಬದಲ್ಲಿ ಐವರು ಸದಸ್ಯರು ಇದ್ದರೆ ಒಟ್ಟು 25 ಕೆ.ಜಿ ಅಕ್ಕಿಗೆ ತಗಲುವ ವೆಚ್ಚ ₹850 ಅನ್ನು ಕುಟುಂಬದ ಒಡೆಯನ ಖಾತೆಗೆ ಜಮೆ ಮಾಡಲಾಗುವುದು. ಪಡಿತರ ಚೀಟಿ ಆಧಾರ್‌ಗೆ ಜೋಡಣೆ ಆಗಿರಬೇಕು. ಶೇ 95 ರಷ್ಟು ಪಡಿತರ ಚೀಟಿಗಳು ಆಧಾರ್‌ಗೆ ಜೋಡಣೆ ಆಗಿವೆ.

**ದುಡ್ಡು ಕೊಡುವುದು ತಾತ್ಕಾಲಿಕ ವ್ಯವಸ್ಥೆ. ಅಕ್ಕಿ ಸಿಗುವವರೆಗೆ ಹಣ ನೀಡುತ್ತೇವೆ. ಅನ್ನಭಾಗ್ಯಕ್ಕೆ ಬೇಕಾಗುವಷ್ಟು ಪ್ರಮಾಣದ ಅಕ್ಕಿ ಸಿಕ್ಕಿದ ಬಳಿಕ ನೇರ ನಗದು ಜಮೆ ಮಾಡುವುದಿಲ್ಲ**

**ಕೆ.ಎಚ್. ಮುನಿಯಪ್ಪ**, ಆಹಾರ ಸಚಿವ

ಉಳಿದಿರುವ ಶೇ 5 ರಷ್ಟು ಪಡಿತರ ಚೀಟಿಗಳನ್ನು ಆದಷ್ಟು ಬೇಗ ಜೋಡಣೆ ಮಾಡಲು ಸೂಚಿಸಲಾಗುವುದು' ಎಂದು ಅವರು ಹೇಳಿದರು.

'ಎನ್‌ಸಿಸಿಎಫ್, ನಾಫೆಡ್, ಕೇಂದ್ರ ಭಂಡಾರಗಳಿಂದ ಅಕ್ಕಿ ಖರೀದಿಸಲು ಪ್ರಯತ್ನಿಸಿದ್ದೇವೆ. ದರ ನಿಗದಿ ಬಗ್ಗೆ ಅವರಿಗೆ ಸಮಯ ನೀಡಿದ್ದೇವೆ. ಅವರ ದರ ಹೆಚ್ಚು ಇದೆ. ಎಫ್‌ಸಿಐ ದರದಲ್ಲೇ (₹34) ಅಕ್ಕಿ ನೀಡುವಂತೆ ಕೋರಿಕೆ ಸಲ್ಲಿಸಿದ್ದೇವೆ. ಆದಷ್ಟು ಬೇಗ ಪಾರದರ್ಶಕತೆಯಡಿ ಟೆಂಡರ್ ಕರೆಯಲಾಗುವುದು' ಎಂದರು.

'ಎಲ್ಲ ಕಡೆ ಪ್ರಯತ್ನಿಸಿದ್ದೇವೆ. ಅಕ್ಕಿ ಸಿಗುವುದು ಕಷ್ಟವಾಗಿದೆ. ನಾನು ಮತ್ತು ಮುಖ್ಯಮಂತ್ರಿಯವರು ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಮಾತನಾಡಿದ್ದೇವೆ. ಕೆಲವರು ಸ್ಪಂದಿಸಿದರೆ, ಇನ್ನು ಕೆಲವರು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಆದರೆ, ನಾವು ಜನರಿಗೆ ನೀಡಿರುವ ಭರವಸೆಯನ್ನು ಈಡೇರಿಸಲು ಹಣವನ್ನು ನೀಡುವುದು ಸೂಕ್ತ ಎಂದು ತೀರ್ಮಾನಕ್ಕೆ ಬಂದೆವು' ಎಂದರು.

'ಭಾರತೀಯ ಆಹಾರ ನಿಗಮದ ಬಳಿ 262 ಲಕ್ಷ ಟನ್ ಅಕ್ಕಿ ಇದೆ. ಆದರೆ, ರಾಜಕೀಯ ಕಾರಣಕ್ಕೆ ಅಕ್ಕಿ ನೀಡುತ್ತಿಲ್ಲ. ನಮ್ಮ ಅಧಿಕಾರಿಗಳು ಆಹಾರ ನಿಗಮದ ಸ್ಥಳೀಯ ಅಧಿಕಾರಿಗಳಿಗೆ ಪತ್ರ ಬರೆದಾಗ ಅಕ್ಕಿ ಇದೆ ಎಂದು ಹೇಳಿದ್ದರು. ಬಿಜೆಪಿ ಬಡವರ ವಿರೋಧಿ ಆಗಿರುವ ಕಾರಣ ಅಕ್ಕಿ ನೀಡಲು ಒಪ್ಪುತ್ತಿಲ್ಲ' ಎಂದರು.

**ಮೂರು ತಿಂಗಳು ಮಾತ್ರ ಹಣ:** ಅನ್ನ ಭಾಗ್ಯ ಯೋಜನೆಯಡಿ ಅಕ್ಕಿ ಬದಲಿಗೆ ಹಣವನ್ನು ಕೊಡುವ ವ್ಯವಸ್ಥೆ ಮೂರು ತಿಂಗಳವರೆಗೆ ಮಾತ್ರ ನಡೆಯಲಿದೆ. ಆ ಬಳಿಕ ಅಕ್ಕಿಯನ್ನೇ ವಿತರಿಸಲು ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

## ಪ್ರವೀಣ್ ಹತ್ಯೆ: ಆರೋಪಿಗಳ ಸುಳಿವು ನೀಡಲು ಧ್ವನಿವರ್ಧಕದಲ್ಲಿ ಪ್ರಕಟಣೆ

# ಆಸ್ತಿ ಮುಟ್ಟುಗೋಲು ಪ್ರಕ್ರಿಯೆ

ಪ್ರಜಾವಾಣಿ ವಾರ್ತೆ

ಸುಳ್ಯ/ಮಂಗಳೂರು: ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಆರೋಪಿಗಳು ಇದೇ 30ರ ಒಳಗಾಗಿ ಶರಣಾಗಬೇಕು ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಗಡುವು ವಿಧಿಸಿದೆ. ಆರೋಪಿಗಳ ಆಸ್ತಿಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆಯನ್ನೂ ಆರಂಭಿಸಿದೆ.

ಆರೋಪಿಗಳ ಆಸ್ತಿಮುಟ್ಟುಗೋಲಿಗೆ ಸಂಬಂಧಿಸಿದಂತೆ ಎನ್‌ಐಎ ವಿಶೇಷ ನ್ಯಾಯಾಲಯ ನೀಡಿರುವ ಆದೇಶದ ಪ್ರತಿಯನ್ನು, ತಲೆಮರೆಸಿಕೊಂಡಿರುವ ಆರೋಪಿಗಳಾದ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕು ಬೆಳ್ಳಾರೆ ಗ್ರಾಮದ ಮೊಹಮ್ಮದ್ ಮುಸ್ತಾಫ ಎಸ್. ಹಾಗೂ ಸುಳ್ಯ ಕಲ್ಲುಮುಟ್ಟು ಮನೆಯ ಉಮ್ಮರ್ ಫಾರೂಕ್ ಮನೆಗೆ ಎನ್‌ಐಎ ಅಧಿಕಾರಿಗಳು ಬುಧವಾರ ಅಂಟಿಸಿದ್ದಾರೆ.

ಈ ಕುರಿತು ಸುಳ್ಯ ಹಾಗೂ ಬೆಳ್ಳಾರೆ ಪಟ್ಟಣಗಳಲ್ಲಿ ಎನ್‌ಐಎ ಅಧಿಕಾರಿಗಳು ಧ್ವನಿವರ್ಧಕ ಬಳಸಿ ಬುಧವಾರ ಪ್ರಕಟಣೆ ಹೊರಡಿಸಿದರು. ಆರೋಪಿಗಳ ಸುಳಿವು ಕೊಟ್ಟಲ್ಲಿ ನಗದು ಬಹುಮಾನ ನೀಡಲಾಗುವುದು ಎಂದೂ ಸಾರ್ವಜನಿಕರಿಗೆ ತಿಳಿಸಿದರು.

**ಆರೋಪಿಗಳಿಗೆ ನೆರವಾದವರಿಗಾಗಿ ಶೋಧ:** ಈ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿಗಳಿಗೆ ಆಶ್ರಯ ನೀಡಿದ ಆರೋಪಿಗಳಾದ ಕೊಡಗು ಜಿಲ್ಲೆಯ ಅಬ್ದುಲ್ ನಾಸಿರ್ ಮತ್ತು ಅಬ್ದುಲ್ ರೆಹಮಾನ್ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಪಡಂಗಡಿ ಗ್ರಾಮದ ನೌಷದ್ ಎಂಬುವರ ಮನೆಗಳಲ್ಲಿ ಎನ್‌ಐಎ ಮಂಗಳವಾರ ಪರಿಶೀಲನೆ ನಡೆಸಿತ್ತು.

ಈ ಶೋಧ ಕಾರ್ಯದ ಬಗ್ಗೆ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿರುವ ಎನ್‌ಐಎ, 'ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಮೂವರು ಪ್ರಮುಖ ಆರೋಪಿಗಳು ಹಾಗೂ ಇತರ ಐವರು ಆರೋಪಿಗಳು ತಲೆ ಮರೆಸಿಕೊಂಡಿದ್ದು, ಅವರ ಪತ್ತೆಗೆ ಕ್ರಮಕೈಗೊಳ್ಳಲಾಗಿದೆ. ಹತ್ಯೆ ನಡೆಸಿದ ಆರೋಪಿಗಳಿಗೆ ಈ ಮೂವರು ಕರ್ನಾಟಕ ಮತ್ತು ತಮಿಳುನಾಡಿನ ಬೇರೆ ಬೇರೆ ಕಡೆ ಆಶ್ರಯ ನೀಡಿರುವ ಶಂಕೆ ಇದೆ. ತಪಾಸಣೆ ವೇಳೆ ಈ ಮೂವರ ಮನೆಗಳಲ್ಲಿ ಕೆಲವು ಎಲೆಕ್ಟ್ರಾನಿಕ್ ಉಪಕರಣಗಳು-ಹಾಗೂ ಮತ್ತು ದಾಖಲಾತಿಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಎನ್‌ಐಎ ತಿಳಿಸಿದೆ.



ಪ್ರವೀಣ್ ನೆಟ್ಟಾರು ಹತ್ಯೆ ಆರೋಪಿಗಳ ಸುಳಿವು ನೀಡುವಂತೆ ಕೋರಿ ಎನ್‌ಐಎ ಅಧಿಕಾರಿಗಳು ಸುಳ್ಯದಲ್ಲಿ ಆಟೊ ರಿಕ್ಷಾದಲ್ಲಿ ಬುಧವಾರ ಧ್ವನಿವರ್ಧಕದ ಮೂಲಕ ಪ್ರಚಾರ ಮಾಡಿದರು

# ಯುಕೆಪಿ 3ನೇ ಹಂತ ವೆಚ್ಚ ₹ 78 ಸಾವಿರ ಕೋಟಿಗೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಆಲಮಟ್ಟಿ (ವಿಜಯಪುರ ಜಿಲ್ಲೆ): 'ಭೂಸ್ವಾಧೀನ ಬೆಲೆ ಹೆಚ್ಚಳ ಮಾಡಿದ್ದರಿಂದ ₹51.94 ಕೋಟಿ ಇದ್ದ ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ)ಯ ಮೂರನೇ ಹಂತದ ಯೋಜನಾ ವೆಚ್ಚ ಪ್ರಾಥಮಿಕ ಅಂಕಿ ಅಂಶಗಳ ಪ್ರಕಾರ, ₹78 ಸಾವಿರ ಕೋಟಿ ಹೆಚ್ಚಳವಾಗಿದೆ' ಎಂದು ಕೃಷ್ಣಾ ಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್. ಶಿವಕುಮಾರ ತಿಳಿಸಿದರು.

ಯುಕೆಪಿಯ ಸಮಗ್ರ ಪ್ರಗತಿ ಪರಿಶೀಲನಾ ಸಭೆ ಬಳಿಕ ಬುಧವಾರ ಸುದ್ದಿಗಾರರಿಗೆ ಅವರು ಮಾಹಿತಿ ನೀಡಿದರು.

'ಆಲಮಟ್ಟಿ ಜಲಾಶಯ ಎತ್ತರದಿಂದ ಬಾಧಿತಗೊಳ್ಳುವ ಜಮೀನಿಗೆ ನೀಡುವ ಪರಿಹಾರದ ಮೊತ್ತವನ್ನು ಹಿಂದಿನ ಸರ್ಕಾರ ಹೆಚ್ಚಿಸಿದ್ದು ಪರಿಹಾರ ಧನ ಹೆಚ್ಚಲಿದೆ' ಎಂದರು.

'ಭೂಸ್ವಾಧೀನ ಹಾಗೂ ಪುನರ್ವಸತಿ ಕೇಂದ್ರಗಳ ರಚನೆಗಿದ್ದ ₹30 ಸಾವಿರ ಕೋಟಿ ಅಂದಾಜು ಮೊತ್ತ ₹50 ಸಾವಿರ ಕೋಟಿಗೆ ಏರಿಕೆಯಾಗಿದೆ. ಸಿವಿಲ್ ಕಾಮಗಾರಿಯ ವೆಚ್ಚದಲ್ಲೂ ₹8,000 ಕೋಟಿ ಹೆಚ್ಚಳವಾಗಿದೆ' ಎಂದು ವಿವರಿಸಿದರು.

ಪರಿಷ್ಕೃತ ಯೋಜನಾ ವೆಚ್ಚ ತಯಾರಿಸಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಪ್ರಸ್ತುತ ಬಜೆಟ್‌ನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ₹11 ಸಾವಿರ ಕೋಟಿ ಅಗತ್ಯದ ಪ್ರಸ್ತಾವ ಸರ್ಕಾರಕ್ಕೆ ಸಲ್ಲಿಸಲಾಗಿದೆ' ಎಂದು ಅವರು ತಿಳಿಸಿದರು.



❦ ಸುಭಾಷಿತ ❦

ನಮ್ಮ ಜೀವನವು ನಾವು ದೀರ್ಘಕಾಲ ಹಗೆತನ ಸಾಧಿಸುವಷ್ಟು ಸುದೀರ್ಘವಾದುದಲ್ಲ.

–ಎಲಾನ್ ಮಸ್ಕ್

# ಜಾತಿವಿಷ: ದೇಶದ ಮಾನ ಮುಕ್ಕು ಇನ್ನೆಷ್ಟು ದಿನ ಮರ್ಯಾದೆಗೇಡು ಕೃತ್ಯ?

**ಕೋಲಾರ** ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಬೋಡಗುರ್ಕಿ ಗ್ರಾಮದಲ್ಲಿ ನಡೆದಿರುವ ಯುವತಿಯೊಬ್ಬಳ ಕೊಲೆ, ಸಮಾಜದಲ್ಲಿ ಸುಪ್ತವಾಗಿರುವ ಜಾತಿವಿಷ ಆಗಾಗ್ಗೆ ಸ್ಫೋಟಿಸಿ ಹೊರಚಿಮ್ಮುತ್ತಿರುವುದಕ್ಕೆ ನಿದರ್ಶನವಾಗಿದೆ. ಪರಿಶಿಷ್ಟ ಜಾತಿಯ ಯುವಕನನ್ನು ಪ್ರೀತಿಸಿದ ಯುವತಿಯನ್ನು ಆಕೆಯ ತಂದೆಯೇ ಕೊಂದಿದ್ದಾನೆ. ಪ್ರೇಯಸಿಯ ಸಾವಿನ ಸುದ್ದಿ ತಿಳಿದು ಆಘಾತಕ್ಕೆ ಒಳಗಾದ ಯುವಕ, ಚಲಿಸುವ ರೈಲಿನ ಕೆಳಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪ್ರೀತಿಸಿದ ಯುವಕನನ್ನು ಮದುವೆಯಾಗುವುದಾಗಿ ಹಟ ಹಿಡಿದ ಮಗಳ ಧೋರಣೆ ಅಪ್ಪನ ಕಣ್ಣಿಗೆ ಕೊಲ್ಲುವಷ್ಟು ಅಪರಾಧವಾಗಿ ಕಾಣಿಸಿರುವುದನ್ನು ಕಲ್ಪಿಸಿಕೊಳ್ಳುವುದೇ ಅಸಹನೀಯ. ಈ ಪ್ರಕರಣ ಯಾವ ಹಂತಕ್ಕೂ ಹೋಗಬಹುದಾದ ಜಾತೀಯತೆಯ ಅಮಾನವೀಯ ಸ್ವರೂಪವನ್ನು ಸೂಚಿಸುವುದರ ಜೊತೆಗೆ, ಕ್ರೌರ್ಯ ಮತ್ತು ಹಿಂಸೆ ಸಮಾಜದಲ್ಲಿ ಆಳವಾಗಿ ಬೇರೂರಿರುವುದಕ್ಕೂ ಉದಾಹರಣೆಯಾಗಿದೆ. ಈ ಕೃತ್ಯದ ಆಸುಪಾಸಿನಲ್ಲೇ, ಕುಟುಂಬದ ನಿರ್ಣಯಕ್ಕೆ ವಿರುದ್ಧವಾಗಿ ಮದುವೆಯಾದ ಇಪ್ಪತ್ತು ವರ್ಷದ ಮಹಿಳೆ ತನ್ನ ಸಂಬಂಧಿಯಿಂದ ಕೊಲೆಯಾದ ಪ್ರಕರಣ ಗುಜರಾತ್‌ನಲ್ಲಿ ನಡೆದಿದೆ. ಪ್ರೇಮಿಗಳನ್ನು ಕೊಂದು ಅವರ ದೇಹಗಳನ್ನು ಚಂಬಲ್ ನದಿಗೆಸೆದ ಪ್ರಕರಣದಲ್ಲಿ, ಯುವತಿಯ ತಂದೆ ಸೇರಿದಂತೆ ಮೂವರನ್ನು ಬಂಧಿಸಿರುವ ಸುದ್ದಿ ಮಧ್ಯಪ್ರದೇಶದಿಂದ ಇತ್ತೀಚೆಗಷ್ಟೇ ವರದಿಯಾಗಿತ್ತು. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ನಾಯಕ ಸಮುದಾಯಕ್ಕೆ ಸೇರಿದ ವ್ಯಕ್ತಿಯೊಬ್ಬ, ಬೇರೆ ಜಾತಿಯ ಯುವಕನನ್ನು ಪ್ರೇಮಿಸಿದ ಮಗಳನ್ನು ಕೊಂದಿರುವ ಸುದ್ದಿ ಈಚೆಗೆ ವರದಿಯಾಗಿತ್ತು. ಹಿಂದಿನ ವರ್ಷ ಬಳ್ಳಾರಿಯಲ್ಲಿ ಯುವತಿಯೊಬ್ಬಳು ತನ್ನ ಪ್ರೇಮದ ಕಾರಣದಿಂದಾಗಿ ತಂದೆಯಿಂದಲೇ ಕೊಲೆಗೀಡಾಗಿದ್ದಳು. ಮರ್ಯಾದೆಗೇಡು ಹತ್ಯೆಯ ಬೆಳಕಿಗೆ ಬಂದ ಇಂತಹ ಕೆಲವು ಉದಾಹರಣೆಗಳೊಂದಿಗೆ, ಆತ್ಮಹತ್ಯೆ ಹೆಸರಿನಲ್ಲಿ ಮುಚ್ಚಿಹೋಗಿರುವಂತಹ ಕೊಲೆಗಳನ್ನೂ ಊಹಿಸಿಕೊಂಡರೆ, ದೇಶದಲ್ಲಿ ಅಂತರ್ಜಾತಿ ಪ್ರೇಮ ಪ್ರಕರಣಗಳು ದೇಶದ ಜಾತ್ಯತೀತ ಸ್ವರೂಪವನ್ನು ಅಣಕ ಮಾಡುವಂತಿವೆ. ಸೌಹಾರ್ದ, ಸಹಬಾಳ್ವೆ ಹಾಗೂ ಕುಟುಂಬಪ್ರೇಮದ ಅನನ್ಯತೆಯನ್ನು ವಿಶ್ವಕ್ಕೆ ಸಾರುವ ಸಮಾಜಕ್ಕೆ ಕಳಂಕವಾಗಿವೆ. ಜಾತಿಶ್ರೇಷ್ಠತೆಯ ಕುರುಡಿನಲ್ಲಿ ನಡೆಯುವ ವಿಚಿತ್ರ ಕೃತ್ಯಗಳನ್ನು ಮುಚ್ಚಿಹಾಕಲಾಗುತ್ತದೆ. ಕೌಟುಂಬಿಕ ಸಂಬಂಧಗಳಿಗಿಂತಲೂ ಹುಸಿ ಹಿರಿಮೆಯೇ ಮುಖ್ಯವಾಗಿ ಕಾಣುವ ಮನಸ್ಥಿತಿಯ ಹಿಂದೆ ಅಮಲಿನ ರೂಪದಲ್ಲಿ ಜಾತಿಯು ಕೆಲಸ ಮಾಡುತ್ತಿರುವುದನ್ನು ಗಮನಿಸಬೇಕು. ಅರಿವುಗೇಡಿ ಸ್ಥಿತಿಯಲ್ಲಿ ಜಾತಿ ಮತ್ತು ಧರ್ಮವು ಮಾದಕ ಪದಾರ್ಥಗಳಂತೆ ಕೆಲಸ ಮಾಡುತ್ತಿರುವುದಕ್ಕೆ ನಿದರ್ಶನಗಳು ಪ್ರತಿನಿತ್ಯ ವರದಿಯಾಗುತ್ತಿವೆ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲ ಸ್ಥಿತಿಯಲ್ಲಿ ಇರುವವರೂ ಜಾತಿಯ ಹೆಸರಿನಲ್ಲಿ ಹಿಂಸ್ರಪಶುಗಳಂತೆ ವರ್ತಿಸತೊಡಗುತ್ತಾರೆ. ಮಕ್ಕಳನ್ನು ಬಲಿ ಕೊಟ್ಟು ಜಾತಿ ಶ್ರೇಷ್ಠತೆಯನ್ನು ಉಳಿಸಿಕೊಳ್ಳುವ ಮನಸ್ಥಿತಿ ಮನುಷ್ಯತ್ವದ ಘನತೆಯನ್ನು ಮುಕ್ಕುಗೊಳಿಸುವಂತಹದ್ದು ಮಾತ್ರವಲ್ಲ, ಅದು ಸಮಾಜವನ್ನು ಬಾಧಿಸುವ ರೋಗವೂ ಹೌದು. ಕುಟುಂಬದ ಮರ್ಯಾದೆ ಹಾಗೂ ಜಾತಿ ಪ್ರತಿಷ್ಠೆ ಸಂರಕ್ಷಣೆಯ ನೆಪದಲ್ಲಿ ನಡೆಯುವ ಕೊಲೆಗಳು ಯಾವುದೇ ಕುಟುಂಬ, ಸಮುದಾಯ ಅಥವಾ ಸಮಾಜದ ಮರ್ಯಾದೆಯನ್ನು ಹೆಚ್ಚಿಸಲಾರವು. ಜಾತ್ಯತೀತ ಸಂವಿಧಾನವನ್ನು ಹೊಂದಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಜಾತಿ ಒಂದು ಸಾಮಾಜಿಕ ವಾಸ್ತವ ಎನ್ನುವುದನ್ನು ನಿರಾಕರಿಸಲು ಸಾಧ್ಯವಿಲ್ಲವಾದರೂ, ವ್ಯಕ್ತಿ ಅಥವಾ ಕುಟುಂಬದ ಘನತೆಗೂ ಜಾತಿಗೂ ಸಂಬಂಧ ಕಲ್ಪಿಸಲಾಗದು. ಜಾತಿಯೊಂದನ್ನು ಮೇಲು ಇಲ್ಲವೇ ಕೀಳು ಎಂದು ಭಾವಿಸುವುದು ಮೂರ್ಖತನವಷ್ಟೇ ಅಲ್ಲ, ರೋಗಗ್ರಸ್ತ ಮನಸ್ಥಿತಿಯೂ ಹೌದು. ಮರ್ಯಾದೆಗೇಡು ಹತ್ಯೆಯಂಥ ಅಮಾನುಷ ಕೃತ್ಯಗಳು ನಡೆದಾಗ ಸಮಾಜದಲ್ಲಿ ಆತಂಕ ಸಹಜವಾಗಿ ವ್ಯಕ್ತವಾಗುತ್ತದೆ. ಆ ಆತಂಕದ ತೀವ್ರತೆ ಹೆಚ್ಚು ಕಾಲ ಉಳಿಯುವುದೇ ಇಲ್ಲವಾದ್ದರಿಂದ, ಜಾತಿಶ್ರೇಷ್ಠತೆಯ ಹೆಸರಿನಲ್ಲಿ ಮತ್ತೆ ಮತ್ತೆ ಸಾವು ನೋವುಗಳು ಘಟಿಸುತ್ತಲೇ ಇವೆ. ಜಾತಿಯ ರೋಗಕ್ಕೆ ಭಾವುಕತೆ ಮದ್ದಾಗಲಾರದು. ಜಾತಿಯ ವೈರಸ್‌ನಿಂದ ನರಳುವ ಜನರನ್ನು ಬೆಳಕಿಗೆ ತಂದು ಅವರನ್ನು ಮಾನವೀಯಗೊಳಿಸುವುದು ನಿರಂತರವಾಗಿ ನಡೆಯಬೇಕಾದ ಪ್ರಕ್ರಿಯೆ. ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆ ಕುಡಿಯುವ ನೀರಿನ ಬಾವಿಯಂತಹದ್ದು. ಗಾಳಿ, ಬೆಳಕು ಕಾಣದೇ ಹೋದರೆ ಹಾಗೂ ಆಗಾಗ ಸ್ವಚ್ಛಗೊಳಿಸದೇ ಹೋದರೆ ನೀರು ಕಲುಷಿತಗೊಂಡು ಕುಡಿಯಲು ಬಾರದಂತಾಗುತ್ತದೆ. ಸಮಾಜವೂ ಅಷ್ಟೇ; ವಿವೇಕದ ಗಾಳಿ, ಬೆಳಕಿಗೆ ಹಾಗೂ ಹೃದಯವಂತಿಕೆಯ ವಿಚಾರಗಳಿಗೆ ನಿರಂತರವಾಗಿ ಒಡ್ಡಿಕೊಳ್ಳದೇ ಹೋದರೆ ಸಂವೇದನೆಗಳನ್ನು ಕಳೆದುಕೊಂಡು ಜಡವಾಗತೊಡಗುತ್ತದೆ. ಅದರ ಫಲವಾಗಿ ಜಾತಿ ಕಲಹಗಳು, ಮರ್ಯಾದೆಗೇಡು ಹತ್ಯೆಯಂತಹ ಪ್ರಕರಣಗಳು ನಡೆಯುತ್ತವೆ. ಜಾತಿವಿಷವನ್ನು ಹೋಗಲಾಡಿಸುವ ಕೆಲಸದಲ್ಲಿ ಸರ್ಕಾರದೊಂದಿಗೆ ಪ್ರಜ್ಞಾವಂತರು ಹಾಗೂ ಧಾರ್ಮಿಕ ಸಂಸ್ಥೆ–ಸಂಘಟನೆಗಳು ಕೈಜೋಡಿಸಬೇಕು. ಕಾನೂನು ಉಲ್ಲಂಘನೆ ಪ್ರಕರಣಗಳು ನಡೆದಾಗ ತಪ್ಪಿತಸ್ಥರ ವಿರುದ್ಧ ಸರ್ಕಾರ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು. ಸ್ವಸ್ಥ ಸಮಾಜಕ್ಕೆ ಕಾನೂನು ಕಣ್ಗಾವಲಿನ ಅಗತ್ಯವಿರುವಂತೆ ನೈತಿಕತೆಯ ಸ್ವಯಂ ನಿರ್ಬಂಧವೂ ಬೇಕು.



ಜಾತಿವಿಷವನ್ನು ಹೋಗಲಾಡಿಸುವ ಕೆಲಸದಲ್ಲಿ ಸರ್ಕಾರದೊಂದಿಗೆ ಪ್ರಜ್ಞಾವಂತರು ಹಾಗೂ ಧಾರ್ಮಿಕ ಸಂಸ್ಥೆ–ಸಂಘಟನೆಗಳು ಕೈಜೋಡಿಸಬೇಕು

## ದಿನದ ಟ್ವೀಟ್


### ಶ್ಲಾಘನೀಯ ಕಾರ್ಯ



**ಶಾಸಕರಾದವರು ಜನರ ಕಷ್ಟಕ್ಕೆ ಆಗಬೇಕು. ಸೇವೆ, ಅಭಿವೃದ್ಧಿ ಕಾರ್ಯಗಳ ಮೂಲಕವೇ ನಾಯಕರನ್ನು ಜನ ಗುರುತಿಸಬೇಕು. ಕುಣಿಗಲ್ ಶಾಸಕ ಡಾ. ಎಚ್.ಡಿ.ರಂಗನಾಥ್ ಅವರು ಆರ್ಥಿಕ ತೊಂದರೆಯಲ್ಲಿದ್ದ ಬಡ ಮಹಿಳೆಗೆ ಖುದ್ದು ಶಸ್ತ್ರಚಿಕಿತ್ಸೆ ಮಾಡಿರುವುದು ನಿಜಕ್ಕೂ ಶ್ಲಾಘನೀಯ. ಇಂಥ ಸೇವೆಗಳೇ ಒಬ್ಬ ರಾಜಕಾರಣಿಗೆ ಆತ್ಮಸಂತೃಪ್ತಿ ತಂದುಕೊಡುವ ಸಂಗತಿಗಳು.**

**ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

## ಕಿಡಿನುಡಿ



**ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ ಹೀನಾಯ ಸೋಲಿಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರೇ ಕಾರಣ. ನೈತಿಕ ಹೊಣೆ ಹೊತ್ತು ಅವರು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು.**

**ಎಂ.ಪಿ.ರೇಣುಕಾಚಾರ್ಯ,** ಬಿಜೆಪಿ ಮುಖಂಡ

## 25 ವರ್ಷಗಳ ಹಿಂದೆ

ಸೋಮವಾರ, 29-6-1998

**• ಜಾತ್ಯತೀತರು ಒಗ್ಗಟ್ಟಾದರೆ ಬೆಂಬಲ– ಸೋನಿಯಾ**

ಬೀದರ್, ಜೂನ್ 28– ಜಾತ್ಯತೀತ ಪಕ್ಷಗಳು ಒಗ್ಗಟ್ಟಾದರೆ ಅದಕ್ಕೆ ಕಾಂಗ್ರೆಸ್ ಬೆಂಬಲ ನೀಡುತ್ತದೆ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಇಂದು ಇಲ್ಲಿ ಹೇಳಿದರು.

ಬೀದರ್ ಜಿಲ್ಲೆಯಲ್ಲಿ ಬೆಳೆ ಹಾನಿಯಿಂದ ನೊಂದು ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಭೇಟಿ ಕೊಟ್ಟು ನಂತರ ಅವರು ಹುಮ್ನಾಬಾದ್‌ನ ಅತಿಥಿಗೃಹದಲ್ಲಿ ಸುದ್ದಿಗಾರರ ಜತೆ ಮಾತನಾಡುತ್ತಿದ್ದರು.

‘ಎಲ್ಲಾ ಜಾತ್ಯತೀತ ಶಕ್ತಿಗಳವರು ನಮ್ಮ ಪಕ್ಷದ ಗೆಳೆಯರು’ ಎಂದು ಅವರು ಈ ಸಂದರ್ಭದಲ್ಲಿ ಹೇಳಿದರು.

‘ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರನ್ನು ಗೆಳೆಯರು ಎಂದು ಕಾಂಗ್ರೆಸ್ ಸ್ವೀಕರಿಸಲಿದೆಯೇ?’ ಎಂಬ ಪ್ರಶ್ನೆಗೆ ‘ಎಲ್ಲಾ ಜಾತ್ಯತೀತ ಪಕ್ಷಗಳವರು ನಮ್ಮ ಗೆಳೆಯರೇ’ ಎಂದರು.

**• ಟ್ಯಾಕ್ಸಿ ಕ್ಯಾಬ್: ಜುಲೈ 1ರಿಂದ ಪರ್ಮಿಟ್**

ಬೆಂಗಳೂರು, ಜೂನ್ 28– ಹೈಕೋರ್ಟ್ ಆದೇಶಿಸಿರುವಂತೆ, ಜುಲೈ 15ರ ಗಡುವಿನೊಳಗೆ ನಗರದಲ್ಲಿ ಟ್ಯಾಕ್ಸಿ ಸೇವೆ ಪ್ರಾರಂಭಿಸಲು ಟ್ಯಾಕ್ಸಿ ಕ್ಯಾಬ್‌ಗಳಿಗೆ ಅಗತ್ಯವಾದ ಪರ್ಮಿಟ್‌ಗಳನ್ನು ಸಾರಿಗೆ ಇಲಾಖೆ ಜುಲೈ 1ರಿಂದ ವಿತರಿಸಲಿದೆ.

## 50 ವರ್ಷಗಳ ಹಿಂದೆ

ಶುಕ್ರವಾರ, 29-6-1973

**• ಸರ್ಕಾರದ ಸ್ವಾಧೀನಕ್ಕೆ ಅಕ್ಕಿ ಸಗಟು ವ್ಯಾಪಾರ ನಿರ್ಧಾರ ಅಚಲ**

ನವದೆಹಲಿ, ಜೂನ್ 28– ಗೋಧಿ ಸಂಗ್ರಹ ಕಾರ್ಯದಲ್ಲಿ ಸರ್ಕಾರದ ಸಾಧನೆ ನಿರೀಕ್ಷೆಗಿಂತ ಕಡಿಮೆಯಾಗಿದ್ದರೂ ಅದರಿಂದ ಕಾಂಗ್ರೆಸ್ ಕಾರ್ಯ ಸಮಿತಿ ಧೃತಿಗೆಡದೆ, ಅಕ್ಕಿ ಸಗಟು ವ್ಯಾಪಾರವನ್ನು ಸರ್ಕಾರ ವಹಿಸಿಕೊಳ್ಳಬೇಕೆಂದು ಇಂದು ಪುನರುಚ್ಚರಿಸಿತು.

ಇಂದು ಬೆಳಿಗ್ಗೆ ಇಲ್ಲಿ ಸಮಾವೇಶಗೊಂಡಿದ್ದ ಕಾಂಗ್ರೆಸ್ ಕಾರ್ಯಸಮಿತಿ, ಮುಂಗಾರು ಅವಧಿಯಿಂದಲೇ ಸರ್ಕಾರ ಅಕ್ಕಿ ಸಗಟು ವ್ಯಾಪಾರವನ್ನು ವಹಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟಿತು.


**• ಅಂತರ ಜಿಲ್ಲಾ ಆಹಾರ ಸಾಗಣೆ ನಿರ್ಬಂಧ ಸಡಿಲಿಕೆ ಬಗ್ಗೆ ಶೀಘ್ರವೇ ನಿರ್ಧಾರ**

ಬೆಂಗಳೂರು, ಜೂನ್ 28– ಬೆಲೆ ಏರಿಕೆಗೆ ಮುಖ್ಯ ಕಾರಣವೆಂದು ಭಾವಿಸಲಾಗಿರುವ ಅಂತರ ಜಿಲ್ಲಾ ಆಹಾರ ಸಾಗಣೆ ನಿರ್ಬಂಧ ಸಡಿಲಿಕೆ ಹಾಗೂ ಲೆವಿ ಕ್ರಮದಲ್ಲಿ ರಿಯಾಯಿತಿ ತರುವ ಬಗ್ಗೆ ಸರ್ಕಾರ ಸದ್ಯದಲ್ಲಿಯೇ ನಿರ್ಧಾರ ಕೈಗೊಳ್ಳುವ ನಿರೀಕ್ಷೆ ಇದೆ.

ನಿತ್ಯ ಅವಶ್ಯ ಸಾಮಗ್ರಿಗಳೆಂದು ಕೇಂದ್ರ ಸರ್ಕಾರ ಘೋಷಿಸಿರುವ 53 ಸಾಮಗ್ರಿಗಳ ಪೈಕಿ, ಯಥೇಚ್ಛವಾಗಿ ಮಾರುಕಟ್ಟೆಯಲ್ಲಿ ದೊರೆಯುತ್ತಿರುವ ಹಲವು ಸಾಮಗ್ರಿಗಳನ್ನು ಪಟ್ಟಿಯಿಂದ ತೆಗೆಯಲು ಯೋಚಿಸಲಾಗುತ್ತಿದೆ.

### ಹಸಿದವರಿಗೆ ಭಾವನಾತ್ಮಕ ವಿಷಯಗಳಿಗಿಂತ ಹೊಟ್ಟೆಪಾಡು ಬಹಳ ಮುಖ್ಯ

# ಬಡವರ ಸಿಟ್ಟು ಕುರ್ಚಿಗೆ ಪೆಟ್ಟು!



ಅನುಸಂಧಾನ

ರವೀಂದ್ರ ಭಟ್ಟ

**ವಿಧಾನಸಭೆ** ಚುನಾವಣೆ ಎಂಬ ಮಹಾಮಳೆ ಮುಗಿದಿದೆ. ಆದರೆ ಮರದ ಟೊಂಗೆಗಳಿಂದ ಹನಿ ಬೀಳುವುದು ನಿಂತಿಲ್ಲ. ಕಾಂಗ್ರೆಸ್ ಪಕ್ಷ ಅಧಿಕಾರದ ಗದ್ದುಗೆ ಏರಿದೆ. ಬಿಜೆಪಿ ಸೋತಿದೆ. ಇಷ್ಟಾದರೂ ಕಾಂಗ್ರೆಸ್ ಪಕ್ಷದ ಗೆಲುವಿಗೆ ಏನು ಕಾರಣ, ಬಿಜೆಪಿ ಸೋಲಿಗೆ ಏನೇನು ಕಾರಣ ಎಂಬ ಚರ್ಚೆ ಇನ್ನೂ ಮುಗಿದಿಲ್ಲ. ಗ್ಯಾರಂಟಿಗಳ ಭರವಸೆಗೆ ಮರುಳಾಗಿಯೇ ಕರ್ನಾಟಕದ ಜನರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ. ಆದರೆ ಫಲಿತಾಂಶವನ್ನು ಗಮನಿಸಿದರೆ, ನಿಜವಾಗಿ ಬಿಜೆಪಿಯನ್ನು ಸೋಲಿಸಿದ್ದು ಬಡವರ ಸಿಟ್ಟು ಎಂಬುದು ಸ್ಪಷ್ಟ. ಕರ್ನಾಟಕದಲ್ಲಿ ಈ ಬಾರಿ ಬಡವರ ಸಿಟ್ಟು ಬಿಜೆಪಿಯ ಅಧಿಕಾರದ ಕುರ್ಚಿಗೆ ಬಲವಾದ ಪೆಟ್ಟು ಕೊಟ್ಟಿದ್ದು ನಿಜ.

ಅತಿಯಾದರೆ ಅಮೃತವೂ ವಿಷ ಎಂಬ ಮಾತೊಂದಿದೆ. ಅದು ಬಿಜೆಪಿಯ ಪಾಲಿಗೆ ನಿಜವಾಗಿದೆ. ಕರ್ನಾಟಕ ವಿಧಾನಸಭೆಯ ಚುನಾವಣಾ ಫಲಿತಾಂಶವನ್ನು ಸೂಕ್ಷ್ಮವಾಗಿ ಗಮನಿಸಿದರೆ, ದಲಿತರು ಮತ್ತು ಮುಸ್ಲಿಮರು ಕಾಂಗ್ರೆಸ್ ಪಕ್ಷವನ್ನು ಸಾರಾಸಗಟಾಗಿ ಬೆಂಬಲಿಸಿದಂತೆ ಕಾಣುತ್ತದೆ. ಮುಸ್ಲಿಮರಿಗೆ ಅಭದ್ರತೆ ಸೃಷ್ಟಿಯಾಗಿತ್ತು. ಹಿಜಾಬ್, ಹಲಾಲ್, ಆಜಾನ್‌ನಂತಹ ವಿವಾದಗಳ ಜೊತೆಗೆ ವ್ಯಾಪಾರಕ್ಕೂ ತೊಂದರೆ ಕೊಡುವ ಪ್ರಯತ್ನಗಳು ನಡೆದವು. ಜಾತ್ರೆಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ಅವಕಾಶವಿಲ್ಲ ಎಂಬ ಅಭಿಯಾನ ನಿರಂತರವಾಗಿ ಸಾಗಿತು. ಬಿಜೆಪಿ ನೇತೃತ್ವದ ಸರ್ಕಾರವೇ ಮುಂದುವರಿದರೆ ತಮ್ಮ ಬದುಕನ್ನು ಸಂಪೂರ್ಣವಾಗಿ ಕಿತ್ತುಕೊಳ್ಳುತ್ತದೆ ಎಂಬ ಭಯ ಅವರನ್ನು ಕಾಡತೊಡಗಿತು. ಬಿಜೆಪಿ ವಿರುದ್ಧ ಗೆಲ್ಲುವ ಪಕ್ಷವೊಂದು ಅವರಿಗೆ ಬೇಕಾಗಿತ್ತು. ಕರ್ನಾಟಕದಲ್ಲಿ ಸಹಜವಾಗಿಯೇ ಅದು ಕಾಂಗ್ರೆಸ್ ಪಕ್ಷವಾಗಿತ್ತು.

ದಲಿತರಲ್ಲಿಯೂ ಇಂತಹದೇ ಭಯ ಇತ್ತು. ಸಂವಿಧಾನವನ್ನು ಬದಲು ಮಾಡುವ, ಮೀಸಲಾತಿಯನ್ನು ಕಿತ್ತುಕೊಳ್ಳುವ ಆತಂಕ ಅವರನ್ನು ಕಾಡತೊಡಗಿತ್ತು. ಜೊತೆಗೆ ಅಕ್ಕಿ, ಸಬ್ಸಿಡಿ ಸೇರಿದಂತೆ ಇತರ ಸೌಲಭ್ಯಕ್ಕೂ ಕತ್ತರಿ ಬಿತ್ತು. ಅದಕ್ಕಾಗಿ ಅವರೂ ಸಂಪೂರ್ಣವಾಗಿ ಕಾಂಗ್ರೆಸ್‌ನತ್ತ ವಾಲಿದರು. ಇದರ ಜೊತೆಗೆ ಎಲ್ಲ ಜಾತಿಗಳ ಬಡವರಿಗೂ ಬದುಕು ಕಷ್ಟಕರವಾಗಿತ್ತು. ಬೆಲೆ ಏರಿಕೆ ವಿಪರೀತವಾಗಿತ್ತು. ನಿರುದ್ಯೋಗದ ಪ್ರಮಾಣ ಹೆಚ್ಚಾಗಿತ್ತು. ಸೌಲಭ್ಯಗಳು ಕಡಿತಗೊಂಡಿದ್ದವು. ಆ ಕಾರಣಕ್ಕಾಗಿಯೇ ಚುನಾವಣೆ ದಿನಾಂಕ ಪ್ರಕಟವಾಗುವುದಕ್ಕೆ ಮೊದಲೇ ರಾಜ್ಯದ ಜನರು ಬಿಜೆಪಿಯನ್ನು ಸೋಲಿಸುವ ತೀರ್ಮಾನ ಮಾಡಿಯಾಗಿತ್ತು. ಕಾಂಗ್ರೆಸ್‌ನ ಗ್ಯಾರಂಟಿಗಳು ಆ ಪಕ್ಷದ ಜಯದ ಓಟಕ್ಕೆ ವೇಗವನ್ನು ತಂದುಕೊಟ್ಟವೇ ವಿನಾ ಬಿಜೆಪಿ ಸೋಲಿಗೆ ಮೊದಲೇ ಮುಹೂರ್ತ ನಿಗದಿಯಾಗಿತ್ತು.

ನೂರು ರಾಮಮಂದಿರಗಳನ್ನು ಕಟ್ಟಿ. ಸಾವಿರ ಪ್ರತಿಮೆಗಳನ್ನು ನಿರ್ಮಾಣ ಮಾಡಿ. ಭಾವನಾತ್ಮಕವಾಗಿ ಯಾವುದೇ ಹೊಸ ಹೊಸ ವಿಷಯಗಳನ್ನು ತೇಲಿಬಿಡಿ. ಪ್ರಜೆಗಳಿಗೆ ಮುಖ್ಯವಾಗುವುದು ಹೊಟ್ಟೆಪಾಡೇ ವಿನಾ ಮತ್ಯಾವುದೇ ವಿಷಯಗಳಲ್ಲ. ‘ಪೆಟ್ರೋಲ್ ಬೆಲೆ ಇನ್ನೂರು ರೂಪಾಯಿ ಆದರೂ ಪರವಾಗಿಲ್ಲ. ನನ್ನ ಮತ ಮೋದಿಗೆ’ ಎಂದು ಹೇಳುತ್ತಿದ್ದವರೂ ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಮತ ಚಲಾಯಿಸಿದ್ದಾರೆ. ‘ಗ್ಯಾರಂಟಿ ಯೋಜನೆಗಳಿಗೆ ಹಣ ಎಲ್ಲಿಂದ ತರುತ್ತೀರಿ? ರಾಜ್ಯವನ್ನು ಸಂಪೂರ್ಣ ದಿವಾಳಿ ಮಾಡುತ್ತೀರಿ. ಕರ್ನಾಟಕವೂ ಇನ್ನೊಂದು ಶ್ರೀಲಂಕಾ ಮತ್ತೊಂದು ಪಾಕಿಸ್ತಾನವಾಗುತ್ತದೆ. ಎಚ್ಚರ, ಎಚ್ಚರ’ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಬೆದರಿಕೆಯ ಸರಣಿಯನ್ನೇ ಬಿಟ್ಟರೂ ಜನ ಮಾತ್ರ ವಿಚಲಿತರಾಗಲಿಲ್ಲ.

ಬಡವರ ಸಿಟ್ಟು ಬರೀ ಕರ್ನಾಟಕದ ವಿಧಾನಸಭಾ ಚುನಾವಣೆಗೆ ಸೀಮಿತವಾದ ಹಾಗೆ ಕಾಣುತ್ತಿಲ್ಲ. ದೇಶದಲ್ಲಿ ವರ್ಷಾಂತ್ಯದೊಳಗೆ ನಡೆಯುವ ಕೆಲವು ರಾಜ್ಯಗಳ ವಿಧಾನಸಭಾ ಚುನಾವಣೆಗಳಿಗೂ ಇದು ವ್ಯಾಪಿಸುವ ಲಕ್ಷಣ ಕಾಣುತ್ತಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲೂ ಬಡವರ ಸಿಟ್ಟು ವ್ಯಾಪಕವಾಗಿಯೇ ಏಟು ಕೊಡುವ ಸಾಧ್ಯತೆ ಇದೆ.

ಭಾರತದ ಜನರಿಗೆ ಬೇಕಾಗಿರುವುದು ಕಣ್ಣೀರು ಒರೆಸುವ ನಾಯಕನೇ ವಿನಾ ಕಣ್ಣೀರು ಮರೆಸುವ ನಾಯಕನಲ್ಲ (ಕುಸ್ತಿಪಟುಗಳ ಪ್ರತಿಭಟನೆ, ಮಣಿಪುರ ಹಿಂಸೆ ನೆನಪಿಸಿಕೊಳ್ಳಿ). ಪ್ರೀತಿ ಹಂಚುವ ನಾಯಕನೇ ಬೇಕು, ದ್ವೇಷ ಹಂಚುವ ನಾಯಕನಲ್ಲ. ಮಾತಿನಲ್ಲಿ ಅರಮನೆ ಕಟ್ಟುವ ಮೇಧಾವಿಗಿಂತ ಮೌನದಲ್ಲಿಯೇ ಮಮತೆ ತೋರುವ ನಾಯಕ ಬೇಕು. ಮಂದಿರ ಕಟ್ಟುವೆನೆಂಬ ನಾಯಕತ್ವಕ್ಕಿಂತ ಮನುಜರ ಉದರದಲ್ಲಿ ತುತ್ತಿನರಮನೆ ಕಟ್ಟುವ ನಾಯಕತ್ವ ಬೇಕು. ಏಕರೂಪ ನಾಗರಿಕ ಸಂಹಿತೆಗಿಂತ ಎಲ್ಲರನ್ನೂ ಏಕರೂಪದಲ್ಲಿ ನಡೆಸಿಕೊಂಡು ಹೋಗುವ, ಕೈಹಿಡಿದು ಮೇಲೆತ್ತುವ ನಾಯಕತ್ವ ಬೇಕು. ಅಯೋಧ್ಯಾ ರಥಯಾತ್ರೆ ಆಯ್ತು, ರಾಮಮಂದಿರ ಆಯ್ತು, ಮುಸ್ಲಿಂ ದ್ವೇಷ ಆಯ್ತು, ಪಾಕಿಸ್ತಾನದ ಮೇಲಿನ ಸರ್ಜಿಕಲ್ ಸ್ಟ್ರೈಕ್ ಆಯ್ತು, ಕಾಶ್ಮೀರದ ವಿಷಯ ಆಯ್ತು, ತ್ರಿವಳಿ ತಲಾಖ್ ಆಯ್ತು, ಈಗ ಏಕರೂಪದ ನಾಗರಿಕ ಸಂಹಿತೆ ಎಂಬ ಭೂತ ಹೊರಬಂದಿದೆ. ಎಲ್ಲವನ್ನೂ ಮರೆಸಲು ಅವರು ಪ್ರಯತ್ನಿಸಬಹುದು. ಆದರೆ ಹೊಟ್ಟೆಪಾಡು ಯಾವುದನ್ನೂ ಮರೆಸುವುದಿಲ್ಲ.


ಅಮೆರಿಕ ಮತ್ತು ಈಜಿಪ್ಟ್‌ಗಳಿಗೆ ಆರು ದಿನ ಪ್ರವಾಸ ಹೋಗಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ವಾಪಸು ಬಂದ ತಕ್ಷಣ ‘ದೇಶದಲ್ಲಿ ಏನಾಗುತ್ತಿದೆ?’ ಎಂದು ಕೇಳಿದರು. ಅದಕ್ಕೆ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ‘ದೇಶ ಸಂತೋಷದಿಂದ ಇದೆ’ ಎಂದು ಉತ್ತರಿಸಿದರು. ‘ಭಾರತ ಪ್ರಕಾಶಿಸುತ್ತಿದೆ’ ಎಂದು ಹೇಳುತ್ತಿರುವಾಗಲೇ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರವನ್ನು ದೇಶದ ಜನ ಕತ್ತಲೆಯ ಕೂಪಕ್ಕೆ ತಳ್ಳಿದರು. ದೇಶ ಸಂತೋಷದಿಂದ ಇದೆ ಎಂದು ಹೇಳುತ್ತಿರುವ ಈಗಿನ ಸರ್ಕಾರಕ್ಕೂ ಅಂತಹದೇ ಸ್ಥಿತಿ ಬಂದರೆ ಅಚ್ಚರಿಯಿಲ್ಲ. ಒಂದು ಕಾಲದಲ್ಲಿ ಇಂದಿರಾ ಅಂದರೆ ಇಂಡಿಯಾ, ಇಂಡಿಯಾ ಅಂದರೆ ಇಂದಿರಾ ಎಂದು ಹೇಳಲಾಗುತ್ತಿತ್ತು. ಈಗಲೂ ಅದೇ ಸ್ಥಿತಿ ಇದೆ. ಭಾರತ ಎಂದರೆ ಮೋದಿ, ಮೋದಿ ಎಂದರೆ ಭಾರತ ಎಂದೇ ಭಜನೆ ಮಾಡಲಾಗುತ್ತಿದೆ. ಇಂದಿರಾ ಎಂದರೆ ಇಂಡಿಯಾ ಎಂದು ಹೇಳುತ್ತಿದ್ದ ಕಾಂಗ್ರೆಸ್ ಪಕ್ಷ ಕೂಡ ಸೋತು ಸೊರಗಿತು. ಈಗಿನವರಿಗೂ ಈ ಇತಿಹಾಸ ತಿಳಿದಿದ್ದರೆ ಒಳಿತು. ಇಲ್ಲವಾದರೆ ಇವರೂ ಇತಿಹಾಸದ ಪುಟದಲ್ಲಿ ಸೇರಬಹುದು.

ಅಮೆರಿಕ ಪ್ರವಾಸಕ್ಕೆ ಹೋಗುವ ಮುನ್ನ ಮೋದಿ ಅವರು ತುರ್ತು ಪರಿಸ್ಥಿತಿ ಬಗ್ಗೆ ಮಾತನಾಡಿದರು. ಆ ಕಾಲಕ್ಕೆ ಅತ್ಯಂತ ಪ್ರಭಾವಿ ನಾಯಕರಾಗಿದ್ದ ಇಂದಿರಾ ಗಾಂಧಿ 1977ರ ಚುನಾವಣೆಯಲ್ಲಿ ಸೋಲಬೇಕಾಯಿತು. ಆಗಿನ ಕಾಲದಲ್ಲಿ ಇಂದಿರಾ ಕಾಂಗ್ರೆಸ್ ಪಕ್ಷದಿಂದ ಒಂದು ಕತ್ತೆಯನ್ನು ನಿಲ್ಲಿಸಿದರೂ ಗೆಲ್ಲುತ್ತದೆ ಎಂಬ ಮಾತು ಇತ್ತು. ಈಗಲೂ ಹಾಗೆಯೇ ಮೋದಿ ಹೆಸರಿನಿಂದಲೇ ಗೆಲುವು ಸಿಗುತ್ತದೆ ಎಂಬ ಭಾವನೆ ಕೆಲವರಲ್ಲಿ ಇದೆ. 1977ರಲ್ಲಿಯೂ ಇಂದಿರಾ ಗಾಂಧಿ ಅವರಿಗೆ ಪರ್ಯಾಯವಾಗಬಲ್ಲ ಇನ್ನೊಬ್ಬ ಪ್ರಭಾವಿ ನಾಯಕನಿರಲಿಲ್ಲ. ವಿರೋಧ ಪಕ್ಷಗಳು ಒಂದಾಗುವ ಭರವಸೆ ಇರಲಿಲ್ಲ. ಆದರೂ ಉತ್ತರ ಭಾರತದಲ್ಲಿ ಕಾಂಗ್ರೆಸ್ ಪಕ್ಷ ಸಂಪೂರ್ಣವಾಗಿ ದೂಳೀಪಟವಾಯಿತು. ಅಂದರೆ ಯಾವುದೇ ಪಕ್ಷವನ್ನು ಸೋಲಿಸುವುದಕ್ಕಾಗಿ ಭಾರತದ ಜನ ಇನ್ನೊಂದು ಪಕ್ಷದ ನಾಯಕತ್ವವನ್ನು ನೋಡುವುದಿಲ್ಲ. ‘ಈ ಪಕ್ಷ ಸೋಲಬೇಕು ಅಷ್ಟೆ’ ಎಂದು ನಿರ್ಧರಿಸುತ್ತಾರೆ. ಅವಕಾಶ ಮತ್ತು ಪರಿಸ್ಥಿತಿ ಹೊಸ ನಾಯಕತ್ವವನ್ನು ಹುಟ್ಟುಹಾಕುತ್ತದೆ.

ದೇಶದಲ್ಲಿ ಈಗಲೂ ಅಂತಹದೇ ಸ್ಥಿತಿ ಇದೆ. ವಿರೋಧ ಪಕ್ಷಗಳು ಒಂದಾಗುವುದಿಲ್ಲ, ಮೋದಿಗೆ ಪರ್ಯಾಯವಾಗಬಲ್ಲ ಇನ್ನೊಬ್ಬ ನಾಯಕ ಇಲ್ಲ ಎಂದು ಬಿಜೆಪಿ ಹೇಳುತ್ತಿದೆ. ಮೇಲ್ನೋಟಕ್ಕೆ ಇದು ಸತ್ಯವೂ ಹೌದು. ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿಯೆನ್ನುವುದು ಖಾತರಿಯಾದರೆ ಬಡವರು ಹೊಸ ನಾಯಕನನ್ನು ಹುಟ್ಟುಹಾಕುತ್ತಾರೆ. ಪೆಟ್ಟೂ ಕೊಡುತ್ತಾರೆ. ಇದು ಅವರ ವಿಷಯದಲ್ಲೂ ಹೌದು, ಇವರ ವಿಷಯದಲ್ಲೂ ಹೌದು.



## ಚುರುಮುರಿ



### ಸುಭಿಕ್ಷ ‘ವಂದೇ ಭಾರತ’

• ಗುರು ಪಿ.ಎಸ್.

**ಪರದೇಶದಿಂದ** ಪುಷ್ಪಕ ವಿಮಾನದಲ್ಲಿ ಬಂದು ಭರತ ವರ್ಷದಲ್ಲಿ ಇಳಿದರು ಮಹಾರಾಜ.

‘ಸೇನಾಧಿಪತಿ, ದೇಶ ಸೌಖ್ಯವೇ, ಕುಶಲವೇ...? ನನ್ನ ಪ್ರಿಯ ಪ್ರಜೆಗಳು ಹೇಗಿರುವರು?’ ಕೇಳಿದರು ವಿಶ್ವದೊರೆ.

‘ಬೆರಳ ತುದಿಯಲ್ಲೇ ಎಲ್ಲವನ್ನೂ ತಿರುಗಿಸಬಲ್ಲ, ತಿಳಿಯಬಲ್ಲ ನಿಮಗೆ ಸ್ವಂತ ದೇಶದ ಮಾಹಿತಿ ಗೊತ್ತಾಗಲಿಲ್ಲವೇ ಮಹಾರಾಜ? ಇರಲಿ, ನೆಟ್‌ವರ್ಕ್ ಸಮಸ್ಯೆ ಇತ್ತು ಎನಿಸುತ್ತದೆ. ನಾನೇ ಹೇಳುವೆ’ ಎಂದ ಸೇನಾಧಿಪತಿ ಮಾತು ಮುಂದುವರಿಸಿದರು.

‘ಮೆಜೆಸ್ಟಿಕ್‌ನಿಂದ ಯಶವಂತಪುರದ ನಡುವೆ ನಿತ್ಯವೂ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಓಡಾಡುವಷ್ಟು ಜನ ಸಿರಿವಂತರಾಗಿದ್ದಾರೆ ಪ್ರಭು’.

‘ಓಹ್, ಹೌದೇ! ಒಳ್ಳೆಯದು, ಒಳ್ಳೆಯದು’ ಖುಷಿಯಾದರು ದೊರೆ.

‘ಅಷ್ಟೇ ಅಲ್ಲ ಮಹಾರಾಜ. ಬೆಳಿಗ್ಗೆ ಟೊಮ್ಯಾಟೊ ಸೂಪ್, ತಿಂಡಿಗೆ ಟೊಮ್ಯಾಟೊ ದೋಸೆ, ರಾತ್ರಿಗೆ ಟೊಮ್ಯಾಟೊ ಬಾತ್ ತಿಂದುಕೊಂಡು ದಷ್ಟಪುಷ್ಟರಾಗಿದ್ದಾರೆ’.

‘ಅದ್ಭುತ, ಅದ್ಭುತ! ಆದರೂ, ನಿಮ್ಮ ಮುಖವೇಕೆ ಕಪ್ಪಿಟ್ಟಿದೆ ಸೇನಾಧಿಪತಿಗಳೇ?’

‘ತಪ್ಪು ಭಾವಿಸಬೇಡಿ. ನಿಮ್ಮ ಪ್ರಭಾವ ವಿಶ್ವದಲ್ಲೇ ಹರಡಿದೆ. ಆದರೂ, ದಕ್ಷಿಣ ಭಾರತದಲ್ಲಿ ಒಂದು ರಾಜ್ಯವನ್ನೂ ನಮ್ಮ ತೆಕ್ಕೆಗೆ ತೆಗೆದುಕೊಳ್ಳಲಾಗಲಿಲ್ಲವಲ್ಲ ಎಂಬ ಹಳಹಳಿಕೆಯೂ ಕಾಡುತ್ತಿದೆ’

‘ಹೌದೇ! ದಕ್ಷಿಣದ ನಮ್ಮ ಸಾಮಂತರೆಲ್ಲ ಏನು ಮಾಡುತ್ತಿದ್ದಾರೆ?’

‘ಸೋಲಿಗೆ ನೀನು ಕಾರಣ ಎಂದು ಒಬ್ಬರಿಗೊಬ್ಬರ ಮೇಲೆ ಆರೋಪ, ಪ್ರತ್ಯಾರೋಪದಲ್ಲೇ ನಿರತರಾಗಿದ್ದಾರೆ ಮಹಾರಾಜ’.

‘ನಾವು ಹೋಗಿ ಬಂದ ಮೇಲಲ್ಲವೇ ಅಲ್ಲಿ ಸೋತಿದ್ದು’.

‘ಹೌದು ನನ್ನೊಡೆಯ. ಅಲ್ಲಿ ಗೆದ್ದಿದ್ದರೆ ನಿಮ್ಮ ನಾಮಸ್ಮರಣೆಯೇ ನಡೆಯುತ್ತಿತ್ತು. ಸೋತಿದ್ದರಿಂದ ಅವರವರೇ ಕಚ್ಚಾಡುತ್ತಿದ್ದಾರೆ’.

‘ಹಾಗಾದರೆ, ಒಂದು ಕೆಲಸ ಮಾಡೋಣ’.

‘ಏನು ಮಹಾರಾಜ?’

‘2024ರಲ್ಲಿ ಗೆದ್ದ ನಂತರವೇ ದಕ್ಷಿಣದತ್ತ ಹೋಗೋಣ. ಗೆದ್ದ ಶ್ರೇಯ ಮಾತ್ರ ನಮ್ಮದಾಗಲಿ!’

## ಸಂಗತ

# ಉತ್ಸಾಹದ ‘ಶಕ್ತಿ’ ಕುಂದದಿರಲಿ

**ಈ ಯೋಜನೆಯಿಂದ, ಮನೆಯಿಂದ ಹೊರಬಂದು ದುಡಿಯುವ, ಸ್ವಾವಲಂಬಿಗಳಾಗಿ ಬದುಕಲು ಇಚ್ಛಿಸುವ ಮಹಿಳೆಯರ ಸಂಖ್ಯೆ ಹೆಚ್ಚಾಗಲಿದೆ**

• ಡಾ. ಜ್ಯೋತಿ

**ರಾಜ್ಯ ಸರ್ಕಾರ** ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸುವ ‘ಶಕ್ತಿ’ ಯೋಜನೆ ಜಾರಿಗೆ ತಂದಂದಿನಿಂದ, ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳು ಮತ್ತು ಜನಸಾಮಾನ್ಯರ ನಡುವೆ ಈ ಕುರಿತು ಬಹಳಷ್ಟು ಪರ, ವಿರೋಧದ ಚರ್ಚೆಗಳು ಆರಂಭವಾಗಿವೆ. ಯೋಜನೆಯ ಕುರಿತು ಅಸಹನೆ, ವ್ಯಂಗ್ಯ, ಕುಹಕ ಮತ್ತು ಅದು ತಂದೊಡ್ಡುವ ಸಮಸ್ಯೆಗಳ ಅತಿಯಾದ ವೈಭವೀಕರಣ ಎಲ್ಲವೂ ಕಂಡುಬರುತ್ತಿವೆ.

ಈ ಕಾರಣದಿಂದ, ರಾಜ್ಯದ ಮಹಿಳೆಯರ ಸಬಲೀಕರಣಕ್ಕೆ ಶಕ್ತಿ ಯೋಜನೆ ಹೇಗೆ ಪೂರಕವಾಗಬಹುದು, ಎಂತಹ ಪರಿಸ್ಥಿತಿಯಲ್ಲಿಯೂ ಇದನ್ನು ನಿಲ್ಲಿಸದಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕಾದ ಅಗತ್ಯವೇನಿದೆ ಎನ್ನುವುದನ್ನು ಚರ್ಚಿಸಬೇಕಾಗಿದೆ.

ಮೊದಲನೆಯದಾಗಿ, ಶಕ್ತಿ ಯೋಜನೆ ಮಹಿಳೆಯರ ಸಬಲೀಕರಣದತ್ತ ಒಂದು ದಿಟ್ಟ ಹೆಜ್ಜೆ. ಮಹಿಳೆಯರ ಅಭಿವೃದ್ಧಿಗಾಗಿ ಬಹಳಷ್ಟು ಯೋಜನೆಗಳಿವೆ, ನಿಜ. ಆದರೆ, ಇವುಗಳಲ್ಲಿ ಬಹುತೇಕ ಮೂಲ ಆಶಯದಂತೆ ಕಾರ್ಯಗತಗೊಂಡಿಲ್ಲ. ಇನ್ನೊಂದು ಗಮನಾರ್ಹ ಅಂಶವೆಂದರೆ, ಮಹಿಳೆಯರಿಗೆ ಸಂಬಂಧಿಸಿದ ಹೆಚ್ಚಿನ ಯೋಜನೆಗಳು, ಅವರ ಮೇಲೆ ವ್ಯವಸ್ಥೆ ಹೇರಿರುವ ಜವಾಬ್ದಾರಿಗಳಿಗೆ ಪೂರಕವಾಗಿವೆಯೇ ವಿನಾ ಅವರಿಗೆ ಸ್ವಾತಂತ್ರ್ಯದ ಅನುಭವ ನೀಡುವಂತಹವಲ್ಲ.

ಆರ್ಥಿಕ ಕಾರಣಕ್ಕಾಗಿ ಶಿಕ್ಷಣದಿಂದ ವಂಚಿತರಾಗುತ್ತಿರುವ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಸಿಕ್ಕಂತಾಗುತ್ತದೆ. ಮನೆಯಿಂದ ಹೊರಬಂದು ದುಡಿಯುವ, ಸ್ವಾವಲಂಬಿಗಳಾಗಿ ಬದುಕಲಿಚ್ಛಿಸುವವರ ಸಂಖ್ಯೆ ಹೆಚ್ಚಾಗಲಿದೆ. ಜೊತೆಗೆ, ಮಹಿಳೆಯರು ಬಾಹ್ಯ ಪ್ರಪಂಚದಲ್ಲಿ ತೊಡಗಿಸಿಕೊಂಡಂತೆ, ಅವರ ಕುರಿತಾದ ಅಪನಂಬಿಕೆ, ಸಂಶಯ, ಕುಹಕ, ಅಪಹಾಸ್ಯದ ನಾಣ್ನುಡಿಗಳು ಕಣ್ಮರೆಯಾಗಿ, ಸಮಾಜದಲ್ಲಿ ಸಹಬಾಳ್ವೆ ಸೃಷ್ಟಿಯಾಗುತ್ತದೆ. ಹಾಗಾಗಿ, ಈ ಯೋಜನೆ ಯಶಸ್ವಿಯಾಗಲು, ಬರೀ ಒಂದು ಪಕ್ಷ, ಒಂದು ಸರ್ಕಾರ ಕಾರ್ಯಪ್ರವೃತ್ತವಾದರೆ ಸಾಲದು, ಎಲ್ಲಾ ಸ್ವಸ್ಥ ಮನಸ್ಸುಗಳು ಕೈಜೋಡಿಸಬೇಕಾದ ಅಗತ್ಯವಿದೆ.

ಇದರ ಒಂದು ಉತ್ತಮ ಅಂಶವೆಂದರೆ, ಇದು ಎಲ್ಲಾ ವರ್ಗ, ಜಾತಿ ಮತ್ತು ಧರ್ಮದ ಹೆಣ್ಣುಮಕ್ಕಳನ್ನೂ ಒಳಗೊಂಡಿದೆ. ಮಹಿಳೆಯರು ಸಮಾಜದಲ್ಲಿ ದ್ವಿತೀಯ ದರ್ಜೆಯ ಪ್ರಜೆಗಳಾಗಿಯೇ ಉಳಿದಿದ್ದಾರೆ ಮತ್ತು ಶ್ರಮಜೀವಿಗಳಾದರೂ ತೀವ್ರ ಮಟ್ಟದ ಆರ್ಥಿಕ ಅಭದ್ರತೆ ಎದುರಿಸುತ್ತಾರೆ. ಇಂತಹವರಿಗೆ ಶಕ್ತಿ ತುಂಬಲು ಈ ಯೋಜನೆ ಬಹಳ ಮುಖ್ಯವೆನಿಸುತ್ತದೆ. ಬಾಹ್ಯ ಪ್ರಪಂಚದಲ್ಲಿ ಧೈರ್ಯದ, ಸ್ವಾವಲಂಬನೆಯ, ಗಟ್ಟಿಧ್ವನಿಯ ಹೆಣ್ಣುಮಕ್ಕಳನ್ನು ಹೆಚ್ಚು ಕಂಡಷ್ಟೂ ಗಂಡುಮಕ್ಕಳು ಅನಿವಾರ್ಯವಾಗಿ ತಮ್ಮ ವರ್ತನೆಯನ್ನು ತಿದ್ದಿಕೊಂಡು, ‘ಹೆಣ್ಣೆಂದರೆ ವಸ್ತುವಲ್ಲ, ನಮ್ಮಂತೆಯೇ ಸ್ವತಂತ್ರವಾಗಿ ಬದುಕಬೇಕಾದ ಜೀವಿ, ಅವಳಿಗೆ ಗೌರವ ಕೊಟ್ಟರಷ್ಟೇ ನಮಗೆ ಗೌರವ ಸಿಗುತ್ತದೆ’ ಎನ್ನುವ ಪಾಠ ಕಲಿಯುತ್ತಾರೆ.

2021ರ ವಿಶ್ವಬ್ಯಾಂಕ್ ವರದಿಯಂತೆ, ನಮ್ಮ ದೇಶದಲ್ಲಿ ಬರೀ ಶೇ 23ರಷ್ಟು ಮಹಿಳೆಯರು ಹೊರಗೆ ದುಡಿಯುತ್ತಿದ್ದಾರೆ. ಈ ದಿಸೆಯಲ್ಲಿ ಶಕ್ತಿ ಯೋಜನೆಯು ಹೆಣ್ಣುಮಕ್ಕಳು ಬೃಹತ್ ಪ್ರಮಾಣದಲ್ಲಿ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುತ್ತದೆ.

ದುರುಪಯೋಗ ಹೆಚ್ಚಾದಲ್ಲಿ ಯೋಜನೆ ದುರ್ಬಲಗೊಂಡು, ಇದರ ಆರ್ಥಿಕ ಹೊರೆಯೊಂದೇ ಜನರಿಗೆ ಗೋಚರವಾಗಬಹುದು. ವಿವಿಧ ಸಂಘ– ಸಂಸ್ಥೆಗಳು ಇದನ್ನು ನಿಲ್ಲಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಬಹುದು. ಹಾಗೆಯೇ, ಆರ್ಥಿಕ ಹೊರೆಯ ಬಿಸಿ ಮುಟ್ಟಿದಂತೆ, ಸರ್ಕಾರವೂ ಯಾವುದಾದರೂ ನೆಪದಲ್ಲಿ ಇದನ್ನು ನಿಲ್ಲಿಸಬಹುದು. ಆದ್ದರಿಂದ, ಇದ್ಯಾವುದೂ ಆಗಗೊಡದಂತೆ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ.

ಕಾಂಗ್ರೆಸ್ ಪಕ್ಷದೊಳಗೇ ಮುಂದಿನ ದಿನಗಳಲ್ಲಿ ಈ ಯೋಜನೆಗೆ ಪ್ರತಿರೋಧ ಕಂಡುಬರಬಹುದು. ಯಾಕೆಂದರೆ, ಪಕ್ಷಕ್ಕೆ ಇದೊಂದು ಮಹಿಳಾ ಮತ ಸೆಳೆಯುವ ತಂತ್ರವಾಗಿತ್ತೇ ವಿನಾ ಯಾರೇ ವಿರೋಧಿಸಿದರೂ ಸರಿ, ಎಷ್ಟೇ ಖರ್ಚಾದರೂ ಸರಿ, ರಾಜ್ಯದ ಮಹಿಳೆಯರನ್ನು ಉದ್ಧಾರ ಮಾಡಿಯೇ ತೀರಬೇಕೆಂಬ ಉದಾತ್ತ ಚಿಂತನೆಯಿಂದ ಮೂಡಿಬಂದ ಕಾರ್ಯಕ್ರಮವಲ್ಲ. ತನ್ನ ಪಕ್ಷದಿಂದ ಗೆದ್ದಿರುವ ಎಲ್ಲಾ ನಾಲ್ವರು ಮಹಿಳೆಯರನ್ನು ಮಂತ್ರಿಗಳನ್ನಾಗಿಸಿ ಒಂದು ಅನನ್ಯ ಪರಂಪರೆಯನ್ನು ಸೃಷ್ಟಿಸುವ ಬದಲಾಗಿ, ಅದನ್ನೊಂದೇ ಮಹಿಳೆ ನಿರ್ವಹಿಸಲು ಲಾಯಕ್ ಎನ್ನುವಂತೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಹೊಣೆಯನ್ನು ಮಾತ್ರ ನೀಡಲಾಗಿದೆ.




ಜೊತೆಗೆ, ನಮ್ಮ ರಾಜ್ಯದ ಜನಸಾಮಾನ್ಯರೇ ಈ ಯೋಜನೆಯ ಫಲಾನುಭವಿಗಳು ಎನ್ನುವುದನ್ನು ವಿರೋಧಪಕ್ಷಗಳು ಮರೆತು ವರ್ತಿಸುತ್ತಿರುವುದನ್ನು ಕಾಣಬಹುದಾಗಿದೆ. ಈ ದಿಸೆಯಲ್ಲಿ ಶಕ್ತಿ ಯೋಜನೆಯನ್ನು ಎಲ್ಲಾ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಸೇರಿಸಿಕೊಳ್ಳಲಿ, ಅಧಿಕಾರದಲ್ಲಿರುವ ಪಕ್ಷಗಳು ಬದಲಾದರೂ ಶಕ್ತಿ ಯೋಜನೆಯ ಶಕ್ತಿ ಕುಂದದಿರಲಿ ಎಂಬುದು ಮಹಿಳಾಪರ ಮನಸ್ಸುಗಳ ಹಾರೈಕೆ. ಶಕ್ತರಾದ ಮಹಿಳೆಯರು ಟಿಕೆಟ್ ಖರೀದಿಸಿ ಯೋಜನೆಯ ಯಶಸ್ಸಿಗೆ ಕೈಜೋಡಿಸಬೇಕಿದೆ. ಮಾಧ್ಯಮಗಳು ಕೂಡ ಯೋಜನೆಯ ಅನುಷ್ಠಾನದಲ್ಲಿನ ಲೋಪದೋಷಗಳನ್ನಷ್ಟೇ ಎತ್ತಿಹಿಡಿಯದೆ, ಅದನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳಲು ನಾಗರಿಕರು ಮತ್ತು ಸರ್ಕಾರದ ಮುಂದಿರುವ ಮಾರ್ಗಗಳೇನು ಅನ್ನುವುದನ್ನು ಹೆಚ್ಚು ಚರ್ಚಿಸಬೇಕಿದೆ.

ಈ ಯೋಜನೆ ಯಶಸ್ವಿಯಾಗಿ ಮುಂದುವರಿದಲ್ಲಿ, ಬಹುಶಃ, ಗಾಂಧಿಯ ಕನಸಿನ ಸ್ವತಂತ್ರ ಭಾರತದಂತೆ, ರಾತ್ರಿ ಹೊತ್ತಿನಲ್ಲಿಯೂ ನಿರ್ಭೀತಿಯಿಂದ, ಸ್ವಾಭಿಮಾನದಿಂದ ಸ್ವತಂತ್ರವಾಗಿ ಓಡಾಡುವ ಹೆಣ್ಣುಮಕ್ಕಳು ಕಾಣಸಿಗಬಹುದು.

## ವಾಚಕರ ವಾಣಿ

### ಸಜ್ಜನ ವ್ಯಕ್ತಿಯ ಭಿನ್ನ ನೆನಪು

ಸರಳ, ಸಜ್ಜನ, ಹಮ್ಮುಬಿಮ್ಮುಗಳಿರದಿದ್ದ ಕನ್ನಡ ಚಲನಚಿತ್ರ ನಿರ್ದೇಶಕ, ಗೀತಸಾಹಿತಿ ಸಿ.ವಿ.ಶಿವಶಂಕರ್ ಅವರು ನಿಧನರಾಗಿರುವ ಈ ಸಂದರ್ಭದಲ್ಲಿ, ನಾನು ಅವರನ್ನು ಭಿನ್ನವಾಗಿ ನೆನಪಿಸಿಕೊಳ್ಳುತ್ತೇನೆ. ಅರವತ್ತರ ದಶಕದಲ್ಲಿ ಬೆಂಗಳೂರಿನಲ್ಲಿ ನಾನು ಓದುತ್ತಿದ್ದ ಕಾಲೇಜಿಗೆ ಅವರನ್ನು ಆಹ್ವಾನಿಸಲಾಗಿತ್ತು. ಕಾರವಾರದ ಕಡೆಯಿಂದ ಬಂದ ಹುಡುಗನೊಬ್ಬ ಕಾಲೇಜಿನಲ್ಲಿ ಇದ್ದಾನೆ ಎಂಬುದನ್ನು ತಿಳಿದು, ಆ ಹುಡುಗನಾಗಿದ್ದ ನನ್ನನ್ನು ಕರೆಸಿಕೊಂಡು ಖುಷಿ ಖುಷಿಯಾಗಿ ಮಾತನಾಡಿಸಿದ್ದರು. ಆ ಕಾಲದಲ್ಲಿ ಅವರ ಗೀತೆ ‘ನಾ ನೋಡಿ ನಲಿಯುವ ಕಾರವಾರ, ಓ ಕಾರವಾರ, ಕಡಲಿನ ತೀರ’ ಜನಮನವನ್ನು ತಟ್ಟಿತ್ತು. ಈ ನೆನಪು ಸದಾ ನನ್ನನ್ನು ಕಾಡುತ್ತದೆ.

**ಡಾ. ಈಶ್ವರ ಶಾಸ್ತ್ರಿ ಮೋಟಿನಸರ,** ಶಿರಸಿ

### ಭ್ರಮೆ ಬೇಡ, ವಾಸ್ತವದ ಅರಿವಿರಲಿ

‘ಕರ್ನಾಟಕವು ಕೇಂದ್ರ ಸರ್ಕಾರದಿಂದ ಎರಡನೇ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೌಲಭ್ಯ ಪಡೆದಿದ್ದು, ರಾಜ್ಯದಿಂದ ಕೇಂದ್ರಕ್ಕೆ ಹೋಗುವ ತೆರಿಗೆ ಹಣದ ಜೊತೆಗೆ ಬಡ್ಡಿ ಸಮೇತ ವಾಪಸ್ ಪಡೆಯುತ್ತಿದೆ’ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಟ್ವೀಟ್ ಮಾಡಿದ್ದಾರೆ. ಬಡವರು, ಕೂಲಿ ಕಾರ್ಮಿಕರು, ಮಧ್ಯಮವರ್ಗದವರು ಓಡಾಡಲು ಸಾಧ್ಯವಾಗದಷ್ಟು ದರ ಇರುವ ಎರಡು ಎಕ್ಸ್‌ಪ್ರೆಸ್ ರೈಲುಗಳನ್ನು ಬಿಟ್ಟ ಕಾರಣಕ್ಕೆ, ರಾಜ್ಯಕ್ಕೆ ತೆರಿಗೆ ಹಣ ಬಡ್ಡಿ ಸಮೇತ ಬಂದಿದೆ ಎಂಬುದು ಭ್ರಮೆಯೇ ವಿನಾ ಮತ್ತೇನೂ ಅಲ್ಲ.

**ಬೋರೇಗೌಡ ಜೆ.ಬಿ.,** ಕೆ.ಆರ್.ಪೇಟೆ, ಮಂಡ್ಯ

### ಸಿಗಲಿ ಜನಗಣತಿಗೆ ಶೀಘ್ರ ಚಾಲನೆ

ಭಾರತದಲ್ಲಿ ಕೊನೆಯ ಜನಗಣತಿ ನಡೆದು ಹನ್ನೆರಡು ವರ್ಷಗಳಾಗಿವೆ. ಇನ್ನೂ ನಮ್ಮ ಕೇಂದ್ರ ಸರ್ಕಾರ ಹೊಸ ಗಣತಿಯ ಬಗ್ಗೆ ತಲೆಕೆಡಿಸಿಕೊಂಡಂತಿಲ್ಲ. ಜನಗಣತಿಯು ದೇಶದ ಜನಸಂಖ್ಯೆ, ಲಿಂಗಾನುಪಾತ, ಜನಸಾಂದ್ರತೆ, ಶಿಶುಮರಣ ಪ್ರಮಾಣ, ಬೆಳವಣಿಗೆ ದರ, ಜನನ– ಮರಣ ಪ್ರಮಾಣ, ತಲಾವಾರು ವರಮಾನ, ದಶವಾರ್ಷಿಕ ಬೆಳವಣಿಗೆ ದರದಂತಹ ಹತ್ತು ಹಲವು ಅಂಶಗಳನ್ನು ಒಳಗೊಂಡಿರುತ್ತದೆ. ಇದು ದೇಶದ ಅಭಿವೃದ್ಧಿಯ ನೀಲನಕ್ಷೆ.

ಕೊರೊನೋತ್ತರ ಕಾಲಘಟ್ಟದಲ್ಲಿ ಜನರ ಜೀವನಶೈಲಿ ಹಾಗೂ ಅಭಿವೃದ್ಧಿಯ ಮಾದರಿ ಬದಲಾಗಿದೆ. ಅದರ ಸ್ಥೂಲ ಚಿತ್ರಣ ಸಿಗುವುದು ಗಣತಿಯಿಂದ ಮಾತ್ರ. ಈ ಮೂಲಕ ದೇಶದ ಅಭಿವೃದ್ಧಿಗೆ ಬೇಕಾದ ಪೂರಕ ನೀತಿಗಳ ಅನುಷ್ಠಾನ ಸಾಧ್ಯ. ಆದ್ದರಿಂದ ಗಣತಿಯ ಮಹತ್ವ ಅರಿತು ಬೇಗನೆ ಈ ಕಾರ್ಯಕ್ಕೆ ಚಾಲನೆ ನೀಡುವುದು ಉತ್ತಮ.

**ಶ್ವೇತಾ ನಾಗಪ್ಪ,** ಸೊರಬ

### ಆಟೊ ಚಾಲಕರಿಗೆ ನಷ್ಟವೇಕೆ?

ಹೆಣ್ಣುಮಕ್ಕಳಿಗೆ ‘ಶಕ್ತಿ’ ಯೋಜನೆ ನೀಡಿದ ಬಗ್ಗೆ ಬೆಂಗಳೂರಿನ ಆಟೊ ಚಾಲಕರೊಬ್ಬರು ವಿರೋಧ ವ್ಯಕ್ತಪಡಿಸಿದ್ದರ ಕುರಿತು ಪ್ರಿಯಾಸ್ಮಿತ ಎಂಬುವರು ಟ್ವೀಟ್ ಮೂಲಕ ಅಸಮಾಧಾನ ಹೊರಹಾಕಿದ್ದು ಪತ್ರಿಕೆಯಲ್ಲಿ ಪ್ರಕಟವಾಗಿದೆ (ಪ್ರ.ವಾ., ಜೂನ್ 27).

ಹಿಂದಿನ ವಾರ ನಾನು ಬೆಂಗಳೂರಿನ ಸಿವಿಲ್ ನ್ಯಾಯಾಲಯದಲ್ಲಿ ಕೇಸ್ ಮುಗಿಸಿ ಹೊರಬಂದಾಗ ತುಂತುರು ಮಳೆ ಸುರಿಯುತ್ತಿತ್ತು. ಎಲ್ಲಿಗೋ ಹೋಗಲು ಸುಮಾರು ಐದಾರು ಆಟೊಗಳನ್ನು ಕೇಳಿದಾಗ, ಅಲ್ಲಿಗೆ ಬರಲ್ಲ, ರಿಸರ್ವ್, ವೇಯ್ಟಿಂಗ್ ಎಂಬಂತಹ ಸಬೂಬುಗಳನ್ನು ಹೇಳಿದರು. ನಾನು ಕರೆದ ಸ್ಥಳಕ್ಕೆ ಬರಲು ಯಾರೂ ಸಿದ್ಧರಿರಲಿಲ್ಲ. ಆದರೆ ಒಬ್ಬ ಆಟೊ ಚಾಲಕ ಮಾತ್ರ ಸಮ್ಮತಿಸಿದರು. ಬಳಿಕ ನಾನು ಅವರಿಗೆ ‘ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಿರುವುದರಿಂದ ನಮಗೆ ನಷ್ಟವಾಗುತ್ತಿದೆ ಎಂದು ದೂರುತ್ತೀರಿ, ಆದರೆ ಪ್ರಯಾಣಿಕರು ಕರೆದೆಡೆ ನೀವು ಬರುವುದಿಲ್ಲವೇಕೆ’ ಎಂದು ವಿಚಾರಿಸಿದಾಗ ಆತ ನೀಡಿದ ಉತ್ತರ ಹೀಗಿತ್ತು. ‘ಸರ್, ನಾವು ದಿನಕ್ಕೆ 250 ರೂಪಾಯಿಯಂತೆ ಬಾಡಿಗೆಗೆ ಆಟೊ ಪಡೆದು ಓಡಿಸುವವರು, ಪ್ರಯಾಣಿಕರು ಕರೆದ ಕಡೆಗೆಲ್ಲ ಹೋಗುತ್ತೇವೆ. ಆದರೆ ಸ್ವಂತ ಆಟೊ ಹೊಂದಿರುವವರು ಪ್ರಯಾಣಿಕರು ಕರೆದ ಕಡೆ ಬರದೆ ಸಬೂಬು ಹೇಳುತ್ತಾರೆ’. ಹೆಚ್ಚಿನ ಆಟೊ ಚಾಲಕರಿಗೆ ಈ ಮಾತು ಅನ್ವಯವಾಗುತ್ತದೆ ಎನಿಸಿತು.

ಪ್ರಯಾಣಿಕರು ಕರೆದ ಕಡೆ ಹೋಗುವುದರಿಂದ ಚಾಲಕರು ತಮಗಾಗುವ ನಷ್ಟದಿಂದ ತಪ್ಪಿಸಿಕೊಳ್ಳಬಹುದು. ಶಕ್ತಿ ಯೋಜನೆಯ ಉಪಯೋಗ ಆಟೊ ಚಾಲಕರ ಮನೆಗಳಲ್ಲಿನ ಹೆಣ್ಣುಮಕ್ಕಳಿಗೂ ಅನ್ವಯವಾಗುತ್ತದೆ ತಾನೇ.

**ಮಲ್ಲತಹಳ್ಳಿ ಡಾ. ಎಚ್. ತುಕಾರಾಂ,** ಬೆಂಗಳೂರು

### ಮರ್ಯಾದೆಗೇಡು ಹತ್ಯೆ: ಕಠಿಣ ಶಿಕ್ಷೆಯಾಗಲಿ

ಬುದ್ಧ, ಬಸವ, ಅಂಬೇಡ್ಕರ್ ಅವರಂತಹ ಮಹಾಮಹಿಮರು ಅಂತರ್ಜಾತಿ ಮದುವೆಗಳಿಂದ ಸಮಾಜ ಸುಧಾರಣೆ ಮತ್ತು ದೇಶದ ಅಭಿವೃದ್ಧಿ ಸಾಧ್ಯ ಎಂದು ಹೇಳಿದ್ದರಲ್ಲದೆ, ಆ ದಿಸೆಯಲ್ಲಿ ಸಮಸಮಾಜದ ನಿರ್ಮಾಣಕ್ಕೆ ತಮ್ಮ ಕೊಡುಗೆಯನ್ನು ಕೊಟ್ಟರು. ಆದರೆ ಇಂದಿಗೂ ಅಜ್ಞಾನ, ಮೌಢ್ಯ, ಮಡಿಮೈಲಿಗೆಯಲ್ಲಿ ನರಳುತ್ತಿರುವ ಜನರ ಸುಧಾರಣೆ ಯಾವಾಗ? ಏಕೆಂದರೆ, ಜಾತಿಗಳನ್ನು ಮರೆತು ಒಂದಾಗಬಯಸುವ ಪ್ರೇಮಿಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ಯೆ ಮಾಡುವವರು ಇರುವುದು ದುರದೃಷ್ಟಕರ. ಇದಕ್ಕೆ ನಿದರ್ಶನ, ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಬೋಡಗುರ್ಕಿ ಎಂಬ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಹುಡುಗನನ್ನು ಪ್ರೀತಿಸಿದಳೆಂಬ ಕಾರಣಕ್ಕೆ, ಜನ್ಮಕೊಟ್ಟ ತಂದೆಯೇ ಮಗಳನ್ನು ಸಾಯಿಸಿರುವ ಹೇಯ ಕೃತ್ಯ.

ಈ ಆಘಾತ ಸಹಿಸಲಾರದೆ ಆ ಯುವಕ ಕೂಡ ಆತ್ಮಹತ್ಯೆ ಮಾಡಿಕೊಂಡಿರುವುದರಿಂದ, ಜಾತೀಯತೆಯ ಮೌಢ್ಯಕ್ಕೆ ಎರಡು ಜೀವಗಳು ಬಲಿಯಾಗಿವೆ. ಇಂತಹ ಕೃತ್ಯಕ್ಕೆ ಮುಂದಾಗುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಈ ಮೂಲಕ ಸಮಾಜಕ್ಕೆ ಎಚ್ಚರಿಕೆಯ ಸಂದೇಶ ನೀಡಬೇಕು.

**ಗಣಪತಿ ಚಲವಾದಿ,** ಬಬಲೇಶ್ವರ, ವಿಜಯಪುರ

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

## ಷೇರುಪೇಟೆ



# ಗರಿಷ್ಠ ಮಟ್ಟ ಮುಟ್ಟಿದ್ದು ಹೇಗೆ?

**13.43** ಕೋಟಿ ಬಿಎಸ್‌ಇಯಲ್ಲಿರುವ ಹೂಡಿಕೆದಾರರ ಸಂಖ್ಯೆ

**5** ಸಾವಿರಕ್ಕೂ ಅಧಿಕ ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳು

• ವಿಜಯ್ ಜೋಷಿ/ವಿಶ್ವನಾಥ ಎಸ್.

‘ರಿಸ್ಕ್ ಹೈ ತೊ ಇಷ್ಕ್ ಹೈ...’ ಎಂಬುದು ಸೋನಿ ಲೈವ್ ಒಟಿಟಿಯಲ್ಲಿ ಬಿಡುಗಡೆ ಆಗಿ, ಅಪಾರ ಜನಪ್ರಿಯತೆಯನ್ನು ಗಳಿಸಿದ ‘ಸ್ಕ್ಯಾಮ್ 1992: ದಿ ಹರ್ಷದ್ ಮೆಹ್ತಾ ಸ್ಟೋರಿ’ ವೆಬ್ ಸರಣಿಯಲ್ಲಿ ನಟ ಪ್ರತೀಕ್ ಗಾಂಧಿ ಹೇಳುವ ಮಾತು. ಆ ವೆಬ್ ಸರಣಿಯಲ್ಲಿ ಪ್ರತೀಕ್ ಅವರು ಹರ್ಷದ್ ಮೆಹ್ತಾ ಪಾತ್ರವನ್ನು ನಿಭಾಯಿಸಿದ್ದಾರೆ.

ಷೇರು ಮಾರುಕಟ್ಟೆಯಲ್ಲಿ ವಿಪರೀತದ ರಿಸ್ಕ್ ತೆಗೆದುಕೊಳ್ಳಲು ಮುಂದಾಗಿ ಶ್ರೀಮಂತಿಕೆಯನ್ನು ಕಂಡ ಮೆಹ್ತಾ, ನಂತರದ ದಿನಗಳಲ್ಲಿ ಶ್ರೀಮಂತಿಕೆಯ ಸೌಧದಿಂದ ಜಾರಿಬಿದ್ದು ಜೈಲು ಪಾಲಾಗಿದ್ದು ಇತಿಹಾಸ. ಆದರೆ, ದೇಶದ ಷೇರು ಮಾರುಕಟ್ಟೆಗಳಲ್ಲಿ ಸಮಯೋಚಿತವಾದ ರಿಸ್ಕ್ ತೆಗೆದುಕೊಂಡ ಹೂಡಿಕೆದಾರರು ಈಗ ಖುಷಿಯ ನಗೆ ಬೀರುತ್ತಿದ್ದಾರೆ. ಷೇರುಪೇಟೆ ಸೂಚ್ಯಂಕಗಳು ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ಮುಟ್ಟಿವೆ. ಷೇರುಪೇಟೆಯ ಬಂಡವಾಳ ಮೌಲ್ಯವು ಹೊಸ ಎತ್ತರವನ್ನು ತಲುಪುತ್ತಿದೆ. ಹನುಮದ್ವಿಕಾಸಕ್ಕೆ ಎಲ್ಲೆ ಇಲ್ಲ ಎಂಬ ಮಾತಿನಂತೆ, ಷೇರುಪೇಟೆಯ ಜಿಗಿತ ಕೂಡ ಎಲ್ಲೆಗಳನ್ನು ಎಣಿಸದೆ ಸಾಗಿರುವಂತಿದೆ.

ವಾಸ್ತವದಲ್ಲಿ ಈ ಪ್ರಮಾಣದ ಏರಿಕೆಗೆ ಕಾರಣಗಳು ಏನಿದ್ದಿರಬಹುದು? ಷೇರು ಮಾರುಕಟ್ಟೆಯಲ್ಲಿ ತೊಡಗಿಸಿದ ಹಣವು ಎಷ್ಟು ವರ್ಷಗಳಿಗೊಮ್ಮೆ ದುಪ್ಪಟ್ಟಾಗಿದೆ? ಮುಂದಿನ ದಿನಗಳಲ್ಲಿ ಯಾವ ವಲಯದಲ್ಲಿ ಹೆಚ್ಚಿನ ಚಟುವಟಿಕೆಗಳು ಕಾಣಬಹುದು?

‘1991ರಲ್ಲಿ ದೇಶವು ಆರ್ಥಿಕ ಉದಾರೀಕರಣಕ್ಕೆ ತೆರೆದುಕೊಂಡ ನಂತರದಲ್ಲಿ ಆರ್ಥಿಕ ಬೆಳವಣಿಗೆಗೆ ವೇಗ ದೊರೆಯಿತು. ಇದು ಷೇರುಪೇಟೆಯಲ್ಲಿ ಹೊಸ ಉತ್ಸಾಹಕ್ಕೆ ಕಾರಣವಾಯಿತು. ಷೇರು ಮಾರುಕಟ್ಟೆಯ ಚಲನೆಯು ದೀರ್ಘಾವಧಿಗೆ ನಿರ್ಧಾರ ಆಗುವಂಥದ್ದು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳುತ್ತಾರೆ.

‘ಮುಂಬೈ ಷೇರುಪೇಟೆಯು (ಬಿಎಸ್‌ಇ) 44 ವರ್ಷಗಳಲ್ಲಿ (1979-2023) ವಾರ್ಷಿಕ ಸರಾಸರಿ (ಸಿಎಜಿಆರ್) ಶೇಕಡ 15ರಷ್ಟು ಬೆಳವಣಿಗೆ ಕಂಡಿದೆ. 1979ರಲ್ಲಿ 100 ಅಂಶದಲ್ಲಿ ಇದ್ದ ಸೆನ್ಸೆಕ್ಸ್, ಈಗ 63 ಸಾವಿರ ಅಂಶಗಳನ್ನು ದಾಟಿದೆ. ಅಂದರೆ, 630 ಪಟ್ಟು ಬೆಳೆದಿದೆ. ಈ ದೀರ್ಘ ಅವಧಿಯಲ್ಲಿ, ಕೆಲವು ವರ್ಷಗಳಲ್ಲಿ ಮಾರುಕಟ್ಟೆ ಗಳಿಕೆ ಕಂಡಿದೆ. ಇನ್ನು ಕೆಲವು ವರ್ಷಗಳಲ್ಲಿ ಮಾರುಕಟ್ಟೆ ಸ್ಥಿರವಾಗಿ ಇತ್ತು. 1994ರ ಆರಂಭದಿಂದ 1998ರ ಜೂನ್‌ವರೆಗಿನ ನಾಲ್ಕು ವರ್ಷಗಳಲ್ಲಿ ಸೆನ್ಸೆಕ್ಸ್ 3,300 ಅಂಶಗಳ ಆಸುಪಾಸಿನಲ್ಲಿಯೇ ಇತ್ತು. ಹಾಗಾಗಿ ಆ ಅವಧಿಯಲ್ಲಿ ಗಳಿಕೆಯು ಶೂನ್ಯವಾಗಿತ್ತು. ಇದಕ್ಕೆ ತದ್ವಿರುದ್ಧವಾಗಿ, 2003ರ ಮಧ್ಯಭಾಗದಿಂದ 2007ರ ಅಂತ್ಯದವರೆಗೆ ಷೇರುಪೇಟೆಯಲ್ಲಿ ಗೂಳಿ ಓಟ ಜೋರಾಗಿತ್ತು. 2003ರ ಮೇನಲ್ಲಿ 3,000 ಅಂಶ ಇದ್ದ ಸೆನ್ಸೆಕ್ಸ್ 2007ರ ಡಿಸೆಂಬರ್ ವೇಳೆಗೆ 20 ಸಾವಿರ ಅಂಶಗಳಿಗೆ ಬೆಳೆಯಿತು, ಶೇ 700ರಷ್ಟು ಗಳಿಕೆ ಕಂಡಿತು’ ಎಂದು ಬಿಎಸ್‌ಇಯಲ್ಲಿ ಬಂಡವಾಳವು ವೃದ್ಧಿಯಾದ ಬಗೆಯನ್ನು ವಿಜಯಕುಮಾರ್ ಅವರು ಸಂಕ್ಷಿಪ್ತವಾಗಿ ವಿವರಿಸುತ್ತಾರೆ.


ದೇಶದ ಇನ್ನೊಂದು ಪ್ರಮುಖ ಷೇರುಪೇಟೆ ಎನ್‌ಎಸ್‌ಇ. ಅಲ್ಲಿನ ಪ್ರಮುಖ ಸೂಚ್ಯಂಕ ನಿಫ್ಟಿ–50 ವಿಚಾರವಾಗಿ 5ಪೈಸಾ ಬ್ರೋಕರೇಜ್ ಸಂಸ್ಥೆಯ ಸಂಶೋಧನಾ ಮುಖ್ಯಸ್ಥ ರುಚಿತ್ ಜೈನ್ ‘ಪ್ರಜಾವಾಣಿ’ ಜೊತೆ ಅನಿಸಿಕೆ ಹಂಚಿಕೊಂಡಿದ್ದಾರೆ. ‘ಆಗಾಗ ಇಳಿಕೆಗಳು ದಾಖಲಾಗಿದ್ದರೂ, ನಿಫ್ಟಿ–50 ಗಮನಾರ್ಹ ಬೆಳವಣಿಗೆಯನ್ನು ದಾಖಲಿಸಿದೆ. 1996ರಲ್ಲಿ ಜನ್ಮತಳೆದ ನಂತರದಲ್ಲಿ ನಿಫ್ಟಿ–50 ಕರಡಿ ಕುಣಿತ ಹೆಚ್ಚಿದ್ದ ದಿನಗಳಲ್ಲಿ ಶೇ 51ರವರೆಗೆ ಕುಸಿದಿದ್ದೂ ಇದೆ. ಗೂಳಿಯ ಓಟ ಜೋರಾಗಿದ್ದ ಅವಧಿಯಲ್ಲಿ ಶೇ 70ರಷ್ಟು ಬೆಳವಣಿಗೆ ಕಂಡಿದ್ದೂ ಇದೆ. ಕಳೆದ 15 ವರ್ಷಗಳ ಅವಧಿಯಲ್ಲಿ ಸೂಚ್ಯಂಕವು ವಾರ್ಷಿಕ ಸರಾಸರಿ ಶೇ 13ರಷ್ಟು ಬೆಳವಣಿಗೆ ಕಂಡಿದೆ’ ಎಂದು ಜೈನ್ ಹೇಳುತ್ತಾರೆ.

ಈಗ ಕೆಲವು ತಿಂಗಳುಗಳಿಂದ ಮಾರುಕಟ್ಟೆಯಲ್ಲಿ ಕಂಡುಬಂದಿರುವ ಏರುಗತಿಯ ವಹಿವಾಟಿಗೆ ಕಾರಣಗಳನ್ನು ವಿಜಯಕುಮಾರ್ ಹಾಗೂ ಜೈನ್ ಅವರು ಭಿನ್ನ ನೆಲೆಗಳಲ್ಲಿ ಗುರುತಿಸಿದ್ದಾರೆ. ಹಾಗೆಯೇ ಅವರ ಮಾತುಗಳಲ್ಲಿ, ಗ್ರಹಿಕೆಗಳಲ್ಲಿ ಒಂದಿಷ್ಟು ಸಾಮ್ಯತೆಗಳೂ ಇವೆ. ‘ಜಾಗತಿಕವಾಗಿ ಭಾರತವು ವೇಗವಾಗಿ ಬೆಳೆಯುತ್ತಿರುವ ದೊಡ್ಡ ಆರ್ಥಿಕತೆ. 2022–23ನೇ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಶೇ 7.2ರಷ್ಟು ಬೆಳೆದಿದೆ. ಚಿಲ್ಲರೆ ಹಣದುಬ್ಬರ ನಿಯಂತ್ರಣಕ್ಕೆ ಬಂದಿದ್ದು, ಅದು ಏಪ್ರಿಲ್‌ನಲ್ಲಿ ಶೇ 4.7ರಷ್ಟಾಗಿದೆ. ಕಾರ್ಪೊರೇಟ್ ವಲಯ ಉತ್ತಮ ಸ್ಥಿತಿಯಲ್ಲಿ ಇದೆ, ಬ್ಯಾಂಕಿಂಗ್ ವ್ಯವಸ್ಥೆಯು ಸುಸ್ಥಿತಿಗೆ ಮರಳಿದೆ. ಅಲ್ಪಾವಧಿಗೆ ಮಾರುಕಟ್ಟೆಯಲ್ಲಿ ಅಸ್ಥಿರತೆ ಎದುರಾಗಬಹುದು. ನಿರೀಕ್ಷೆಗಳಿಗೆ ವಿರುದ್ಧವಾಗಿ ಅದು ಚಲಿಸಬಹುದು. ಆದರೆ, ದೀರ್ಘಾವಧಿಯಲ್ಲಿ ಜಿಡಿಪಿ ಮತ್ತು ಕಾರ್ಪೊರೇಟ್ ಗಳಿಕೆಯ ಆಧಾರದ ಮೇಲೆ ಷೇರುಪೇಟೆಯ ಚಲನೆ ಇರಲಿದೆ. ಮುಂಬರುವ ವರ್ಷಗಳಲ್ಲಿಯೂ ಭಾರತದ ಆರ್ಥಿಕತೆಯು ಅತ್ಯಂತ ವೇಗವಾಗಿ ಬೆಳವಣಿಗೆ ಕಾಣಲಿದೆ ಎಂದು ಐಎಂಎಫ್ ಹಾಗೂ ವಿಶ್ವಬ್ಯಾಂಕ್ ಅಂದಾಜಿಸಿವೆ. ಇದು ವಿದೇಶಿ ಹೂಡಿಕೆದಾರರನ್ನು ಹೆಚ್ಚು ಆಕರ್ಷಿಸಲು ನೆರವಾಗುತ್ತಿದೆ. ಪ್ರವರ್ಧಮಾನಕ್ಕೆ ಬರುತ್ತಿರುವ ಇತರ ದೇಶಗಳಿಗೆ ಹೋಲಿಸಿದರೆ ಭಾರತದ ಮಾರುಕಟ್ಟೆ ಮೌಲ್ಯವು ಗರಿಷ್ಠ ಮಟ್ಟದಲ್ಲಿ ಇದೆ’ ಎಂದು ವಿಜಯಕುಮಾರ್ ಅಭಿಪ್ರಾಯ ಹಂಚಿಕೊಂಡಿದ್ದಾರೆ.

‘ಷೇರು ಮಾರುಕಟ್ಟೆ ಎಂಬುದು ಪರ್ಯಾಯ ಆದಾಯಕ್ಕೊಂದು ಮೂಲ ಎಂಬ ಭಾವನೆ ಮೂಡಿದ ಪರಿಣಾಮವಾಗಿ ಕೋವಿಡ್ ಅವಧಿಯಲ್ಲಿ ಡಿ–ಮ್ಯಾಟ್ ಖಾತೆಗಳ ಸಂಖ್ಯೆಯು ಹೆಚ್ಚಾಯಿತು. ದೇಶದ ಆರ್ಥಿಕತೆಯ ಮೂಲಭೂತ ಅಂಶಗಳು ಗಟ್ಟಿಯಾಗಿವೆ. ಇದರಿಂದಾಗಿ ನಮ್ಮ ಷೇರು ಮಾರುಕಟ್ಟೆಗಳು ಇತರ ದೇಶಗಳ ಮಾರುಕಟ್ಟೆಗಳಿಗಿಂತ ಹೆಚ್ಚು ಲಾಭ ತಂದಿವೆ. ಇದು ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಿಸಲು ಕಾರಣವಾಗಿದೆ. ಜಾಗತಿಕವಾಗಿ ಕಳವಳಕಾರಿ ವಿದ್ಯಮಾನಗಳು ಹಲವಿದ್ದರೂ, ಭಾರತದ ಬೆಳವಣಿಗೆಯ ಬಗ್ಗೆ ಬಹಳಷ್ಟು ಆಶಾವಾದ ಇರುವ ಕಾರಣ ವಿದೇಶಿ ಹೂಡಿಕೆದಾರರು ಮತ್ತೆ ನಮ್ಮ ಕಡೆ ಮುಖ ಮಾಡಿದ್ದಾರೆ. 2030ರೊಳಗೆ ಭಾರತವು ವಿಶ್ವದ ಮೂರನೆಯ ಅತಿದೊಡ್ಡ ಅರ್ಥವ್ಯವಸ್ಥೆಯನ್ನು ಹೊಂದಲಿದೆ. ಇಲ್ಲಿರುವ ಅವಕಾಶಗಳನ್ನು ಬಳಸಿಕೊಳ್ಳದೆ, ಬಹಳ ಕಾಲ ದೂರ ಉಳಿಯಲು ಅವರು ಬಯಸುವುದಿಲ್ಲ’ ಎಂದು ಜೈನ್ ಹೇಳಿದರು.

ಷೇರುಪೇಟೆಯ ವಿವಿಧ ಸೂಚ್ಯಂಕಗಳ ಪೈಕಿ ಐ.ಟಿ. ವಲಯದ ಗಳಿಕೆಯನ್ನು ಹೇಳುವ ಸೂಚ್ಯಂಕವು 2022ರ ಜನವರಿಯಲ್ಲಿ ಗರಿಷ್ಠ ಮಟ್ಟದಲ್ಲಿ ಇತ್ತು. ಆದರೆ ಅದು ಈಗ ಆ ಮಟ್ಟವನ್ನು ಹೋಲಿಸಿದರೆ ಕುಸಿದಿದೆ. ಇದಕ್ಕೆ ಹಲವು ಕಾರಣಗಳು ಇವೆ ಎಂದು ವಿಜಯಕುಮಾರ್ ಹೇಳುತ್ತಾರೆ. ಆದರೂ, ಮುಂದೆ ಒಳ್ಳೆಯದಾಗುವ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

‘ಐ.ಟಿ. ವಲಯದ ಷೇರುಗಳು ಜಾಗತಿಕ ವಿದ್ಯಮಾನಗಳ ಪ್ರಭಾವಕ್ಕೆ ತುತ್ತಾಗಿವೆ. ಅಮೆರಿಕವು ಈ ವರ್ಷದ ಅಂತ್ಯದ ವೇಳೆಗೆ ಆರ್ಥಿಕ ಹಿಂಜರಿತ ಅನುಭವಿಸುವ ಸಾಧ್ಯತೆ ಇರುವುದು ಭಾರತದ ಪ್ರಮುಖ ಐ.ಟಿ. ಕಂಪನಿಗಳ ಗಳಿಕೆಗೆ ಪೆಟ್ಟು ಕೊಟ್ಟಿದೆ. ಆದರೆ, ಭಾರತದ ಆರ್ಥಿಕ ಚೇತರಿಕೆಯನ್ನು ಗಮನಿಸಿದರೆ, ಜಾಗತಿಕ ಮಟ್ಟದಲ್ಲಿ ಎದುರಾಗುವ ನಕಾರಾತ್ಮಕ ಪರಿಣಾಮಗಳನ್ನು ಮೀರಿ ಐ.ಟಿ. ಕಂಪನಿಗಳು ಬೆಳವಣಿಗೆ ಸಾಧಿಸುವ ಸಾಧ್ಯತೆಗಳು ಗೋಚರಿಸುತ್ತಿವೆ’ ಎಂದು ವಿಜಯಕುಮಾರ್ ಹೇಳುತ್ತಾರೆ.




### 2014ರ ನಂತರದ ಬೆಳವಣಿಗೆಯ ಕುರಿತು...

ನರೇಂದ್ರ ಮೋದಿ ನೇತೃತ್ವದ ಸರ್ಕಾರವು 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರದಲ್ಲಿ ಸೆನ್ಸೆಕ್ಸ್ ಸರಿಸುಮಾರು ಮೂರು ಪಟ್ಟು ಬೆಳೆದಿದೆ. ಇದಕ್ಕೆ ಕಾರಣಗಳು ಏನಿರಬಹುದು ಎಂಬ ಪ್ರಶ್ನೆಯನ್ನು ಮುಂದಿರಿಸಿದಾಗ ಜೈನ್ ಅವರು, ‘ಮೋದಿ ನೇತೃತ್ವದ ಸರ್ಕಾರವು ಕೈಗೊಂಡ ಕ್ರಮಗಳಿಂದಾಗಿ ದೇಶದ ಅರ್ಥವ್ಯವಸ್ಥೆಯು ಇತರ ಹಲವು ದೇಶಗಳ ಅರ್ಥ ವ್ಯವಸ್ಥೆಗಳಿಗಿಂತ ಹೆಚ್ಚು ಸದೃಢವಾಗಿದೆ. ದೇಶದ ಬ್ಯಾಂಕಿಂಗ್ ವ್ಯವಸ್ಥೆಯು ಬಲಿಷ್ಠವಾಗಿದೆ. ಎಫ್‌ಡಿಐ ಒಳಹರಿವು ಚೆನ್ನಾಗಿದೆ. ಹಣಕಾಸಿನ ಸ್ಥಿತಿಯು ಉತ್ತಮವಾಗುತ್ತಿದೆ. ಡಿಜಿಟಲ್ ಮೂಲಸೌಕರ್ಯದಲ್ಲಿ ದೇಶವು ತ್ವರಿತ ಬೆಳವಣಿಗೆಯನ್ನು ಕಂಡಿದೆ. ಸುಧಾರಣೆಗಳು ವೇಗ ಪಡೆದುಕೊಂಡಿವೆ’ ಎಂದು ವಿವರಿಸಿದರು.

‘2014ರಿಂದ 2023ರವರೆಗಿನ ಅವಧಿಯಲ್ಲಿ ಮಾರುಕಟ್ಟೆಯಲ್ಲಿ ಅಸಾಧಾರಣ ಎನ್ನುವ ಯಾವುದೇ ಬೆಳವಣಿಗೆ ಆಗಿಲ್ಲ. 2014ರ ಜನವರಿಯಲ್ಲಿ 21 ಸಾವಿರ ಅಂಶಗಳಲ್ಲಿ ಇದ್ದ ಸೆನ್ಸೆಕ್ಸ್ 2023ರಲ್ಲಿ 63 ಸಾವಿರಕ್ಕೆ ಏರಿಕೆ ಕಂಡಿದೆ. ಇದು ಸಹಜವಾದ ಬೆಳವಣಿಗೆಯೇ ಹೊರತು ವಿಶೇಷವಾಗಿ ಗುರುತಿಸುವಂಥದ್ದು ಇಲ್ಲಿ ಏನೂ ಇಲ್ಲ’ ಎಂದು ವಿಜಯಕುಮಾರ್ ಹೇಳಿದರು.

### ವಿವಿಧ ವಲಯಗಳ ಮುನ್ನೋಟ ಹೇಗಿದೆ?

‘**ಹಣಕಾಸು** ವಲಯದಲ್ಲಿ, ನಿರ್ದಿಷ್ಟವಾಗಿ ಬ್ಯಾಂಕಿಂಗ್ ವಲಯದ ಸ್ಥಿತಿ ಉತ್ತಮವಾಗಿ ಇರುವುದರಿಂದ ಷೇರುಗಳ ಮೌಲ್ಯ ಹೆಚ್ಚಾಗಲಿದೆ. ಸಾಲ ನೀಡಿಕೆ ಹೆಚ್ಚಾಗುತ್ತಿದ್ದು, ಬಡ್ಡಿದರವು ಗರಿಷ್ಠ ಮಟ್ಟದಲ್ಲಿದೆ. ಆಟೊಮೊಬೈಲ್ ವಲಯವು 5 ವರ್ಷಗಳ ಬಳಿಕ ಚೇತರಿಕೆ ಕಂಡಿವೆ. ಮುಂಬರುವ ದಿನಗಳಲ್ಲಿ ಇನ್ನಷ್ಟು ಗಳಿಕೆ ಕಾಣುವ ನಿರೀಕ್ಷೆ ಇದೆ. 2024ರ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಳ್ಳುವುದಾದರೆ, ಸರ್ಕಾರದಿಂದ ಆಗುವ ವೆಚ್ಚಗಳು ಹೆಚ್ಚಾಗಲಿದೆ. ಇದರಿಂದಾಗಿ ಸಿಮೆಂಟ್ ಮತ್ತು ನಿರ್ಮಾಣಕ್ಕೆ ಸಂಬಂಧಿಸಿದ ವಲಯಗಳಿಗೆ ಉತ್ತೇಜನ ಸಿಗಲಿದೆ’

– **ವಿ.ಕೆ. ವಿಜಯಕುಮಾರ್**

‘**ಬ್ಯಾಂಕ್‌ಗಳ** ಲಾಭದ ಪ್ರಮಾಣವು ಹೆಚ್ಚಿನ ಮಟ್ಟದಲ್ಲಿರುವ ಪರಿಣಾಮವಾಗಿ ಮುಂದಿನ ದಿನಗಳಲ್ಲಿ ಬ್ಯಾಂಕಿಂಗ್ ವಲಯದ ಷೇರುಗಳು ಹೆಚ್ಚು ಲಾಭ ತಂದುಕೊಡಬಹುದು. ರಾಷ್ಟ್ರೀಯ ಮೂಲಸೌಕರ್ಯ ಯೋಜನೆಯ ಮೂಲಕ ವಿಶ್ವದರ್ಜೆಯ ಮೂಲಸೌಕರ್ಯ ಅಭಿವೃದ್ಧಿ ಆಗುತ್ತಿದೆ. ಹೀಗಾಗಿ ಮೂಲಸೌಕರ್ಯ ಅಭಿವೃದ್ಧಿ ವಲಯದ ಮೇಲೆ ಗಮನ ಇರಿಸಬಹುದು. ರಕ್ಷಣೆ ಮತ್ತು ವೈಮಾನಿಕ ಕ್ಷೇತ್ರಗಳಲ್ಲಿ ಸ್ವಾವಲಂಬನೆ ಸಾಧಿಸಲು ಸರ್ಕಾರವು ಯೋಜನೆ ರೂಪಿಸಿದೆ. ಇದರಿಂದಾಗಿ ರಕ್ಷಣಾ ವಲಯದ ಷೇರುಗಳಲ್ಲಿ ಹೆಚ್ಚಿನ ಗಳಿಕೆ ಸಾಧ್ಯವಾಗಬಹುದು

– **ರುಚಿತ್ ಜೈನ್**



### ಬಿಎಸ್‌ಇ ಮಾರುಕಟ್ಟೆ ಬಂಡವಾಳ ಮೌಲ್ಯ

(ಲಕ್ಷ ಕೋಟಿಗಳಲ್ಲಿ)

| 2001-02 | 2009-10 | 2019-20 | 2023-24 |
|---|---|---|---|
| ₹6.12 | ₹61.65 | ₹113.48 | ₹294.14 |

## ಕಿರಣ್‌ರಾಜ್ ‘ರಾನಿ’ ಟೀಸರ್ ಜುಲೈ 5ಕ್ಕೆ

**ಚಂದನವನದಲ್ಲಿ** ‘ಬಡ್ಡೀಸ್’ ಸಿನಿಮಾ ಮೂಲಕ ಮಿಂಚಿದ ನಟ ಕಿರಣ್ ರಾಜ್, ‘ಕನ್ನಡತಿ’ ಧಾರಾವಾಹಿ ಬಳಿಕ ‘ರಾನಿ’ ಎಂಬ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ.

ಸದ್ಯ ಇದೇ ಚಿತ್ರದ ಚಿತ್ರೀಕರಣದಲ್ಲೂ ಅವರು ತೊಡಗಿಸಿಕೊಂಡಿದ್ದಾರೆ. ಗುರುತೇಜ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದ ಟೀಸರ್ ಜುಲೈ 5ರಂದು ಬಿಡುಗಡೆಯಾಗಲಿದೆ. ಚಿತ್ರವನ್ನು ಇದೇ ವರ್ಷದ ಡಿಸೆಂಬರ್‌ನಲ್ಲಿ ತೆರೆಗೆ ತರಲು ಚಿತ್ರತಂಡ ಸಜ್ಜಾಗುತ್ತಿದೆ.

ಕಿರಣ್ ರಾಜ್ ಜನ್ಮದಿನದಂದೇ ಟೀಸರ್ ಅನ್ನು ಚಿತ್ರತಂಡ ಬಿಡುಗಡೆ ಮಾಡುತ್ತಿದೆ. ಈ ಚಿತ್ರದ ಶೀರ್ಷಿಕೆ ಅನಾವರಣ ದುಬೈನಲ್ಲಿ ನಡೆದಿತ್ತು. ಕಿರಣ್ ರಾಜ್ ದುಬೈಗೆ ತೆರಳಿ 13 ಸಾವಿರ ಅಡಿ ಎತ್ತರದಿಂದ ಸ್ಕೈ ಡೈವ್ ಮಾಡಿ ‘ರಾನಿ’ ಚಿತ್ರದ ಟೈಟಲ್ ಅನಾವರಣಗೊಳಿಸಿದ್ದರು. ‘ಈ ಬಾರಿ ಆ್ಯಕ್ಷನ್ ಕಮರ್ಷಿಯಲ್ ಸಿನಿಮಾ ಮಾಡಿದ್ದೇನೆ’ ಎನ್ನುವ ಗುರುತೇಜ್ ಶೆಟ್ಟಿ, ‘ಇದೊಂದು ಗ್ಯಾಂಗ್‌ಸ್ಟರ್ ಸಿನಿಮಾ ಆದರೂ ಕುಟುಂಬ ಸಮೇತ ನೋಡುವಂತಹ ಭಾವನಾತ್ಮಕ ವಿಷಯಗಳೂ ಚಿತ್ರದಲ್ಲಿವೆ’ ಎನ್ನುತ್ತಾರೆ.

ರವಿಶಂಕರ್, ಮೈಕೋ ನಾಗರಾಜ್, ಉಗ್ರಂ ರವಿ, ಉಗ್ರಂ ಮಂಜು, ಬಿ.ಸುರೇಶ, ಮಂಡ್ಯ ರಮೇಶ್, ಸುಜಯ್ ಶಾಸ್ತ್ರಿ, ಸೂರ್ಯ ಕುಂದಾಪುರ, ಧರ್ಮಣ್ಣ ಕಡೂರು, ಗಿರೀಶ್ ಹೀಗೆ ದೊಡ್ಡ ಕಲಾವಿದರ ದಂಡೇ ಈ ಚಿತ್ರದಲ್ಲಿದೆ.

ಸಮೀಕ್ಷಾ, ಅಪೂರ್ವ, ರಾಧ್ಯಾ ಮೂವರು ಈ ಚಿತ್ರದ ನಾಯಕಿಯರು. ಮೂವರೂ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಾಘವೇಂದ್ರ ಬಿ.ಕೋಲಾರ್ ಛಾಯಾಚಿತ್ರಗ್ರಹಣ, ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನವಿರುವ ಈ ಚಿತ್ರಕ್ಕೆ ಸಚಿನ್ ಬಸ್ರೂರ್ ಹಿನ್ನಲೆ ಸಂಗೀತ ನೀಡಿದ್ದಾರೆ. ಸ್ಟಾರ್ ಕ್ರಿಯೇಷನ್ ಬ್ಯಾನರ್ ಅಡಿಯಲ್ಲಿ ಚಂದ್ರಕಾಂತ್ ಪೂಜಾರಿ, ಉಮೇಶ್ ಹೆಗ್ಡೆ ನಿರ್ಮಿಸುತ್ತಿರುವ ಚೊಚ್ಚಲ ಚಿತ್ರವಿದು.



ಕಿರಣ್‌ರಾಜ್

## ಮತ್ತೊಂದು ಮೂಕಿಚಿತ್ರ

**ಕನ್ನಡದಲ್ಲಿ** 36 ವರ್ಷಗಳ ಹಿಂದೆ ‘ಪುಷ್ಪಕ ವಿಮಾನ’ ಎಂಬ ಮೂಕಿ ಚಿತ್ರ ತೆರೆಗೆ ಬಂದಿತ್ತು. ಈಗ ‘ಮಹಾಗುರು’ ಎಂಬ ಮತ್ತೊಂದು ಪೂರ್ಣಪ್ರಮಾಣದ ಮೂಕಿ ಚಿತ್ರ ಸೆಟ್ಟೇರಿದೆ. ಫ್ಯಾಂಟಸಿ ಕಥಾಹಂದರ ಹೊಂದಿರುವ ಚಿತ್ರದ ಮುಹೂರ್ತ ಇತ್ತೀಚೆಗಷ್ಟೇ ನೆರವೇರಿತು. ಮೈಸೂರು ರಮಾನಂದ್, ಮಹಿಮಾಗುಪ್ತ, ಬ್ಯಾಂಕ್ ಜನಾರ್ದನ್ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿರುವ ಈ ಚಿತ್ರಕ್ಕೆ ಕಸ್ತೂರಿ ಜಗನ್ನಾಥ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ.

ನಿರ್ದೇಶಕ ಕಸ್ತೂರಿ ಜಗನ್ನಾಥ್ ಮಾತನಾಡಿ, ‘ಸೌಂಡ್ ಎಫೆಕ್ಟ್‌ನಲ್ಲೇ ಕಥೆ ಹೇಳುತ್ತೇವೆ. ಕಾಡಿನಲ್ಲಿರುವ ಗುಪ್ತನಿಧಿಯನ್ನು ಹುಡುಕಿಕೊಂಡು ಹೋಗುವ ಮಂತ್ರವಾದಿ ಹಾಗೂ ಅದನ್ನು ಕಾಯುತ್ತಿರುವ ಯಕ್ಷಕನ್ಯೆಯ ನಡುವೆ ನಡೆಯುವ ಕಥಾಹಂದರ ಈ ಚಿತ್ರದಲ್ಲಿದೆ. ಸಾಕಷ್ಟು ಗ್ರಾಫಿಕ್ಸ್ ಇದ್ದು, ಅದನ್ನು ನಾನೇ 6 ತಿಂಗಳಿನಿಂದ ಮಾಡಿರುವೆ. ನನ್ನ ನಿರ್ದೇಶನದ ಮೂರನೇ ಚಿತ್ರವಿದು. ಬೆಂಗಳೂರಿನಲ್ಲಿ ಸೆಟ್ ಹಾಕಿದ್ದೇವೆ. ಸಕಲೇಶಪುರದ ಕಾಡಿನಲ್ಲಿ ಹೆಚ್ಚಿನ ಭಾಗವನ್ನು ಶೂಟ್‌ಮಾಡುತ್ತಿದ್ದೇವೆ’ ಎಂದರು.

ಕೇರಳಮೂಲದ ಎಡಕ್ಕಾವಿಲ್ ಫಿರೋಸ್, ಜಸ್ಸಿನಾ, ಅಶೋಕ್ ಕುಮಾರ್ ಅವರು ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಎ.ಸಿ. ಮಹೇಂದ್ರನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಮುಂಬೈ ಮೂಲದ ಮಹಿಮಾ ಗುಪ್ತ ಚಿತ್ರದ ನಾಯಕಿ.



ಮಹಿಮಾ ಗುಪ್ತ


## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ‘**ಮುಸ್ಲಿಂ ಹೋಟೆಲ್‌ಗಳಲ್ಲಿ** ಆಹಾರವನ್ನು ಹಲಾಲ್ ಮಾಡಲು ಉಗುಳುವುದನ್ನು ನ್ಯಾಯಾಲಯ ಒಪ್ಪಿಕೊಂಡಿದೆ. ತಮಿಳುನಾಡಿನ ನ್ಯಾಯಾಲಯದ ಪ್ರಕರಣದಲ್ಲಿ, ಅಡುಗೆಯವರು ಉಗುಳದ ಹೊರತು ಹಲಾಲ್ ಪೂರ್ಣವಾಗುವುದಿಲ್ಲ ಎಂದು ಮುಸ್ಲಿಮರು ವಾದಿಸಿದರು. ಆದ್ದರಿಂದಲೇ ಮುಸಲ್ಮಾನರು ತಯಾರಿಸಿದ ಆಹಾರ ಉಗುಳದೆ ಅಪೂರ್ಣ. ಕೋರ್ಟ್ ಕೇಸ್ ನಲ್ಲಿ ಉಗುಳುವುದನ್ನು ಒಪ್ಪಿಕೊಂಡರು.. ಕಾಫಿರರು ಮುಸಲ್ಮಾನರಾಗುತ್ತಾರೆ. ಜನರೇ, ನೀವು ಮುಸಲ್ಮಾನರ ಅಂಗಡಿಗೆ ಅವರ ಲಾಲಾರಸ ತಿನ್ನಲು ಹೋಗುತ್ತೀರಾ? (ಸ್ವೀಕರಿಸಿದಂತೆ ಫಾರ್ವರ್ಡ್ ಮಾಡಲಾಗಿದೆ. ಸುದೇಶ್ ಕ್ಯಾಲಿಕಟ್)’ ಎಂಬಂಥ ವಾಟ್ಸ್‌ಆ್ಯಪ್ ಸಂದೇಶಗಳು ಸಾವಿರಾರು ಸಂಖ್ಯೆಯಲ್ಲಿ ಹರಡುತ್ತಿವೆ. ಆದರೆ, ಇದು ಸುಳ್ಳು ಸುದ್ದಿ.

✓ **ದೇವರ ನೈವೇದ್ಯಕ್ಕಾಗಿ** ಶಬರಿಮಲೆ ದೇವಸ್ಥಾನಕ್ಕೆ ಹಲಾಲ್ ಪ್ರಮಾಣಪತ್ರ ಇರುವ ಬೆಲ್ಲವನ್ನು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ನೀಡುತ್ತದೆ. ಆದರೆ, ಶಬರಿಮಲೆ ಕಾರ್ಯಸಮಿತಿಯು ದೇವಸ್ವಂ ಮಂಡಳಿಯ ವಿರುದ್ಧ ಕೇರಳ ಹೈಕೋರ್ಟ್‌ನಲ್ಲಿ 2021ರಲ್ಲಿ ಅರ್ಜಿ ಸಲ್ಲಿಸಿತ್ತು. ‘ಆಹಾರ ಪದಾರ್ಥಕ್ಕೆ ಉಗುಳಲಿಲ್ಲ ಎಂದಾದರೆ, ಹಲಾಲ್ ಕ್ರಿಯೆ ಪೂರ್ಣಗೊಂಡಂತಲ್ಲ ಎಂದು ಮುಸ್ಲಿಂ ಸಮುದಾಯದವರು ಹೇಳುತ್ತಾರೆ’ ಎಂದು ಮಂಡಳಿಯು ನೀಡುವ ಬೆಲ್ಲದ ಕುರಿತು ಆ ಅರ್ಜಿಯಲ್ಲಿ ದೂರಲಾಗಿತ್ತು. ಆದರೆ, ಕೇರಳ ನ್ಯಾಯಾಲಯವು ದೇವಸ್ಥಾನದ ಈ ವಾದವನ್ನು ಒಪ್ಪಿಕೊಂಡಿಲ್ಲ. ಜೊತೆಗೆ, ತಮಿಳುನಾಡಿನ ಯಾವುದೇ ನ್ಯಾಯಾಲದಲ್ಲೂ ಇಂಥ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ನ್ಯೂಸ್‌ಚೆಕರ್ ಫ್ಯಾಕ್ಟ್‌ಚೆಕ್ ಮಾಡಿದೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ



### ಮಾಯೆ – ಮಾಯ

**ಜನ್ಮ ಸಾವಿರ ಬರಲಿ, ನಷ್ಟವದರಿಂದೇನು ? |**
**ಕರ್ಮ ಸಾವಿರವಿರಲಿ, ಕಷ್ಟ ನಿನಗೇನು? ||**
**ಬ್ರಹ್ಮ ಹೃದಯದಿ ನಿಲ್ಲೆ ಮಾಯೆಯೇಂಗೈದೊಡೇಂ ? |**
**ಇಮ್ಮಿದಳ ಸರಸವದು – ಮಂಕುತಿಮ್ಮ || 916 ||**

**ಪದ-ಅರ್ಥ:** ನಷ್ಟವದರಿಂದೇನು = ನಷ್ಟ + ಅದರಿಂದೇನು, ಮಾಯೆಯೇಂಗೈದೊಡೇಂ = ಮಾಯೆ + ಯೇಂ(ಏನು) + ಗೈದೊಡೇಂ(ಮಾಡಿದರೇನು),ಇಮ್ಮಿದಳ = ಪ್ರಿಯೆಯ, ಇನಿಯಳ, ಸರಸವದು = ಸರಸವು + ಅದು.

**ವಾಚ್ಯಾರ್ಥ:** ಸಾವಿರ ಜನ್ಮಗಳು ಬರಲಿ, ಅದರಿಂದ ನಷ್ಟವೇನು? ಸಾವಿರಾರು ಕರ್ಮಗಳು ಬರಲಿ, ಯಾವ ಕಷ್ಟವೂ ಇಲ್ಲ.

ಬ್ರಹ್ಮತತ್ವ ಹೃದಯಲ್ಲಿ ನೆಲೆಯಾಗಿ ನಿಂತರೆ ಮಾಯೆ ಯಾವ ಆಟಗಳನ್ನು ಆಡಿದರೂ ಅದರಿಂದ ತೊಂದರೆ ಎನ್ನಿಸದೆ, ಅದು ಪ್ರೇಯಸಿಯೊಂದಿಗಿನ ಸರಸದಂತೆ ತೋರುತ್ತದೆ.

**ವಿವರಣೆ:** ಊರಿನ ಹೊರಭಾಗದಲ್ಲಿ ಕಾಡಿಗೆ ಹೊಂದಿದಂತೆಯೇ ಇತ್ತು, ಆ ಚೆಂದದ ಮನೆ. ಮನೆ ಕಟ್ಟಿಸಿದ ಮೇಲೆ ಮಾಲೀಕರು ಬಹುಶ: ಒಂದೆರಡು ವರ್ಷ ಇದ್ದಿರಬೇಕು. ಅವರು ಪಟ್ಟಣಕ್ಕೆ ಹೋದ ಮೇಲೆ ಅಲ್ಲಿ ಬಾಡಿಗೆಗೆ ಒಂದಿಬ್ಬರು ಬಂದರು. ಯಾರೂ ಆ ಮನೆಯಲ್ಲಿ ಒಂದು ವಾರಕ್ಕಿಂತ ಹೆಚ್ಚು ಕಾಲ ಉಳಿಯಲಿಲ್ಲ. ಮುಂದೆ ಯಾರೂ ಮನೆಯ ಹತ್ತಿರವೂ ಸುಳಿಯಲಿಲ್ಲ. ಕಾರಣ, ಮನೆಯಲ್ಲೊಂದು ದೆವ್ವವಿದೆ, ರಾತ್ರಿ ಅದು ಕೂಗು ಹಾಕುತ್ತ ಮನೆಯನ್ನು ಸುತ್ತುತ್ತದೆ ಎಂಬ ಸುದ್ದಿ. ಅದೊಂದು ದೆವ್ವದ ಮನೆಯೆಂದೇ ಹೆಸರಾಗಿ ಭಯಕ್ಕೆ ಕಾರಣವಾಯಿತು. ಅಲ್ಲೊಬ್ಬ ತರುಣ ದಂಪತಿಗಳು ಆ ಊರಿಗೆ ಬಂದು ಮನೆ ಹುಡುಕುತ್ತಿದ್ದರು. ಈ ದೆವ್ವದ ಮನೆ ತುಂಬ ಇಷ್ಟವಾಯಿತು. ಊರ ಜನ ಹೆದರಿಸಿದರೂ ಕೇಳದೆ ಆ ಮನೆಯನ್ನು ಸೇರಿಕೊಂಡರು. ರಾತ್ರಿಯಾಯಿತು. ಅವರೂ ಎಚ್ಚರವಾಗಿದ್ದರು. ಹಾಂ! ಆಗ ಕೇಳಿಸಿತು ಸಣ್ಣ ಶಿಳ್ಳೆಯಂಥ ಧ್ವನಿ. ಗಂಡ-ಹೆಂಡತಿ ಇಬ್ಬರೂ ಮನೆಯಿಂದ ಹೊರಗೆ ಬಂದು ಸುತ್ತಲೂ ಅಡ್ಡಾಡಿ ನೋಡಿದರು. ಸದ್ದು ನಿಂತಿತ್ತು. ಮನೆಯೊಳಗೆ ಹೋದರು. ಮತ್ತೆ ಧ್ವನಿ ಬಂತು. ಈ ಬಾರಿ ಅದು ಜೋರಾಗಿತ್ತು, ಅದು ಹೆಂಗಸು ಕೂಗಿದಂತೆಯೇ ಇತ್ತು. ರಾತ್ರಿಯೆಲ್ಲ ಮಲಗದೆ ಎಚ್ಚರವಾಗಿದ್ದರು. ಮರುದಿನ ಬೆಳಗಾದ ಮೇಲೆ ಸದ್ದು ಎಲ್ಲಿಂದ ಬಂದದ್ದು ಎಂದು ಹುಡುಕಲು ತೊಡಗಿದರು. ಒಂದು ತಾಸಿನ ನಂತರ ಹೆಂಡತಿಗೆ ಮನೆಯ ಹಿಂದಿದ್ದ ಮರದ ಮೇಲೆ ಏನೋ ಕಂಡಿತು. ಗಂಡನಿಗೆ ತೋರಿಸಿದಳು. ಗಂಡ ಮರಹತ್ತಿ ನೋಡಿ ಜೋರಾಗಿ ನಕ್ಕ. ಅದೊಂದು ತಗಡಿನ ಡಬ್ಬಿ. ಗಾಳಿಗೆ ಹಾರಿ ಮರದ ಕೊಂಬೆಗೆ ಸಿಲುಕಿಕೊಂಡಿದೆ. ಅದಕ್ಕೆ ತಳದಲ್ಲೊಂದು ತೂತಿದೆ. ಗಾಳಿ ಬೀಸಿದಾಗ ಡಬ್ಬದಲ್ಲಿ ಗಾಳಿ ತುಂಬಿ, ತೂತಿನಿಂದ ಹೊರಗೆ ಬರುವಾಗ ಶಿಳ್ಳೆ ಹೊಡೆದಂತೆ ಸದ್ದು ಮಾಡುತ್ತದೆ. ತರುಣ ಅದನ್ನು ಕೆಳಗಿಳಿಸಿದ. ದೆವ್ವದ ಕಾಟ ಮರೆಯಾಯಿತು. ಇದನ್ನು ಕೇಳಿದ ಜನರೆಲ್ಲ ನಕ್ಕರು. ದೆವ್ವದ ಭಯ ಇಲ್ಲವಾಯಿತು. ಭಯದ ಮೂಲ ತಿಳಿದಾಗ ಭಯ ಮಾಯ. ಕಗ್ಗ ಅದನ್ನು ಹೇಳುತ್ತದೆ. ಬ್ರಹ್ಮಸತ್ವ ಹೃದಯದಲ್ಲಿ ಸ್ಥಿರವಾದಾಗ, ಮಾಯೆಯ ಪ್ರಭಾವ ಮಾಯವಾಗುತ್ತದೆ. ಆಗ ಸಾವಿರ ಜನ್ಮ ಎತ್ತಿದರೂ ಭಯವಿಲ್ಲ, ಸಾವಿರ ಕರ್ಮಗಳು ಗಂಟುಬಿದ್ದರೂ ಚಿಂತೆಯಿಲ್ಲ. ಯಾಕೆಂದರೆ ಪ್ರಪಂಚ ಮೂಲದ ಜ್ಞಾನ ದೊರಕಿದೆಯಲ್ಲ. ಆಗ ಮಾಯೆಯ ಆಟ ಎಂತಿದ್ದರೂ ಅದು ನಮ್ಮನ್ನು ಕಂಗಾಲು ಮಾಡದೆ, ಅದೊಂದು ಪ್ರೇಯಸಿಯೊಂದಿಗಿನ ಸರಸದಂತೆ ತೋರುತ್ತದೆ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜೂನ್ 29, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ:** ಆಷಾಢ ಶುದ್ಧ ಏಕಾದಶಿ ಗಂ. 26-43 ನಕ್ಷತ್ರ: ಸ್ವಾತಿ ಗಂ. 16-30 ಯೋಗ: ಸಿದ್ಧ ಗಂ. 27-43 ಕರಣ: ವಣಿಜ ಗಂ. 15-07, ಮಿಥುನ ಮಾಸದ 14 ನೇ ದಿನ, ಮಳೆನಕ್ಷತ್ರ: ಆರ್ದ್ರಾ 2.
ರಾಹುಕಾಲ : ಮಧ್ಯಾಹ್ನ 01-30 - 03-00, ಸೂರ್ಯೋದಯ : 06-11 ಸೂರ್ಯಾಸ್ತ : 06-57, ಮುಸ್ಲಿಂ ದಿನಾಂಕ : 10 ಜುಲ್‌ಹಿಜಾ, ದಿನ ವಿಶೇಷ : ಪ್ರಥಮ ಏಕಾದಶಿ, ಹರಿಸಾಯನಿ ಏಕಾದಶಿ, ಈದ್- ಉಝ್-ಜುಹಾ (ಬಕ್ರೀದ್) (ಮುಸ್ಲಿಂ)
**ಅದೃಷ್ಟ ಸಂಖ್ಯೆ :** 4, 7

**ಮೇಷ:** ಹಿರಿಯರಿಂದ ಬೈಸಿಕೊಂಡ ಸಲುವಾಗಿ ಮನೆಯಲ್ಲಿ ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಿರಿ. ಷೇರು ವ್ಯವಹಾರಗಳ ಹೂಡಿಕೆಯು ಸತ್ಫಲ ನೀಡಲಾರದು. ಕೆಂಪು ಬಣ್ಣ ಶುಭ ತರಲಿದೆ.

**ವೃಷಭ:** ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ನಿರ್ಭಯವಾಗಿ ಮಾಡಿ ಮುಗಿಸುವಿರಿ. ಹೋಟೆಲ್ ಅಥವಾ ಸಮಾರಂಭಗಳಲ್ಲಿ ಊಟ ಮಾಡುವಾಗ ಎಚ್ಚರದಿಂದಿರಿ. ಕೆಲಸದ ಬಗ್ಗೆ ಅಧ್ಯಯನ ನಡೆಸಿಕೊಳ್ಳಿರಿ.

**ಮಿಥುನ:** ವ್ಯವಹಾರದಲ್ಲಿ ಬಹಳ ದಿನಗಳ ನಿರೀಕ್ಷಿತ ಬೆಳವಣಿಗೆ ಸಂಭವಿಸಬಹುದು. ಮನೋಕಾಮನೆಗಳು ಪೂರ್ಣಗೊಳ್ಳಲು ದುರ್ಗಾಪರಮೇಶ್ವರಿಯ ಆರಾಧನೆ ಮಾಡಿ. ನೆಮ್ಮದಿಯ ವಾತಾವರಣ ಉಂಟಾಗಲಿದೆ.

**ಕರ್ಕಾಟಕ:** ವೈಯಕ್ತಿಕ ವಿಚಾರಗಳಲ್ಲಿ ಅನ್ಯರಿಂದಾಗುವ ಒತ್ತಡಗಳಿಗೆ ಸಿಲುಕಿಕೊಳ್ಳುವುದನ್ನು ತಪ್ಪಿಸಿಕೊಳ್ಳಬೇಕು. ನಿಮ್ಮ ಶತ್ರುಗಳ ಬಣ್ಣ ಬಯಲಾಗುವುದು ಸಂತೋಷಕ್ಕೆ ಕಾರಣವಾಗುತ್ತದೆ. ಮನದ ಆಸೆಗಳು ಈ ದಿನ ಈಡೇರಲಿವೆ.

**ಸಿಂಹ:** ಕೃಷಿಯಲ್ಲಿ ಪಾಲಿಸುತ್ತಿರುವ ತಂತ್ರಗಳು ಶೀಘ್ರದಲ್ಲೇ ಫಲ ನೀಡಲಿದೆ. ವಿರೋಧಿಗಳ ಜೊತೆಯಲ್ಲಿ ದಿನದ ಹಲವು ಸಮಯವನ್ನು ಕಳೆಯಬೇಕಾಗುತ್ತದೆ. ಸಣ್ಣ ಉದ್ಯಮಿಗಳಿಗೆ ಹೆಚ್ಚು ವ್ಯಾಪಾರ ನಡೆಯುವುದು.

**ಕನ್ಯಾ:** ಕಾರ್ಯಕ್ಷೇತ್ರದಲ್ಲಿ ಕೆಲಸದ ಒತ್ತಡ ಕಡಿಮೆಯಾಗಿ ಮನೆಯ ವಿಚಾರಕ್ಕೆ ಸಮಯ ನೀಡಲು ಅವಕಾಶವಾಗುವುದು. ಹಿರಿಯರಿಂದ ಹಿತವಾಕ್ಯಗಳು, ಮಾರ್ಗದರ್ಶನ ಸಿಗುವುದು. ಪುಸ್ತಕ ಓದುವ ಹವ್ಯಾಸ ಹುಟ್ಟಲಿದೆ.

**ತುಲಾ:** ಮನರಂಜನೆಗೂ ಸಾಕಷ್ಟು ಸಮಯವನ್ನು ಮೀಸಲಿಟ್ಟು ಸಂತಸದಿಂದಿರುವಂತೆ ಆಗುವುದು. ಸ್ವತ್ತಿನ ವಿಚಾರದಲ್ಲಿ ಬಂಧುಗಳು ನೆರವಿಗೆ ಬರುವರು. ಲೆಕ್ಕ ಪರಿಶೋಧಕರು ಕೆಲಸದಲ್ಲಿ ಹೆಚ್ಚಿನ ತೃಪ್ತಿಯನ್ನು ಕಾಣಲಿದ್ದೀರಿ.

**ವೃಶ್ಚಿಕ:** ವಿವಾಹ ವಿಷಯಗಳು ನಿಶ್ಚಿತಗೊಂಡಿದ್ದರೂ ಇನ್ನೊಮ್ಮೆ ವಿಚಾರಿಸಿ ದೃಢಪಡಿಸಿಕೊಳ್ಳುವುದು ಉತ್ತಮ. ಲೇವಾದೇವಿ ವ್ಯವಹಾರಗಳು ಉತ್ತಮವಾಗಿ ಮುಂದುವರೆಯುವುದು.

**ಧನು:** ವ್ಯವಹಾರಿಕ ಚಾಣಾಕ್ಷತನಕ್ಕೆ, ಕ್ರಿಯಾಶೀಲತೆಗೆ ಸರಿಯಾಗಿ ಈ ದಿನ ಲಾಭವಾಗುವುದು. ನಾನಾ ರೀತಿಯಲ್ಲಿ ಉನ್ನತಿ ಗೋಚರಕ್ಕೆ ಬಂದರೂ ಹಣದ ಖರ್ಚು ವೆಚ್ಚಗಳ ಲೆಕ್ಕಾಚಾರದ ಬಗ್ಗೆ ಗಮನವಿರಲಿ.

**ಮಕರ:** ವ್ಯಾಪಾರ ವಿಷಯಗಳ ಸಂಬಂಧದಲ್ಲಿ ಕ್ಲಿಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ನಿಮ್ಮ ಅಂತರಂಗದ ಭಾವನೆಗಳಿಗೆ ಆದ್ಯತೆ ನೀಡಿ. ನಿಮ್ಮ ಉತ್ತಮ ಕಾರ್ಯದಿಂದ ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗುವಿರಿ.

**ಕುಂಭ:** ಪ್ರಾಮಾಣಿಕತೆಯ ಗುಣ ನೆರವಿಗೆ ಬರುತ್ತದೆ. ಅಸಹಾಯಕ ಪರಿಸ್ಥಿತಿಯಲ್ಲಿರುವ ನೀವು ಪರಿಣತರ ಸಲಹೆ, ಸೂಚನೆಗಳೊಂದಿಗೆ ಗಣಪತಿಯ ಆರಾಧನೆಯಿಂದ ಮುಂದುವರಿದರೆ ಪರಿಸ್ಥಿತಿ ತಿಳಿಯಾಗುತ್ತದೆ.

**ಮೀನ:** ಒಂದು ಘಟನೆ ನಿಮ್ಮನ್ನು ಭಾವುಕರನ್ನಾಗಿ ಮಾಡಲಿದೆ. ಮನಸ್ಸಿನ ಉದ್ವೇಗ ಕಡಿಮೆ ಮಾಡಿಕೊಳ್ಳಲು ದೇವರ ಧ್ಯಾನದಲ್ಲಿ ತೊಡಗುವಿರಿ. ಅನ್ನ ದಾನ ಮಾಡುವ ಯೋಚನೆಗಳು ಈ ದಿನ ನಿಮಗೆ ಬರಲಿದೆ.

## ಪದಬಂಧ 5364


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಚತುರ ನೋಡಿರುವ ಚೌಚೌಕ (3)
5.ವಸ್ತುಗಳನ್ನು ಗುಂಪು ಗುಂಪಾಗಿ ವರ್ಗೀಕರಿಸುವುದು (5)
7.ನಾಟಕವನ್ನು ಆಡುವ ವೇದಿಕೆ (4)
9.ಅಜ್ಜ ಹಿಡಿದಿರುವ ಆಡು (2)
10.ತರ್ಕ ಮಾಡುತ್ತಿರುವ ವ್ಯಾಪಾರಿ (3)
12.ತಳಿಗೆಯಲ್ಲಿರುವ ಅನುವಂಶಿಕ ಗುಣ (2)
14.ಮನೋಹರವಾದುದನ್ನು ಹೀಗೆ ಹೇಳಿ (4)
16.ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)
18.ಇದು ಅಸಲಿಯಂತೂ ಅಲ್ಲವೇ ಅಲ್ಲ! (3)

**ಮೇಲಿಂದ ಕೆಳಕ್ಕೆ**

1.ರಾಜ ಮಂತ್ರಿಗಳಿಂದ ಆಡುವ ಒಳಾಂಗಣ ಆಟ (4)
2.ಮಂದಿಯಿರುವ ಗುಡಿಯಿಲ್ಲಿ ಉಲ್ಟಾ ಕಾಣುತ್ತಿದೆ (3)
3.ಅಭಾವಕಾಲದಲ್ಲಿ ಬಂದಿರುವ ಅಕ್ಕನ ಗಂಡ (2)
4.ಬುದ್ಧಿವಂತಿಕೆಯಿದು (4)
6.ಧಾನ್ಯ ಸಂಗ್ರಹಿಸುವ ಸ್ಥಳ (3)
8.ಚಳಿಯಲ್ಲಿ ಆಂದೋಲನವೇ? (4)
9.ಯಾವುದೇ ಕಳಂಕವಿಲ್ಲದ್ದು (4)
11.ಹೊಸದಾಗಿ ಅಭಿನಯಿಸುತ್ತಿರುವವಳು (4)
12.ಅತಿಯಾದ ಆತುರ (3)
13.ಈತ ಗೆಲುವನ್ನು ಪಡೆದವನು (4)
15.ಮನದೊಳಗಿರುವ ಕಾಮ! (3)
17.ಅತ್ಯಂತ ಚಿಕ್ಕ ಕಣ ಉಲ್ಟಾ ಆಗಿದೆ (2)



### 5363ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
2.ಉತ್ಪ್ರೇಕ್ಷೆ 4.ಹಡಪ
5.ಸಮಾವೇಶ 6.ನದೀತೀರ
8.ನರ 10.ತಿವಿ
13.ವಾತಾಯನ 14.ಜಮಾಬಂದಿ
15.ಯಾಚಕ 16.ಯೌವ್ವನ

**ಮೇಲಿಂದ ಕೆಳಕ್ಕೆ:**
1.ಮಹಜರುನಾಮೆ 2.ಉಪನಯನ
3.ಆವೇಶ 5.ಸರಸ್ವತಿ
7.ಐತಿಹಾಸಿಕತೆ 9.ರಸವಾದಿ
11.ವಿಮಾನಯಾನ 12.ಜಾಮಾತೃ

## ಸುಡೊಕು 5750

| | | | | | | | | |
|---|---|---|---|---|---|---|---|---|
| | | 4 | | | 1 | | | 3 |
| | 7 | | | | | 6 | | |
| 5 | | | 8 | | 9 | | 4 | 7 |
| | | 5 | 4 | | | 3 | | |
| | 6 | | | 9 | | | 7 | |
| 3 | | | | | 8 | 5 | | 9 |
| 4 | 1 | | | 8 | | | 3 | |
| | | 2 | 7 | | 4 | 9 | | 1 |
| 7 | | 9 | | 3 | | | 2 | |


### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5749 ಸುಡೊಕು

| | | | | | | | | |
|---|---|---|---|---|---|---|---|---|
| 2 | 4 | 8 | 3 | 7 | 1 | 5 | 6 | 9 |
| 9 | 5 | 6 | 4 | 8 | 2 | 3 | 7 | 1 |
| 7 | 3 | 1 | 9 | 5 | 6 | 2 | 8 | 4 |
| 6 | 9 | 4 | 1 | 3 | 8 | 7 | 5 | 2 |
| 5 | 7 | 2 | 6 | 4 | 9 | 1 | 3 | 8 |
| 8 | 1 | 3 | 7 | 2 | 5 | 9 | 4 | 6 |
| 3 | 6 | 7 | 2 | 1 | 4 | 8 | 9 | 5 |
| 4 | 2 | 5 | 8 | 9 | 3 | 6 | 1 | 7 |
| 1 | 8 | 9 | 5 | 6 | 7 | 4 | 2 | 3 |

**ಷೇರುಪೇಟೆ ವಹಿವಾಟು** 499




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 18,817 |
| ಇಂದಿನ ಅಂತ್ಯ | 18,972 |
| ▲ | 154 |
| ದಿನದ ಕನಿಷ್ಠ | 19,011 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹600 |
| 12 ಮೊಟ್ಟೆಗೆ | ₹80 |
| ಮೈಸೂರು | |
| 100 ಮೊಟ್ಟೆಗೆ | ₹603 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1690(1675) |
| ಸೋಯಾ (ರಿಫೈನ್ಡ್) | ₹955(950) |
| ಸೂರ್ಯಕಾಂತಿ (ರಿಫೈನ್ಡ್) | ₹950(950) |
| ಪಾಮೋಲಿನ್ | ₹860(850) |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹149.50 |
| ಆರ್‌ಎಸ್‌ಎಸ್-5 | ₹144.50 |
| ಗುಡ್ ಲಾಟ್ | ₹125 |

**ಕೊಬ್ಬರಿ ಧಾರಣೆ**

| | |
|---|---|
| ತಿಪಟೂರು | ₹6800-8000 |
| ಕೆ.ಆರ್.ಪೇಟೆ (ಇತರ) | ₹7900-7900 |
| ಪುತ್ತೂರು (ಇತರ) | ₹4500-7300 |
| ತುಮಕೂರು (ಉಂಡೆ) | ₹8000-8520 |

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ (ಸಿ.ಬಿ) | ₹200-390 |
| ದ್ವಿತಳಿ (ಬಿ.ವಿ) | ₹211-533 |

**ಈರುಳ್ಳಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹1,200-1,500 |
| ಮಧ್ಯಮ | ₹800-1,200 |
| ಸಣ್ಣ | ₹400-800 |

**ಮುಂಬೈ ಧಾರಣೆ**

**ಶೇಂಗಾ**

28–6-2023

| | |
|---|---|
| ಜಾವಾ 70/80(ಹೊಸ) | 11,250-11,300 |
| ಜಾವಾ 80/90(ಹೊಸ) | 10,650-10,700 |
| ದಪ್ಪ ಮಧ್ಯಪ್ರದೇಶ(ಹೊಸ) | 11,100-11,200 |
| ದಪ್ಪ ಗುಜರಾತ್(ಹೊಸ) | 12,000-12,100 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1700(1685) |
| ಒಂದು ವಾರದ ಡೆಲಿವರಿ | 1695(1680) |
| ಸೋಯಾ ಕಚ್ಚಾ | 895(900) |
| ಪಾಮ್ ವಾರದ ಡೆಲಿವರಿ | 858(848) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 850(850) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
57,950(58,300)
ಬೆಳ್ಳಿ ಕೆ.ಜಿ 69,000(69,600))

ಆವರಣದಲ್ಲಿ ಹಿಂದಿನ ದಿನದ ಧಾರಣೆ

# ಹೊಸ ಎತ್ತರ ತಲುಪಿದ ಸೆನ್ಸೆಕ್ಸ್, ನಿಫ್ಟಿ

## ಷೇರು ಮಾರುಕಟ್ಟೆಯಲ್ಲಿ ತೇಜಿ ವಹಿವಾಟು • ಹೆಚ್ಚಿದ ಬಂಡವಾಳ ಮೌಲ್ಯ



ಮುಂಬೈ (ಪಿಟಿಐ): ಬುಧವಾರದ ವಹಿವಾಟಿನಲ್ಲಿ ಷೇರುಪೇಟೆ ಸಂವೇದಿ ಸೂಚ್ಯಂಕಗಳು ಹೊಸ ಎತ್ತರವನ್ನು ತಲುಪಿದವು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ವಹಿವಾಟಿನ ನಡುವಿನಲ್ಲಿ ಇದೇ ಮೊದಲ ಬಾರಿಗೆ 64 ಸಾವಿರ ಅಂಶಗಳ ಗಡಿ ದಾಟಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 19 ಸಾವಿರ ಅಂಶಗಳ ಗಡಿ ದಾಟಿತು.


ವಿದೇಶಿ ಹೂಡಿಕೆಯ ಒಳಹರಿವು, ಅಮೆರಿಕ ಹಾಗೂ ಯುರೋಪಿನ ಮಾರುಕಟ್ಟೆಗಳಲ್ಲಿ ನಡೆದ ತೇಜಿ ವಹಿವಾಟು ಭಾರತದ ಹೂಡಿಕೆದಾರರಲ್ಲಿ ವಿಶ್ವಾಸವನ್ನು ಹೆಚ್ಚು ಮಾಡಿದವು. ರಿಲಯನ್ಸ್ ಇಂಡಸ್ಟ್ರೀಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಇನ್ಫೊಸಿಸ್ ಷೇರುಗಳ ಖರೀದಿ ಭರಾಟೆ ಜೋರಾಗಿದ್ದುದು ಏರುಗತಿಯ ವಹಿವಾಟಿಗೆ ಇಂಬು ಕೊಟ್ಟಿತು ಎಂದು ವರ್ತಕರು ತಿಳಿಸಿದ್ದಾರೆ.

ದಿನದ ಅಂತ್ಯಕ್ಕೆ ಸೆನ್ಸೆಕ್ಸ್ 499 ಅಂಶ ಏರಿಕೆ ಕಂಡು, 63,915ರಲ್ಲಿ ವಹಿವಾಟು ಕೊನೆಗೊಳಿಸಿತು. ವಹಿವಾಟಿನ ನಡುವಿನಲ್ಲಿ ಸೂಚ್ಯಂಕವು 64,050 ಅಂಶಗಳನ್ನು ತಲುಪಿತ್ತು. ನಿಫ್ಟಿ ಸೂಚ್ಯಂಕವು 154 ಅಂಶ ಏರಿಕೆ ಕಂಡು 18,972 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ವಹಿವಾಟಿನ ನಡುವಿನಲ್ಲಿ ನಿಫ್ಟಿ 19 ಸಾವಿರ ಅಂಶಗಳನ್ನು ದಾಟಿತ್ತು.

‘ಹಣದುಬ್ಬರ ಪ್ರಮಾಣವು ಈಚೆಗೆ ಇಳಿಕೆ ಕಂಡಿರುವುದು ಹೂಡಿಕೆದಾರರಲ್ಲಿ ನೆಮ್ಮದಿ ಮೂಡಿಸಿದೆ. ಹೀಗಾಗಿ, ರೆಪೊ ದರ ಹೆಚ್ಚಿಸುವ ಪ್ರಕ್ರಿಯೆ ಕೊನೆಗೊಳ್ಳಬಹುದು ಎಂಬ ನಿರೀಕ್ಷೆ ಅವರಲ್ಲಿದೆ’ ಎಂದು ಯೆಸ್ ಸೆಕ್ಯುರಿಟೀಸ್‌ನ ಸಾಂಸ್ಥಿಕ ಈಕ್ವಿಟಿ ಮುಖ್ಯಸ್ಥ ಅಮರ್ ಅಂಬಾನಿ ಹೇಳಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕ ಶೇ 0.73ರಷ್ಟು, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 0.08ರಷ್ಟು ಏರಿಕೆ ದಾಖಲಿಸಿವೆ.

**ವಲಯವಾರು ಏರಿಕೆ**




### ಹೂಡಿಕೆದಾರರ ಸಂಪತ್ತು ಏರಿಕೆ

ನವದೆಹಲಿ (ಪಿಟಿಐ): ಎರಡು ದಿನಗಳಿಂದ ಮಾರುಕಟ್ಟೆಯಲ್ಲಿ ನಡೆದಿರುವ ತೇಜಿ ವಹಿವಾಟಿನ ಪರಿಣಾಮವಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹3.43 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ.

ಈಗ ಬಿಎಸ್‌ಇ ನೋಂದಾಯಿತ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ₹294.36 ಲಕ್ಷ ಕೋಟಿ ಆಗಿದೆ.

# ಕಾಫಿ ಮಂಡಳಿಗಿಲ್ಲ ಸಾರಥಿ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಕಾಫಿ ಬೆಳೆಗೆ ಬೆಲೆ ಇದ್ದರೂ ಅದರ ಲಾಭ ಬೆಳೆಗಾರರಿಗೆ ದೊರಕುತ್ತಿಲ್ಲ. ಹವಾಮಾನ ವೈಪರೀತ್ಯದಿಂದ ಫಸಲು ಕಡಿಮೆಯಾಗಿ ಸಣ್ಣ ಬೆಳೆಗಾರರು ಕಷ್ಟಕ್ಕೆ ಸಿಲುಕಿದ್ದಾರೆ. ಬೆಳೆಗಾರರಿಗೆ ನೆರವಾಗಬೇಕಾದ ಕಾಫಿ ಮಂಡಳಿಗೆ 15 ತಿಂಗಳಿಂದ ಸಾರಥಿಯೇ ಇಲ್ಲ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಧೀನದಲ್ಲಿರುವ, ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಕಾಫಿ ಮಂಡಳಿಗೆ ಎಂ.ಎಸ್.ಬೋಜೇಗೌಡ ಎರಡು ಅವಧಿಗೆ ಅಧ್ಯಕ್ಷರಾಗಿದ್ದರು. ಮಂಡಳಿಗೆ ಆಯ್ಕೆಯಾದ ಮೊದಲ ಕಾಫಿ ಬೆಳೆಗಾರ ಕೂಡ ಆಗಿದ್ದರು. 2022ರ ಮಾರ್ಚ್‌ನಲ್ಲಿ ಬೋಜೇಗೌಡ ಅವರ ಅವಧಿ ಮುಕ್ತಾಯಗೊಂಡಿತು. ಕೆಲವೇ ದಿನಗಳ ನಂತರ ಅವರು ಹೆಜ್ಜೇನು ದಾಳಿಯಿಂದ ಮೃತಪಟ್ಟರು.

ಇದಾದ ಬಳಿಕ ಅಧ್ಯಕ್ಷರ ನೇಮಕವನ್ನೇ ಸರ್ಕಾರ ಮಾಡಿಲ್ಲ. ಕಾಫಿ ಮಂಡಳಿ ಎಂದರೆ ಸರ್ಕಾರ ಮತ್ತು ಬೆಳೆಗಾರರ ನಡುವೆ ಸೇತುವೆಯಾಗಿ ಕೆಲಸ ಮಾಡುತ್ತದೆ. ಹವಾಮಾನ ವೈಪರೀತ್ಯ, ಕೀಟ ಬಾಧೆ, ನಿರ್ವಹಣಾ ವೆಚ್ಚ ಹೆಚ್ಚಳದಿಂದಾಗಿ ಕಾಫಿ ಬೆಳೆಯುವುದೇ ಕಷ್ಟವಾಗಿದೆ. ಅರೆಬಿಕಾ ಕಾಫಿಯಂತೂ ವಿನಾಶದ ಅಂಚಿಗೆ ಹೋಗಿದೆ.

ರೊಬೊಸ್ಟಾ ಕಾಫಿಗೆ ಇತಿಹಾಸದಲ್ಲೇ ಕಂಡರಿಯದ ಬೆಲೆ ಬಂದಿದೆ. ಆದರೆ, ಅದರ ಲಾಭ ಸಣ್ಣ ಬೆಳೆಗಾರರಿಗೆ ದೊರಕದಂತಾಗಿದೆ. ಬೆಲೆ ಬರುವ ತನಕ ಕಾಯಲು ಸಾಧ್ಯವಾಗದಷ್ಟು ಆರ್ಥಿಕ ಸಂಕಷ್ಟದಲ್ಲಿ ಬೆಳೆಗಾರರಿದ್ದಾರೆ.

‘ಕಾಫಿ ಮಂಡಳಿಯ ಪ್ರಮುಖ ಕೆಲಸ ಎಂದರೆ ಸಂಶೋಧನೆ ಮತ್ತು ಅಭಿವೃದ್ಧಿ. ಹೊಸ ತಳಿಗಳನ್ನು ಕಂಡು ಹಿಡಿಯುವುದು, ಕಾಫಿಗೆ ತಗಲುವ ಕೀಟ ಬಾಧೆಗೆ ಪರಿಹಾರ ಹುಡುಕುವುದು, ಹವಾಮಾನ ವೈಪರೀತ್ಯದಿಂದ ಆಗುತ್ತಿರುವ ತೊಂದರೆಯಿಂದ ಬೆಳೆ ರಕ್ಷಣೆ ಮಾಡುವುದು ಹೇಗೆ ಎಂಬುದರ ಬಗ್ಗೆ ಸಂಶೋಧನೆಗಳು ನಿರಂತರವಾಗಿ ನಡೆಯಬೇಕು. ಇಳುವರಿ ಜಾಸ್ತಿ ಮಾಡಲು ಬೆಳೆಗಾರರಿಗೆ ಮಂಡಳಿಯಿಂದ ನೆರವು ದೊರಕಬೇಕು. ಕಾಫಿ ಗಿಡ ಮರು ನಾಟಿ ಮತ್ತು ನೀರಾವರಿ ಸೌಲಭ್ಯ ಪಡೆದುಕೊಳ್ಳಲು ಮಂಡಳಿಯಿಂದ ಪ್ರೋತ್ಸಾಹಧನ ಸಿಗುತ್ತಿದೆ. ಪಲ್ಪರ್ ಘಟಕ, ಗೋದಾಮು, ಕಾಫಿ ಬೀಜ ಒಣಗಿಸುವ ಯಂತ್ರಗಳನ್ನು ಖರೀದಿ ಮಾಡಲು ಮಂಡಳಿಯಿಂದ ಪ್ರೋತ್ಸಾಹಧನ ದೊರಕಬೇಕು’ ಎಂದು ಕಾಫಿ ಬೆಳೆಗಾರರು ಹೇಳುತ್ತಾರೆ.

‘ಹವಾಮಾನ ವೈಪರೀತ್ಯದಿಂದ ಮಳೆ ಅಕಾಲಿಕವಾಗಿಯೂ ಸುರಿಯುತ್ತದೆ. ಕಾಫಿ ಬೀಜ ಒಣಗಿಸಲು ಪರದಾಡಬೇಕಾದ ಸ್ಥಿತಿ ಇದೆ. ಆದ್ದರಿಂದ ಕಾಫಿಬೀಜ ಒಣಗಿಸುವ ಯಂತ್ರ ಈಗ ಅತ್ಯಗತ್ಯ. ಕಾರ್ಮಿಕರ ಸಮಸ್ಯೆ ಹೆಚ್ಚಾಗುತ್ತಿರುವುದರಿಂದ ಯಂತ್ರಗಳ ಬಳಕೆ ಅಧಿಕವಾಗಬೇಕಿದೆ. ಯಂತ್ರಗಳ ಖರೀದಿಗೆ ಸಬ್ಸಿಡಿ ಹೆಚ್ಚಿನ ಪ್ರಮಾಣದಲ್ಲಿ ದೊರಕಬೇಕು. ಈ ಎಲ್ಲಾ ಬೇಡಿಕೆಗಳು ಅಧಿಕಾರಿಗಳಿಗೆ ಅರ್ಥವಾಗುವುದಿಲ್ಲ. ಬೆಳೆಗಾರರೇ ಮಂಡಳಿ ಅಧ್ಯಕ್ಷರಾದರೆ ಸಮಸ್ಯೆಗಳಿಗೆ ಪರಿಹಾರ ದೊರಕಲಿದೆ’ ಎಂದು ಅವರು ಪ್ರತಿಪಾದಿಸುತ್ತಾರೆ.

### ಬೆಳೆಗಾರರನ್ನೇ ನೇಮಿಸಲು ಒತ್ತಾಯ

‘ಕಾಫಿ ಮಂಡಳಿಗೆ ಅಧ್ಯಕ್ಷರ ನೇಮಕ ಕೂಡಲೇ ಆಗಬೇಕು. ಕಾಫಿ ಬೆಳೆಗಾರರನ್ನೇ ಅದರಲ್ಲೂ ಉದ್ಯಮದ ಬಗ್ಗೆ ಜ್ಞಾನ ಇರುವವರನ್ನು ಅಧ್ಯಕ್ಷರನ್ನಾಗಿ ಮಾಡಬೇಕು’ ಎಂದು ಕರ್ನಾಟಕ ಕಾಫಿ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಎಚ್.ಟಿ ಮೋಹನ್ ಕುಮಾರ್ ಒತ್ತಾಯಿಸಿದರು.

‘ಕಾಫಿ ಬೆಳೆ ಬಗ್ಗೆ ತಿಳುವಳಿಕೆ ಇಲ್ಲದವರು ಅಧ್ಯಕ್ಷರಾದರೆ ಅರ್ಥ ಮಾಡಿಕೊಳ್ಳುವಷ್ಟರಲ್ಲಿ ಅವಧಿಯೇ ಮುಕ್ತಾಯವಾಗಲಿದೆ. ಆದ್ದರಿಂದ ಕಾಫಿ ಬೆಳೆಗಾರರನ್ನೇ ಅಧ್ಯಕ್ಷರನ್ನಾಗಿ ನೇಮಿಸಬೇಕು. ಕಳೆದ ಅವಧಿಯಲ್ಲಿ ಚಿಕ್ಕಮಗಳೂರಿಗೆ ಅವಕಾಶ ದೊರೆತಿದೆ. ಈ ಬಾರಿ ಹಾಸನ, ಮುಂದಿನ ದಿನಗಳಲ್ಲಿ ಕೊಡಗು ಜಿಲ್ಲೆಗೆ ಅವಕಾಶ ನೀಡಬೇಕು. ಎಲ್ಲಾ ಮಾನದಂಡಗಳನ್ನು ಪರಿಗಣಿಸಿ ಕೇಂದ್ರ ಸರ್ಕಾರ ಅಧ್ಯಕ್ಷರನ್ನು ನೇಮಕ ಮಾಡಬೇಕು’ ಎಂದು ಮನವಿ ಮಾಡಿದರು.

## ಕ್ರಿಷನ್ ಶರ್ಮ ಅಧಿಕಾರ ಸ್ವೀಕಾರ



ಕ್ರಿಷನ್ ಶರ್ಮ

ಬೆಂಗಳೂರು: ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಬೆಂಗಳೂರು ಮಂಡಲದ ಮುಖ್ಯ ಪ್ರಧಾನ ವ್ಯವಸ್ಥಾಪಕ ಆಗಿ ಕ್ರಿಷನ್ ಶರ್ಮ ಅವರು ಈಚೆಗೆ ಅಧಿಕಾರ ವಹಿಸಿಕೊಂಡಿದ್ದಾರೆ. ಶರ್ಮ ಅವರು ರಾಜಸ್ಥಾನ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. 1991ರಲ್ಲಿ ಪ್ರೊಬೆಷನರಿ ಅಧಿಕಾರಿಯಾಗಿ ಎಸ್‌ಬಿಐ ಸೇರಿದ ಅವರು ವಿವಿಧ ಕಡೆಗಳಲ್ಲಿ ಹಲವು ಹುದ್ದೆಗಳನ್ನು ನಿರ್ವಹಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 300-350 |
| ನಡುಗೋಲು | 450-500 |
| ರಾಶಿ | 500-550 |
| ರಾಶಿ ಉತ್ತಮ | 750-800 |
| ಜರಡಿ | 1000 - 1050 |
| ಹೆರಕಿದ್ದು | 1200-1300 |
| ಹಸಿರು ಸಾಧಾರಣ | 800-900 |
| ಹಸಿರು ಉತ್ತಮ | 1,000-1,100 |
| ಹಸಿರು ಅತಿ ಉತ್ತಮ | 1,600-1,650 |
| ಕಾಳು ಮೆಣಸು | - 480 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12,500-25,000 |
| ಹೊಸತು | 27,500-41,500 |
| ಹಳತು | 48,000-50,500 |
| **ಕಾರ್ಕಳ** | |
| ಹೊಸತು | 30,000-41,500 |
| ಹಳತು | 40,000-50,000 |
| **ಕುಮಟಾ** | |
| ಚಿಪ್ಪು | 29,999-33,019 |
| ಕೋಕ | 20,199-32,899 |
| ಫ್ಯಾಕ್ಟರಿ | 14,509-22,749 |
| ಹಳೆಚಾಲಿ | 38,169-40,399 |
| ಹೊಸಚಾಲಿ | 36,099-38,599 |
| **ಪುತ್ತೂರು** | |
| ಕೋಕ | 11,000-25,000 |
| ಹೊಸತು | 34,000-41,500 |
| **ಶಿವಮೊಗ್ಗ** | |
| ಬೆಟ್ಟೆ | 47,299-54,599 |
| ಗೊರಬಲು | 18,009-39,559 |
| ರಾಶಿ | 38,389-53,211 |
| ಸರಕು | 49,100-81,900 |
| **ಸಿದ್ದಾಪುರ** | |
| ಬಿಳಿಗೋಟು | 29,399-33,799 |
| ಚಾಲಿ | 37,399-39,309 |
| ಕೋಕ | 27,099-32,899 |
| ಹಳೆಚಾಲಿ | 38,055-38,499 |
| ಕೆಂಪುಗೋಟು | 28,012-33,012 |
| ರಾಶಿ | 44,099-49,869 |
| ತಟ್ಟಿಬೆಟ್ಟೆ | 38,699-48,099 |
| **ಶಿರಸಿ** | |
| ಬೆಟ್ಟೆ | 39,709-48,099 |
| ಬಿಳಿಗೋಟು | 25,309-33,699 |
| ಚಾಲಿ | 35,819-39,599 |
| ಕೆಂಪುಗೋಟು | 27,299-37,121 |
| ರಾಶಿ | 47,018-49,929 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 14,500 | 14,800 | 14,650 | 166.85 ಸೆಂಟ್ಸ್ |
| ಎಸಿ | 7,280 | 7,600 | 7,500 | |
| ಆರ್‌ಪಿ | 10,200 | 10,700 | 10,700 | ಲಂಡನ್ |
| ಆರ್‌ಸಿ | 6,090 | 256 | 6,150 | - ಡಾಲರ್ಸ್ 2715 |

## ಜಿಎಸ್‌ಟಿ ತಿದ್ದುಪಡಿ: ಒಪ್ಪದ ಸರ್ಕಾರ

ಬೆಂಗಳೂರು: ಜಿಎಸ್‌ಟಿ ಮಂಡಳಿಯು ತಿದ್ದುಪಡಿ ಮಾಡಿ ರಾಜ್ಯಕ್ಕೆ ಕಳುಹಿಸಿರುವ ಮಸೂದೆಯಲ್ಲಿರುವ ಕೆಲ ತಿದ್ದುಪಡಿಗಳನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿಲ್ಲ ಎಂದು ಕಾನೂನು ಮತ್ತು ಸಂಸದೀಯ ಸಚಿವ ಎಚ್. ಕೆ.ಪಾಟೀಲ ಹೇಳಿದ್ದಾರೆ.

‘ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ತಿದ್ದುಪಡಿ ಮಸೂದೆ-2023’ ಕ್ಕೆ ಒಪ್ಪಿಗೆ ನೀಡಲಾಗಿದೆ ಎಂದು ಅವರು ತಿಳಿಸಿದರು.

‘ಕಾಯ್ದೆಯ ನಿಯಮ 132(ಕೆ) ಅಡಿ ವ್ಯಾಪಾರಸ್ಥರು ತಪ್ಪು ಮಾಹಿತಿ ನೀಡಿದ್ದರೆ ಆ ಮಾಹಿತಿ ಸತ್ಯ ಎಂದು ಸಾಬೀತು ಮಾಡಬೇಕಾದ ಜವಾಬ್ದಾರಿ ವ್ಯಾಪಾರಿಯದ್ದಾಗಿರುತ್ತದೆ. ಅದನ್ನು ಬದಲಾಯಿಸಿ ಆತ ನೀಡುವ ಮಾಹಿತಿ ಸರಿ ಇಲ್ಲ ಎಂದು ಆಕ್ಷೇಪ ತೆಗೆಯುವ ಜವಾಬ್ದಾರಿ ಸರ್ಕಾರದ್ದಾಗಬೇಕು ಎಂಬ ತಿದ್ದುಪಡಿ ಮಾಡುವಂತೆ ಜಿಎಸ್‌ಟಿ ಮಂಡಳಿ ನೀಡಿದ್ದ ಸಲಹೆಯನ್ನು ನಾವು ಒಪ್ಪಿಲ್ಲ’ ಎಂದರು.

## ಫಿಲಿಪ್ಪೀನ್ಸ್: 2,700 ಕೆಲಸಗಾರರ ರಕ್ಷಣೆ

ಮನಿಲಾ (ಎಪಿ): ಮೋಸದಿಂದ ಅಪಹರಣಕ್ಕೊಳಗಾಗಿ, ಅಕ್ರಮ ಆನ್‌ಲೈನ್ ಗೇಮಿಂಗ್ ಜಾಲತಾಣಗಳು ಹಾಗೂ ಇತರ ಸೈಬರ್ ಅಪರಾಧಿ ಗುಂಪುಗಳಲ್ಲಿ ಕೆಲಸ ಮಾಡುತ್ತಿದ್ದ 2,700ಕ್ಕೂ ಹೆಚ್ಚು ಕೆಲಸಗಾರರನ್ನು ಕಮಾಂಡೊಗಳ ಬೆಂಬಲದೊಂದಿಗೆ ಫಿಲಿಪ್ಪೀನ್ಸ್ ಪೊಲೀಸರು ಮನಿಲಾದ ಲಾಸ್ ಪಿನಾಸ್ ನಗರದಲ್ಲಿ ಮಂಗಳವಾರ ಬೃಹತ್ ದಾಳಿ ನಡೆಸಿ ರಕ್ಷಿಸಿದ್ದಾರೆ.

# ಜೈಲಿನಲ್ಲಿರುವ ಪತ್ರಕರ್ತೆಯರಿಗೆ ‘ಗೋಲ್ಡನ್ ಪೆನ್’ ಪ್ರಶಸ್ತಿಯ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಲ್ಡ್ ಅಸೋಶಿಯೇಷನ್ ಆಫ್ ನ್ಯೂಸ್ ಪಬ್ಲಿಷರ್ಸ್ (ವ್ಯಾನ್-ಇಫ್ರಾ) ಕೊಡಮಾಡುವ ಪ್ರಸಕ್ತ ಸಾಲಿನ ವಾರ್ಷಿಕ ‘ಗೋಲ್ಡನ್ ಪೆನ್ ಆಫ್ ಫ್ರೀಡಂ’ ಪ್ರಶಸ್ತಿಗೆ ಇರಾನ್ ಪತ್ರಕರ್ತೆಯರಾದ ಇಲಾಹೆ ಮೊಹಮ್ಮದಿ ಮತ್ತು ನಿಲೋಫರ್ ಹಮೇದಿ ಭಾಜನರಾಗಿದ್ದಾರೆ. ಈ ಇಬ್ಬರೂ ಪತ್ರಕರ್ತೆಯರು ಈಗ ಜೈಲಿನಲ್ಲಿದ್ದಾರೆ.

ತೈವಾನ್‌ನ ತೈಪೆಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಪತ್ರಿಕಾ ಸ್ವಾತಂತ್ರ್ಯ ಪ್ರತಿಪಾದನೆ ಮತ್ತು ರಕ್ಷಣೆಯಲ್ಲಿ ಮಹತ್ತರ ಪಾತ್ರ ನಿಭಾಯಿಸುತ್ತಿರುವ ಪತ್ರಕರ್ತರಿಗೆ ಪ್ರತಿ ವರ್ಷವೂ ಈ ಪ್ರಶಸ್ತಿ ನೀಡಲಾಗುತ್ತದೆ.

ಇರಾನ್‌ನಲ್ಲಿ ಹಿಜಾಬ್ ವಿರುದ್ಧ ಧ್ವನಿ ಎತ್ತಿದ ಕುರ್ದಿಷ್ ಯುವತಿ ಮಹ್ಸಾ ಅಮಿನಿ ಸಾವು ಪ್ರಕರಣವನ್ನು ಜಗತ್ತಿನ ಮುಂದೆ ತೆರೆದಿಟ್ಟಿದ್ದು ಈ ಇಬ್ಬರು ಪತ್ರಕರ್ತೆಯರ ಹೆಗ್ಗಳಿಕೆ. ಇದರಿಂದ ಇರಾನಿ ಸರ್ಕಾರ ಕೆಂಗಣ್ಣಿಗೆ ಗುರಿಯಾಗಿರುವ ಈ ಇಬ್ಬರು ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ.

ವಸ್ತ್ರಸಂಹಿತೆ ಉಲ್ಲಂಘಿಸಿದ ಆರೋಪದ ಮೇಲೆ ಮಹ್ಸಾ ಅಮಿನಿ ಅವರನ್ನು ನೈತಿಕ ಪೊಲೀಸರು ವಶಕ್ಕೆ ಪಡೆದಿದ್ದರು. ಅವರ ವಶದಲ್ಲಿದ್ದ ವೇಳೆಯೇ ಅವರು ಮೃತಪಟ್ಟಿದ್ದರು. ಅಮಿನಿ ಸಾವು ಖಂಡಿಸಿ ಅಲ್ಲಿನ ಮುಸ್ಲಿಂ ಮಹಿಳೆಯರು ಕೂದಲು ಕತ್ತರಿಸಿ, ಹಿಜಾಬ್ ಸುಟ್ಟು ಆಕ್ರೋಶ ವ್ಯಕ್ತಪಡಿಸಿದ್ದರು. ಅಮಿನಿ ಸಾವಿನ ಪ್ರಕರಣದ ವಿರುದ್ಧ ಇಡೀ ವಿಶ್ವದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು. ನಿಲೋಫರ್ ಹಮೇದಿ ಅಲ್ಲಿನ ‘ಶಾರ್ಗ್’ ಹೆಸರಿನ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದರು. ಆಸ್ಪತ್ರೆಯಲ್ಲಿದ್ದ ಅಮಿನಿ ಅವರ ಮೃತದೇಹದ ಫೋಟೊ ಮತ್ತು ವರದಿಯನ್ನು ಆನ್‌ಲೈನ್‌ನಲ್ಲಿ ಮೊದಲು ಪ್ರಕಟಿಸಿದ್ದು ಇವರೇ.

ಆ ನಂತರ ಸಾವಿರಾರು ಜನರು ಪಾಲ್ಗೊಂಡಿದ್ದ ಅಮಿನಿ ಅಂತ್ಯಕ್ರಿಯೆಯನ್ನು ಇಲಾಹೆ ಮೊಹಮ್ಮದಿ ವರದಿ ಮಾಡಿದ್ದರು. ಬಳಿಕ ಇಡೀ ರಾಷ್ಟ್ರವ್ಯಾಪಿ ಹಬ್ಬಿದ ಹೋರಾಟವು ಇರಾನಿ ಸರ್ಕಾರದ ರಾಜಕೀಯ ಸ್ವಾತಂತ್ರ್ಯ ಮತ್ತು ಹೊಣೆಗಾರಿಕೆಯನ್ನು ಪ್ರಶ್ನಿಸಿತ್ತು.

‘ಈ ಇಬ್ಬರ ಬಂಧನ ಅಮಾನವೀಯ. ಇಬ್ಬರನ್ನು ಬಂಧನದಿಂದ ಮುಕ್ತಗೊಳಿಸಬೇಕು’ ಎಂದು ಪ್ರಶಸ್ತಿಯ ಆಯ್ಕೆ ಸಮಿತಿ ಒತ್ತಾಯಿಸಿದೆ.



ಪತ್ರಕರ್ತರಾದ ನಿಲೋಫರ್ ಹಮೇದಿ ಮತ್ತು ಇಲಾಹೆ ಮೊಹಮ್ಮದಿ ಅವರು ಸ್ವಾತಂತ್ರ್ಯದ ಗೋಲ್ಡನ್ ಪೆನ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ


## ‘ಚೀನಾದ ಆಕ್ರಮಣ ತಡೆಯಬೇಕು’

ವಾಷಿಂಗ್ಟನ್ (ಪಿಟಿಐ): ‘ಚೀನಾದ ಆಕ್ರಮಣದ ವಿರುದ್ಧ ಅಮೆರಿಕವು ಅಗತ್ಯ ಕ್ರಮ ತೆಗೆದುಕೊಳ್ಳಲೇಬೇಕು. ಇದಕ್ಕಾಗಿ ಭಾರತದ ಜತೆಗೆ ಬಲವಾದ ಬಾಂಧವ್ಯವನ್ನು ನಾವು ಸಾಧಿಸಬೇಕು’ ಎಂದು ವಿಶ್ವಸಂಸ್ಥೆಯಲ್ಲಿನ ಅಮೆರಿಕದ ಮಾಜಿ ರಾಯಭಾರಿ ನಿಕ್ಕಿ ಹ್ಯಾಲೆ ಅವರು ಜೋ ಬೈಡನ್ ಅವರ ಆಡಳಿತಕ್ಕೆ ಸಲಹೆ ನೀಡಿದ್ದಾರೆ.

ವಾಷಿಂಗ್ಟನ್ ಡಿಸಿಯಲ್ಲಿನ ಅಮೆರಿಕದ ಉದ್ಯಮ ಸಂಸ್ಥೆಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಅಮೆರಿಕದ ಭದ್ರತೆ ಮತ್ತು ಸಮೃದ್ಧಿಗೆ ಚೀನಾ ಬಹುದೊಡ್ಡ ಅಪಾಯವೊಡ್ಡುತ್ತಿದೆ. ಭಾರತ, ಜಪಾನ್ ಮತ್ತು ಆಸ್ಟ್ರೇಲಿಯಾದಂತಹ ರಾಷ್ಟ್ರಗಳೊಂದಿಗೆ ಗಟ್ಟಿಯಾದ ಬಾಂಧವ್ಯವನ್ನು ಅಮೆರಿಕ ಹೊಂದಬೇಕು ಎಂದಿದ್ದಾರೆ.

ಇದು ಅಮೆರಿಕದ ಭದ್ರತೆ ಮತ್ತು ಅಭ್ಯುದಯಕ್ಕೆ ಭಾರಿ ಬೆದರಿಕೆಯೊಡ್ಡುವಂತೆ ಹೆಚ್ಚುತ್ತಿರುವ ಚೀನಾದ ಪ್ರಭಾವಕ್ಕೆ ಕಡಿವಾಣ ಹಾಕಲು ನೆರವಾಗಲಿದೆ’ ಎಂದು ಹೇಳಿದ್ದಾರೆ.





# 10,000 ಎಚ್–1ಬಿ ವೀಸಾ: ಕೆನಡಾದಲ್ಲಿ ಉದ್ಯೋಗಾವಕಾಶ

**ಮುಖ್ಯಾಂಶಗಳು**

- ಜುಲೈ 16ರ ಒಳಗಾಗಿ ಯೋಜನೆ ಜಾರಿ
- ಕೆನಡಾದಲ್ಲಿ ಮೂರು ವರ್ಷ ಉದ್ಯೋಗಕ್ಕೆ ಅವಕಾಶ

ಟೊರಾಂಟೊ (ಪಿಟಿಐ): ಅಮೆರಿಕದ ಎಚ್–1ಬಿ ವೀಸಾ ಹೊಂದಿರುವ 10,000 ಜನರಿಗೆ ಕೆನಡಾದಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ ಎಂದು ಕೆನಡಾ ಘೋಷಿಸಿದೆ. ಇದರ ಲಾಭ, ಭಾರತದ ಸಹಸ್ರಾರು ಐ.ಟಿ ಉದ್ಯೋಗಾಕಾಂಕ್ಷಿಗಳಿಗೆ ದೊರೆಯುವ ನಿರೀಕ್ಷೆಯಿದೆ.

ಅತ್ಯಾಧುನಿಕ ತಂತ್ರಜ್ಞಾನ ಕ್ಷೇತ್ರಗಳ ಜಾಗತಿಕ ನಾಯಕನಾಗಿ ಹೊರಹೊಮ್ಮುವ ಗುರಿಯನ್ನು ಕೆನಡಾ ಹೊಂದಿದೆ. ಅಮೆರಿಕದ ತಂತ್ರಜ್ಞಾನ ಆಧರಿತ ಸೇವೆ ಒದಗಿಸುವ ಪ್ರಮುಖ ಕಂಪನಿಗಳು ಉದ್ಯೋಗ ಕಡಿತ ಮಾಡುತ್ತಿರುವುದರ ಲಾಭ ಪಡೆಯಲು ಕೆನಡಾ ಮುಂದಾಗಿದೆ.

ಅಮೆರಿಕದ ಎಚ್–1ಬಿ ವೀಸಾ ಹೊಂದಿರುವ 10,000 ಜನರಿಗೆ ಕೆನಡಾದಲ್ಲಿ ಮುಕ್ತ ಉದ್ಯೋಗಾವಕಾಶ ನೀಡುವ ಯೋಜನೆಯನ್ನು ಸರ್ಕಾರ ಜುಲೈ 16ರ ಒಳಗೆ ಜಾರಿಗೆ ತರಲಿದೆ ಎಂದು ಅಲ್ಲಿಯ ವಲಸಿಗರು, ನಿರಾಶ್ರಿತರು ಮತ್ತು ಪೌರತ್ವ ಸಚಿವ ಸಿಯಾನ್ ಫ್ರಾಸೆರ್ ಮಂಗಳವಾರ ತಿಳಿಸಿದ್ದಾರೆ.

ಈ ಯೋಜನೆಯಡಿ ಉದ್ಯೋಗ ಪಡೆವ ಉದ್ಯೋಗಿಗಳ ಕುಟುಂಬ ಸದಸ್ಯರಿಗೆ ಕೆನಡಾದಲ್ಲಿ ಶಿಕ್ಷಣ ಪಡೆಯುವ ಅಥವಾ ಉದ್ಯೋಗ ಪಡೆಯುವ ಅವಕಾಶವನ್ನೂ ಈ ಯೋಜನೆಯಲ್ಲಿ ನೀಡಲಾಗಿದೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಈ ಯೋಜನೆ ಅಡಿ ಅರ್ಜಿ ಸಲ್ಲಿಸುವ ಉದ್ಯೋಗಿಗಳಿಗೆ ಕೆನಡಾದಲ್ಲಿ ಮೂರು ವರ್ಷ ಉದ್ಯೋಗ ಮಾಡಲು ಅವಕಾಶ ನೀಡಲಾಗುತ್ತದೆ. ಉದ್ಯೋಗಿಯ ಪತಿ ಅಥವಾ ಪತ್ನಿಯು ಕೆನಡಾದ ತಾತ್ಕಾಲಿಕ ವೀಸಾ ಪಡೆಯಲು ಅರ್ಜಿ ಸಲ್ಲಿಸಬಹುದು.

ಕಳೆದ ವರ್ಷ ನವೆಂಬರ್‌ನಿಂದ ಇಲ್ಲಿಯವರೆಗೆ ಅಮೆರಿಕದಲ್ಲಿ ಸುಮಾರು ಎರಡು ಲಕ್ಷ ಐ.ಟಿ ಉದ್ಯೋಗಿಗಳು ಉದ್ಯೋಗ ಕಳೆದುಕೊಂಡಿದ್ದಾರೆ. ಅವರಲ್ಲಿ ಭಾರತೀಯರು ಶೇ 30ರಿಂದ 40ರಷ್ಟು ಇದ್ದಾರೆ ಎನ್ನಲಾಗಿದೆ. ಕೆನಡಾದ ಈ ಯೋಜನೆಯಿಂದ ಭಾರತೀಯ ಐ.ಟಿ ಉದ್ಯೋಗಿಗಳಿಗೆ ಹೆಚ್ಚಿನ ಅನುಕೂಲ ಆಗುತ್ತದೆ ಎನ್ನಲಾಗಿದೆ.

## ‘ದಂಗೆ: ಮೊದಲೇ ಅರಿತಿದ್ದ ರಷ್ಯಾ ಸೇನಾಧಿಕಾರಿ’

ವಾಷಿಂಗ್ಟನ್: ಸೇನಾ ನಾಯಕತ್ವದ ವಿರುದ್ಧ ದಂಗೆ ಎದ್ದಿದ್ದ ಖಾಸಗಿ ಸೇನಾ ಪಡೆ ‘ವ್ಯಾಗ್ನರ್’ ಗುಂಪಿನ ನಾಯಕ ಯೆವ್ಗೆನಿ ಪ್ರಿಗೋಷಿನ್ ಯೋಜನೆಯು ರಷ್ಯಾ ಸೇನಾಧಿಕಾರಿಗೆ ಮೊದಲೇ ಗೊತ್ತಿತ್ತು ಎಂದು ‘ನ್ಯೂಯಾರ್ಕ್ ಟೈಮ್ಸ್’ ವರದಿ ಮಾಡಿದೆ.

ಉಕ್ರೇನ್‌ನಲ್ಲಿ ಮಿಲಿಟರಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿರುವ ಉಪ ಕಮಾಂಡರ್ ಸೆರ್ಗೆ ಸುರೊವಿಕಿನ್ ಅವರಿಗೆ ‘ವ್ಯಾಗ್ನರ್’ ಗುಂಪಿನ ದಂಗೆ ಯೋಜನೆ ಮೊದಲೇ ತಿಳಿದಿತ್ತು ಎಂದು ಹೇಳಲಾಗಿದೆ. ಗುಪ್ತಚರ ಮಾಹಿತಿ ಆಧರಿಸಿ ಅಮೆರಿಕ ಅಧಿಕಾರಿಗಳು ಮಾತನಾಡಿದ್ದು, ಉಕ್ರೇನ್‌ನಲ್ಲಿ ರಷ್ಯಾ ಸೇನೆಯ ಕಮಾಂಡರ್ ಆಗಿದ್ದ ಸೆರ್ಗೆ ಸುರೊವಿಕಿನ್ ಅವರು ಕಳೆದ ವಾರ ದಂಗೆ ಏಳಲು ಪ್ರಿಗೋಷಿನ್‌ಗೆ ನೆರವಾಗಿದ್ದರೇ ಎಂಬುದನ್ನು ತಿಳಿಯಲು ಪ್ರಯತ್ನಿಸುತ್ತಿರುವುದಾಗಿ ಹೇಳಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

**ಬದುಕುಳಿದವರಿಗಾಗಿ ಮುಂದುವರಿದ ರಕ್ಷಣಾ ಕಾರ್ಯ**

# ರಷ್ಯಾ ಕ್ಷಿಪಣಿ ದಾಳಿ: 3 ಮಕ್ಕಳು ಸೇರಿ 10 ಸಾವು

ಕೀವ್ (ಎಪಿ): ಉಕ್ರೇನ್ ಪೂರ್ವದ ಕ್ರಾಮರಸ್ಕ್ ನಗರದಲ್ಲಿ ಅತ್ಯಂತ ಜನನಿಬಿಡ ಪಿಜ್ಜಾ ರೆಸ್ಟೋರೆಂಟ್ ಮೇಲೆ ರಷ್ಯಾ ಸೇನೆ ನಡೆಸಿರುವ ಕ್ಷಿಪಣಿ ದಾಳಿಯಲ್ಲಿ ಮೂವರು ಮಕ್ಕಳು ಸೇರಿ ಹತ್ತು ಜನರು ಮೃತಪಟ್ಟಿದ್ದಾರೆ.

ಕ್ಷಿಪಣಿ ಅಪ್ಪಳಿಸಿ ಧ್ವಂಸಗೊಂಡಿರುವ ಕಟ್ಟಡಗಳ ಅವಶೇಷಗಳಡಿ ಬದುಕುಳಿದವರ ರಕ್ಷಣಾ ಕಾರ್ಯ ಮುಂದುವರಿದಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ನಗರದ ಮೇಲೆ ಮಂಗಳವಾರ ಸಂಜೆ ನಡೆದಿರುವ ಈ ದಾಳಿಯಲ್ಲಿ 56 ಜನರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಗೃಹ ಸಚಿವಾಲಯ ಹೇಳಿದೆ.

ರಷ್ಯಾ ಸೇನೆ ಎಸ್ -300 ಕ್ಷಿಪಣಿಗಳನ್ನು ದಾಳಿಗೆ ಬಳಸಿಕೊಂಡಿದೆ. 18 ಅಂತಸ್ತುಗಳ ಬಹುಮಹಡಿ ಕಟ್ಟಡಗಳು, 65 ಮನೆಗಳು, ಐದು ಶಾಲೆಗಳು, ಎರಡು ಶಿಶುವಿಹಾರಗಳು, ಒಂದು ಶಾಪಿಂಗ್ ಕೇಂದ್ರ, ಒಂದು ಆಡಳಿತ ಕಚೇರಿ ಕಟ್ಟಡ, ಮನರಂಜನಾ ಕಟ್ಟಡ ಹಾನಿಗೀಡಾಗಿವೆ ಎಂದು ಪ್ರಾದೇಶಿಕ ಗವರ್ನರ್ ಪಾವ್ಲೊ ಕಿರಿಲೆಂಕೊ ಹೇಳಿದ್ದಾರೆ.



ಉಕ್ರೇನ್ ಪೂರ್ವದ ಕ್ರಾಮರಸ್ಕ್ ನಗರದ ಮೇಲೆ ರಷ್ಯಾ ಸೇನೆ ನಡೆಸಿರುವ ಕ್ಷಿಪಣಿ ದಾಳಿಯಲ್ಲಿ ಪಿಜ್ಜಾ ರೆಸ್ಟೋರೆಂಟ್ ಮತ್ತು ಹಲವು ಕಟ್ಟಡಗಳನ್ನು ಧ್ವಂಸಗೊಂಡಿದ್ದು ರಕ್ಷಣಾ ಸಿಬ್ಬಂದಿ ಮತ್ತು ಸ್ವಯಂ ಸೇವಕರು ಅವಶೇಷಗಳಡಿ ಸಿಲುಕಿದವರ ರಕ್ಷಣಾ ಕಾರ್ಯ ನಡೆಸಿದರು — ಎಎಫ್‌ಪಿ ಚಿತ್ರ

## 500 ಮಿಲಿಯನ್ ಡಾಲರ್ ನೆರವು

ವಾಷಿಂಗ್ಟನ್ (ಎಪಿ): ಉಕ್ರೇನ್‌ಗೆ 500 ಮಿಲಿಯನ್ ಡಾಲರ್ (₹4 ಸಾವಿರ ಕೋಟಿ) ಮೊತ್ತದ ಸೇನಾ ನೆರವು ನೀಡುವುದಾಗಿ ಬೈಡನ್ ಆಡಳಿತ ಘೋಷಿಸಿದೆ.

50 ಹೆಚ್ಚು ಶಸ್ತ್ರಾಸ್ತ್ರಗಳನ್ನು ಒಳಗೊಂಡ ವಾಹನಗಳು, ವೈಮಾನಿಕ ರಕ್ಷಣಾ ವ್ಯವಸ್ಥೆಗೆ ಅಗತ್ಯವಾಗಿರುವ ದ್ರಾವಣವನ್ನೂ ಅಮೆರಿಕ ಉಕ್ರೇನ್‌ಗೆ ಕಳುಹಿಸಲಿದೆ. ಉಕ್ರೇನ್ ತನ್ನ ವೈರಿಯನ್ನು ಸಮರ್ಥವಾಗಿ ಹಿಮ್ಮೆಟ್ಟಿಸಬೇಕೆಂಬ ಉದ್ದೇಶ ಈ ನೆರವಿನ ಹಿಂದಿದೆ. ರಷ್ಯಾ ಆಕ್ರಮಣ ಆರಂಭಿಸಿದಾಗಿನಿಂದ ಅಮೆರಿಕ 41ನೇ ಬಾರಿ ಉಕ್ರೇನ್‌ಗೆ ನೆರವು ನೀಡಿದಂತಾಗುತ್ತದೆ.

### ಪರ್ಯಾಯ ಗೊಬ್ಬರಗಳ ಬಳಕೆ ಉತ್ತೇಜನ ಉದ್ದೇಶ: ಸಚಿವ ಮಂಡಾವಿಯಾ

# ‘ಪಿಎಂ–ಪ್ರಣಾಮ್’ಗೆ ಅನುಮೋದನೆ

ಪ್ರಜಾವಾಣಿ ವಾರ್ತೆ/ಪಿಟಿಐ

**ನವದೆಹಲಿ:** ರಾಸಾಯನಿಕ ಗೊಬ್ಬರಗಳ ಉಪಯೋಗ ಕಡಿಮೆ ಮಾಡಿ, ಪರ್ಯಾಯ ರಸಗೊಬ್ಬರಗಳ ಬಳಕೆ ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯಗಳನ್ನು ಉತ್ತೇಜಿಸುವುದಕ್ಕಾಗಿ ‘ಪಿಎಂ–ಪ್ರಣಾಮ್’ ಹಾಗೂ ‘ಯೂರಿಯಾ ಗೋಲ್ಡ್’ ಎಂಬ ಯೋಜನೆಗಳಿಗೆ ಆರ್ಥಿಕ ವ್ಯವಹಾರಗಳ ಕುರಿತ ಸಂಪುಟ ಸಮಿತಿಯು (ಸಿಸಿಇಎ) ಬುಧವಾರ ಒಪ್ಪಿಗೆ ನೀಡಿದೆ.

ಅಲ್ಲದೇ, ಪ್ರತಿ ಕ್ವಿಂಟಲ್ ಕಬ್ಬಿಗೆ ನೀಡುವ ಎಫ್‌ಆರ್‌ಪಿಯನ್ನು ₹10ರಷ್ಟು ಹೆಚ್ಚಿಸುವುದಕ್ಕೂ ಸಮಿತಿಯು ಅನುಮೋದನೆ ನೀಡಿದೆ.

ಕೇಂದ್ರ ರಸಗೊಬ್ಬರ ಸಚಿವ ಮನ್ಸುಖ್ ಮಂಡಾವಿಯಾ, ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಸಭೆ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ಭೂಮಿಯಲ್ಲಿನ ಪೋಷಕಾಂಶಗಳ ಪ್ರಮಾಣ ಹೆಚ್ಚಿಸುವುದು ಹಾಗೂ ಈ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಸಂಕ್ಷಿಪ್ತವಾಗಿ ‘ಪಿಎಂ–ಪ್ರಣಾಮ್’ (ಪಿಎಂ ಪ್ರೊಗ್ರಾಂ ಫಾರ್ ರಿಸ್ಟೋರೇಷನ್, ಅವೇರ್‌ನೆಸ್, ಜನರೇಷನ್, ನೌರಿಷ್‌ಮೆಂಟ್ ಅಂಡ್ ಅಮಿಲಿಯೋರೇಷನ್ ಆಫ್ ಮದರ್ ಅರ್ಥ್) ಎಂದು ಕರೆಯಲಾಗುತ್ತದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಬಜೆಟ್ ಮಂಡನೆ ವೇಳೆ ಈ ಯೋಜನೆಯನ್ನು ಘೋಷಿಸಿದ್ದರು.



ಮನ್ಸುಖ್ ಮಂಡಾವಿಯಾ

‘ಪರ್ಯಾಯ ಗೊಬ್ಬರಗಳನ್ನು ಬಳಕೆಯನ್ನು ಉತ್ತೇಜಿಸುವ ಹಾಗೂ ರಾಸಾಯನಿಕ ಗೊಬ್ಬರದ ಬಳಕೆಯನ್ನು ಕಡಿಮೆ ಮಾಡುವ ರಾಜ್ಯಗಳಿಗೆ ಕೇಂದ್ರ ಸರ್ಕಾರ ಪ್ರೋತ್ಸಾಹ ನೀಡುವುದು ’ ಎಂದು ಸಚಿವ ಮಂಡಾವಿಯಾ ಹೇಳಿದರು.

‘ರೈತರಿಗೆ ಯಾವಾಗಲೂ ಯೂರಿಯಾ ಸಿಗುವುದನ್ನು ಖಾತ್ರಿಪಡಿಸುವ ಸಲುವಾಗಿ ಯೂರಿಯಾ ಸಬ್ಸಿಡಿಯನ್ನು ಮುಂದುವರಿಸಲು ಸಿಸಿಇಎ ಅನುಮೋದನೆ ನೀಡಿದೆ. ಹೀಗಾಗಿ 45 ಕೆ.ಜಿ ಯೂರಿಯಾ ಚೀಲ ₹ 242ಕ್ಕೆ ಸಿಗಲಿದೆ. ಇದರಲ್ಲಿ ತೆರಿಗೆಗಳು ಹಾಗೂ ಬೇವಿನ ರಸ ಲೇಪನಕ್ಕೆ ತಗಲುವ ವೆಚ್ಚ ಸೇರಿರುವುದಿಲ್ಲ’ ಎಂದರು.

ಯೂರಿಯಾ ಸಬ್ಸಿಡಿ ಯೋಜನೆಗೆ ಮೂವರು ವರ್ಷಗಳಿಗಾಗಿ ₹ 3,68,676 ಕೋಟಿ ತೆಗೆದಿರಿಸಲಾಗಿದೆ. 2023–24ನೇ ಸಾಲಿನ ಮುಂಗಾರು ಹಂಗಾಮಿಗೆ ಫಾಸ್ಫೇಟ್ ಮತ್ತು ಪೊಟ್ಯಾಶ್‌ನ ಗೊಬ್ಬರಗಳಿಗೆ ಸಂಬಂಧಿಸಿ ಪೋಷಕಾಂಶ ಆಧಾರಿತ ಸಬ್ಸಿಡಿ ಯೋಜನೆಗೆ ₹ 38 ಸಾವಿರ ಕೋಟಿ ಒದಗಿಸಲು ಕೂಡ ಸಮಿತಿ ಅನುಮೋದನೆ ನೀಡಿದೆ.

‘ಸಾವಯವ ಗೊಬ್ಬರ ಬಳಕೆಯನ್ನು ಉತ್ತೇಜಿಸುವುದಕ್ಕಾಗಿ ‘ಮಾರುಕಟ್ಟೆ ಅಭಿವೃದ್ಧಿಗೆ ನೆರವು’ (ಎಂಡಿಎ) ಯೋಜನೆಯಡಿ ₹ 1,451 ಕೋಟಿ ನೀಡಲು ಒಪ್ಪಿಗೆ ನೀಡಲಾಗಿದೆ. ಮಣ್ಣಿನಲ್ಲಿನ ಗಂಧಕದ ಕೊರತೆಯನ್ನು ನೀಗಿಸಲು ಗಂಧಕ ಲೇಪಿತ ಯೂರಿಯಾ (ಯೂರಿಯಾ ಗೋಲ್ಡ್)ವನ್ನು ಪರಿಚಯಿಸುವ ಯೋಜನೆಗೂ ಅನುಮೋದನೆ ನೀಡಲಾಗಿದೆ’ ಎಂದು ತಿಳಿಸಿದ್ದಾರೆ.

**ಹೆಚ್ಚಳ:** ಬರುವ ಅಕ್ಟೋಬರ್‌ನಿಂದ ಆರಂಭವಾಗುವ ಹಂಗಾಮಿಗೆ ಅನ್ವಯಿಸುವಂತೆ, ಕಬ್ಬಿಗೆ ನೀಡುವ ಎಫ್‌ಆರ್‌ಪಿಯಲ್ಲಿ ₹ 10 ಹೆಚ್ಚಳಕ್ಕೆ ಅನುಮೋದನೆ ನೀಡಲಾಗಿದೆ. ಇದರಿಂದಾಗಿ ಪ್ರತಿ ಕ್ವಿಂಟಲ್‌ಗೆ ನೀಡುವ ಎಫ್‌ಆರ್‌ಪಿ ₹ 315 ಆಗಲಿದೆ ಎಂದು ಸಚಿವ ಅನುರಾಗ್ ಠಾಕೂರ್ ವಿವರಿಸಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆರ್ಥಿಕ ವ್ಯವಹಾರಗಳ ಕುರಿತ ಸಂಪುಟ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಠಾಕೂರ್ ಹೇಳಿದರು.

‘ಕಳೆದ ವರ್ಷ ಪ್ರತಿ ಕ್ವಿಂಟಲ್ ಕಬ್ಬಿಗೆ ₹ 305 ಎಫ್‌ಆರ್‌ಪಿ ನಿಗದಿ ಮಾಡಲಾಗಿತ್ತು. ಈಗ, ₹ 315ಕ್ಕೆ ಹೆಚ್ಚಿಸಲಾಗಿದೆ. ಕಳೆದ ಸಾಲಿಗೆ ಹೋಲಿಸಿದಲ್ಲಿ ಶೇ 3.28ರಷ್ಟು ಹೆಚ್ಚಳ ಮಾಡಿದಂತಾಗಿದೆ’ ಎಂದು ಹೇಳಿದರು.

## ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ ಮಸೂದೆಗೆ ಅಸ್ತು

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಶೋಧನೆಗೆ ಪ್ರೋತ್ಸಾಹ ನೀಡುವ ಉದ್ದೇಶದ ‘ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ ಮಸೂದೆ–2023’ಕ್ಕೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಸಂಪುಟ ಸಭೆ ಬಳಿಕ ಈ ಕುರಿತು ಮಾಹಿತಿ ನೀಡಿದ ಸಚಿವ ಅನುರಾಗ್ ಠಾಕೂರ್, ‘ಬರುವ ಸಂಸತ್ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಲಾಗುವುದು. ಮಸೂದೆ ಅಂಗೀಕಾರ ದೊರೆತ ನಂತರ, ವಿಜ್ಞಾನ ಮತ್ತು ಎಂಜಿನಿಯರಿಂಗ್ ಸಂಶೋಧನಾ ಮಂಡಳಿ ಕಾಯ್ದೆ,2008 ರದ್ದಾಗುವುದು’ ಎಂದು ಹೇಳಿದರು.

‘2027–28ರವರೆಗೆ ಸಂಶೋಧನೆಗಾಗಿ ಕೇಂದ್ರ ಸರ್ಕಾರ ₹ 50 ಸಾವಿರ ಕೋಟಿ ತೆಗೆದಿರಿಸಿದೆ. ಈ ಪೈಕಿ, ಮುಂದಿನ ಐದು ವರ್ಷಗಳ ವರೆಗೆ ₹ 14 ಸಾವಿರ ಕೋಟಿಯನ್ನು ಸರ್ಕಾರವೇ ಒದಗಿಸುವುದು. ಉಳಿದ ಮೊತ್ತವನ್ನು ಸಾರ್ವಜನಿಕ ಉದ್ದಿಮೆಗಳು, ಕೈಗಾರಿಕೆಗಳು, ಪ್ರತಿಷ್ಠಾನಗಳು, ಅಂತರರಾಷ್ಟ್ರೀಯ ಸಂಶೋಧನಾ ಸಂಘಟನೆಗಳಿಂದ ಸಂಗ್ರಹಿಸಲಾಗುವುದು’ ಎಂದರು.

‘ಪ್ರಧಾನಿ ಅಧ್ಯಕ್ಷರಾಗಿರುವ ಈ ಪ್ರತಿಷ್ಠಾನದಲ್ಲಿ 15–20 ಮಂದಿ ಸಂಶೋಧಕರು, ವೃತ್ತಿಪರರು ಇರುವರು. ಅವಶ್ಯಕರೆ ಆಧಾರಿತ ಸಂಶೋಧನೆ ಕೇಂದ್ರೀಕರಿಸಿ ಈ ಪ್ರತಿಷ್ಠಾನ ಕಾರ್ಯ ನಿರ್ವಹಿಸುವುದು’ ಎಂದು ಹೇಳಿದರು.

### ‘ಸುಪ್ರೀಂ’: ವಿಚಾರಣೆಗಾಗಿ ಪ್ರಕರಣಗಳ ಹಂಚಿಕೆ

# 3ರಿಂದ ನೂತನ ರೋಸ್ಟರ್ ಜಾರಿ

**ನವದೆಹಲಿ (ಪಿಟಿಐ):** ಹೊಸ ಪ್ರಕರಣಗಳನ್ನು ವಿಚಾರಣೆಗಾಗಿ 15 ನ್ಯಾಯಪೀಠಗಳಿಗೆ ಹಂಚಿಕೆ ಮಾಡುವ ಸಂಬಂಧ ಸುಪ್ರೀಂಕೋರ್ಟ್ ನೂತನ ರೋಸ್ಟರ್ ರೂಪಿಸಿದೆ.

ಜುಲೈ 3ರಿಂದ ಈ ನೂತನ ವ್ಯವಸ್ಥೆಯು ಜಾರಿಗೆ ಬರಲಿದೆ. ಈ ಕುರಿತು ಸುಪ್ರೀಂಕೋರ್ಟ್‌ನ ರಜಿಸ್ಟ್ರಿಯು ಅಧಿಸೂಚನೆ ಪ್ರಕಟಿಸಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಹಾಗೂ ಸಂಜೀವ್ ಖನ್ನಾ ನೇತೃತ್ವದ ಮೊದಲ ಮೂರು ಕೋರ್ಟ್‌ಗಳು ಸಾರ್ವಜನಿಕ ಹಿತಾಸಕ್ತಿ



ಅರ್ಜಿಗಳ (ಪಿಐಎಲ್) ವಿಚಾರಣೆ ನಡೆಸಲಿವೆ.

ಈ ಮೊದಲು ಸಿಜೆಐ ಆಗಿದ್ದ ಯು.ಯು.ಲಲಿತ್ ಅವರು ಎಲ್ಲ ನ್ಯಾಯಪೀಠಗಳಿಗೂ ಪಿಐಎಲ್‌ಗಳನ್ನು ಹಂಚಿಕೆ ಮಾಡುತ್ತಿದ್ದುದು ಗಮನಾರ್ಹ.

ನೂತನ ವ್ಯವಸ್ಥೆಯಂತೆ, ಸಿಜೆಐ ನೇತೃತ್ವದ ನ್ಯಾಯಪೀಠವು ತೆರಿಗೆಗಳು, ಸೇವೆಗೆ ಸಂಬಂಧಿಸಿದ ವ್ಯಾಜ್ಯಗಳು, ಕ್ರಿಮಿನಲ್ ಮೇಲ್ಮನವಿಗಳು, ಚುನಾವಣಾ ತಕರಾರು ಅರ್ಜಿಗಳು, ಕಂಪನಿ ಕಾನೂನು, ಹೇಬಿಯಸ್ ಕಾರ್ಪಸ್ ಹಾಗೂ ರಾಜಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸಲಿದೆ.

ಸಾಂವಿಧಾನಿಕ ಪ್ರಾಧಿಕಾರಗಳು, ನ್ಯಾಯಿಕ ಅಧಿಕಾರಿಗಳು, ಸಶಸ್ತ್ರ ಪಡೆಗಳು, ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಕೂಡ ಸಿಜೆಐ ನೇತೃತ್ವದ ಪೀಠವೇ ನಡೆಸಲಿದೆ.

## ಗವಾಯಿ, ಸೂರ್ಯಕಾಂತ್ ಕೊಲಿಜಿಯಂ ಸೇರ್ಪಡೆ

**ನವದೆಹಲಿ (ಪಿಟಿಐ):** ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಸುಪ್ರೀಂಕೋರ್ಟ್ ಕೊಲಿಜಿಯಂನಲ್ಲಿ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಸೂರ್ಯಕಾಂತ್ ಅವರು ಸ್ಥಾನ ಪಡೆದಿದ್ದಾರೆ.

ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಹಾಗೂ ಅಜಯ್ ರಸ್ತೋಗಿ ಅವರು ಕ್ರಮವಾಗಿ ಜೂನ್ 16 ಮತ್ತು 17ರಂದು ನಿವೃತ್ತಿ ಹೊಂದಿದ್ದಾರೆ. ಹೀಗಾಗಿ ಇಬ್ಬರು ನ್ಯಾಯಮೂರ್ತಿಗಳನ್ನು ಕೊಲಿಜಿಯಂ ಗೆ ಸೇರ್ಪಡೆ ಮಾಡಲಾಗಿದೆ.

ನ್ಯಾಯಮೂರ್ತಿಗಳಾದ ಸಂಜಯಕಿಶನ್ ಕೌಲ್, ಸಂಜೀವ್ ಖನ್ನಾ ಅವರೂ ಕೊಲಿಜಿಯಂ ಸದಸ್ಯರಾಗಿದ್ದಾರೆ. ಸದಸ್ಯರ ಪೈಕಿ ನ್ಯಾಯಮೂರ್ತಿಗಳಾದ ಖನ್ನಾ, ಗವಾಯಿ ಹಾಗೂ ಸೂರ್ಯಕಾಂತ್ ಅವರು ಮುಂದಿನ ದಿನಗಳಲ್ಲಿ ಸಿಜೆಐ ಹುದ್ದೆಗೇರಲಿರುವುದು ಗಮನಾರ್ಹ.

ನ್ಯಾಯಮೂರ್ತಿ ವಿ.ರಾಮಸುಬ್ರಮಣಿಯನ್ ಗುರುವಾರ ನಿವೃತ್ತರಾಗಲಿದ್ದರೆ, ನ್ಯಾಯಮೂರ್ತಿ ಕೃಷ್ಣಮುರಾರಿ ಅವರು ಜುಲೈ 8ರಂದು ನಿವೃತ್ತರಾಗುವರು. ಹೀಗಾಗಿ, ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳ ಸಂಖ್ಯೆ 30ಕ್ಕೆ ಇಳಿಕೆಯಾಗಲಿದೆ. ಮಂಜೂರಾದ ಹುದ್ದೆಗಳ ಹುದ್ದೆ ಸಂಖ್ಯೆ 34.



# ರಸ್ತೆ ಜಲಾವೃತ

ಮುಂಬೈನಲ್ಲಿ ಬುಧವಾರ ಸುರಿದ ಧಾರಾಕಾರ ಮಳೆಯಿಂದ ಜಲಾವೃತಗೊಂಡ ರಸ್ತೆಯಲ್ಲೇ ಪಾದಚಾರಿಗಳು ಸಾಗಿದರು –ಪಿಟಿಐ ಚಿತ್ರ

# ಪ್ರಜಾಪ್ರಭುತ್ವ ರಕ್ಷಣೆಯೂ ಮುಖ್ಯ: ಎರಿಕ್ ಗಾರ್ಸೆಟ್ಟಿ

**ನವದೆಹಲಿ:** ‘ನಾವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವುದು ಮಾತ್ರವಲ್ಲ, ಅದರ ರಕ್ಷಣೆಯನ್ನೂ ಮಾಡಬೇಕು’ ಎಂದು ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ ಬುಧವಾರ ಹೇಳಿದ್ದಾರೆ.

‘ವಿಶ್ವದ ಇತರ ರಾಷ್ಟ್ರಗಳಲ್ಲಿರುವಂತೆ, ಮಾನವ ಹಕ್ಕುಗಳ ವಿಚಾರವಾಗಿ ಭಾರತದೊಂದಿಗೆ ಅಮೆರಿಕ ತನ್ನ ಕೆಲಸವನ್ನು ಮುಂದುವರಿಸಲಿದೆ’ ಎಂದೂ ಅವರು ಹೇಳಿದ್ದಾರೆ.

ಐಐಟಿ–ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಅಲ್ಪಸಂಖ್ಯಾತ ಮುಸ್ಲಿಮರ ಹಕ್ಕುಗಳನ್ನು ರಕ್ಷಿಸದಿದ್ದಲ್ಲಿ ಭಾರತವು ಪ್ರತ್ಯೇಕವಾಗಿ ಉಳಿಯುವ ಅಪಾಯ ಇದೆ’ ಎಂದು ಇತ್ತೀಚೆಗೆ ಅಮೆರಿಕ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಹೇಳಿದ್ದರು. ಬಿಜೆಪಿ ನಾಯಕರು ಈ ವಿಚಾರವಾಗಿ ಒಬಾಮ ಅವರನ್ನು ಗುರಿಯಾಗಿಸಿ ತಿರುಗೇಟು ನೀಡಿದ್ದರು.

‘ವಾಲ್ ಸ್ಟ್ರೀಟ್ ಜರ್ನಲ್’ ಪತ್ರಕರ್ತೆಯೊಬ್ಬರು ಭಾರತದಲ್ಲಿ ಪ್ರಜಾತಂತ್ರದ ಸ್ಥಿತಿ ಕುರಿತು ಅಮೆರಿಕಕ್ಕೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರಶ್ನಿಸಿದ್ದರು. ಈ ಪತ್ರಕರ್ತೆಯನ್ನು ಗುರಿಯಾಗಿಸಿ ಆನ್‌ಲೈನ್ ವೇದಿಕೆಗಳಲ್ಲಿ ಟೀಕೆಗಳು ವ್ಯಕ್ತವಾಗಿದ್ದವು. ಈ ಎಲ್ಲ ಕಾರಣಗಳಿಂದಾಗಿ ಗಾರ್ಸೆಟ್ಟಿ ಅವರ ಹೇಳಿಕೆಗೆ ಮಹತ್ವ ಬಂದಿದೆ.

‘ವಿವಿಧತೆಯಲ್ಲಿ ಏಕತೆಯನ್ನು ಸಾಧಿಸುವಲ್ಲಿನ ಸಾಮರ್ಥ್ಯವೇ ನಮ್ಮ ನಾಗರಿಕತೆಯ ಹೆಗ್ಗಳಿಕೆ ಮತ್ತು ಪರೀಕ್ಷೆ ಎನಿಸಲಿದೆ ಎಂಬ ಮಹಾತ್ಮ ಗಾಂಧಿ ಅವರ ಹೇಳಿಕೆ ಅರ್ಥಗರ್ಭಿತ’ ಎಂದೂ ಗಾರ್ಸೆಟ್ಟಿ ಹೇಳಿದ್ದಾರೆ.

ಇದೇ ವೇಳೆ, ಅವರು ಅಮೆರಿಕದ ಪ್ರಜಾಪ್ರಭುತ್ವ ವ್ಯವಸ್ಥೆಯ ದೌರ್ಬಲ್ಯದ ಬಗ್ಗೆಯೂ ಮಾತನಾಡಿದ್ದಾರೆ. ‘ಪ್ರಜಾತಂತ್ರದ ಮೌಲ್ಯಗಳ ವಿಷಯದಲ್ಲಿ ಅಮೆರಿಕ ಇನ್ನೂ ಪರಿಪೂರ್ಣತೆ ಸಾಧಿಸಿಲ್ಲ. ನಮ್ಮ ಕನಸುಗಳನ್ನು ಸಾಕಾರಗೊಳಿಸುವ ಪ್ರಯತ್ನಗಳ ಜೊತೆಗೆ ನಮ್ಮ ಪ್ರಯೋಗವೂ ಮುಂದುವರಿದಿದೆ’ ಎಂದಿದ್ದಾರೆ.

**ಕಳವಳ** :ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ತನ್ನ ಮಿಲಿಟರಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಚೀನಾದ ಪ್ರಯತ್ನಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ಗಾರ್ಸೆಟ್ಟಿ, ‘ಭಾರತ ಮತ್ತು ಅಮೆರಿಕ ಜಂಟಿಯಾಗಿ ಯುದ್ಧನೌಕೆಗಳು ಹಾಗೂ ಯುದ್ಧವಿಮಾನಗಳನ್ನು ನಿಯೋಜಿಸಬೇಕು. ಆ ಮೂಲಕ, ಸಾಗರ ಮತ್ತು ವಾಯುಪ್ರದೇಶಗಳಲ್ಲಿ ಮುಕ್ತ ಸಂಚಾರವನ್ನು ಖಾತ್ರಿಪಡಿಸಬೇಕು’ ಎಂದು ಪಿಟಿಐ ವರದಿ ಮಾಡಿದೆ.

# ಭೀಮ್ ಆರ್ಮಿ ಮುಖ್ಯಸ್ಥನ ಮೇಲೆ ಗುಂಡಿನ ದಾಳಿ

**ಸಹಾರನ್‌ಪುರ (ಉತ್ತರ ಪ್ರದೇಶ):** ಭೀಮ್ ಆರ್ಮಿ ಮುಖ್ಯಸ್ಥ ಚಂದ್ರಶೇಖರ್ ಆಜಾದ್ ಅವರ ಮೇಲೆ ಅಪರಿಚಿತ ದುಷ್ಕರ್ಮಿಗಳು ಬುಧವಾರ ದೇವ್‌ಬಂದ್‌ನಲ್ಲಿ ಗುಂಡಿನ ದಾಳಿ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡು ಆಜಾದ್ ಹೊಟ್ಟೆಯನ್ನು ತಾಗಿದ್ದು, ಚಿಕಿತ್ಸೆಗಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಸ್ಥಿತಿ ಸದ್ಯಕ್ಕೆ ಸ್ಥಿರವಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಬೆಂಬಲಿಗರೊಬ್ಬರ ಮನೆಯಲ್ಲಿ ‘ತೆರಹವಿ’ ಆಚರಣೆಯಲ್ಲಿ ಪಾಲ್ಗೊಂಡು ಅಲ್ಲಿಂದ ಎಸ್‌ಯುವಿ ವಾಹನದಲ್ಲಿ ತೆರಳುತ್ತಿದ್ದಾಗ ಅವರ ಮೇಲೆ ಕಾರಿನ ಮೇಲೆ ಗುಂಡಿನ ದಾಳಿನಡೆಸಲಾಗಿದೆ.



ಚಂದ್ರಶೇಖರ್ ಆಜಾದ್

ಪೊಲೀಸರ ಪ್ರಕಾರ, ದಾಳಿ ಕೋರರು ಬಳಸಿದ ವಾಹನವು ಹರಿಯಾಣದ ನೋಂದಣಿ ಸಂಖ್ಯೆಯನ್ನು ಹೊಂದಿತ್ತು.

‘ದಾಳಿ ನಡೆಸಿದ ಬಳಿಕ ದುಷ್ಕರ್ಮಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ. ತನಿಖೆ ಪ್ರಗತಿಯಲ್ಲಿದೆ’ ಎಂದಿದ್ದಾರೆ.

**ದಾಳಿಗೆ ಖಂಡನೆ:** ಘಟನೆಯ ಕುರಿತು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಸಮಾಜವಾದಿ ಪಕ್ಷವು, ಬಿಜೆಪಿ ಆಡಳಿತದಲ್ಲಿನ ಕಾನೂನು ಸುವ್ಯವಸ್ಥೆಯನ್ನು ಪ್ರಶ್ನೆ ಮಾಡಿದೆ.

ಅಧಿಕಾರದ ಬಲದಿಂದ ರಕ್ಷಿಸಲ್ಪಟ್ಟಿರುವ ಅಪರಾಧಿಗಳು, ದೇವ್‌ಬಂದ್‌ನಲ್ಲಿ ಆಜಾದ್ ಮೇಲೆ ನಡೆಸಿರುವ ಹಲ್ಲೆಯು ಖಂಡನೀಯ. ಇದು ಹೇಡಿತನದ ಕೃತ್ಯವಾಗಿದೆ. ಬಿಜೆಪಿ ಆಡಳಿತದಲ್ಲಿ ಜನಪ್ರತಿನಿಧಿಗಳೇ ಸುರಕ್ಷಿತವಾಗಿರದಿದ್ದರೆ ಇನ್ನು ಸಾರ್ವಜನಿಕರ ಗತಿಯೇನು ಎಂದು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಟ್ವೀಟ್ ಮಾಡಿದ್ದಾರೆ.

# ಅಧಿಕ ಬೆಲೆಗೆ ಖರೀದಿ: ಕಾಂಗ್ರೆಸ್ ಆರೋಪ

**ನವದೆಹಲಿ (ಪಿಟಿಐ):** ಅಮೆರಿಕ ಉತ್ಪಾದಿಸುವ 31 ‘ಎಂಕ್ಯೂ–9ಬಿ ಪ್ರಿಡೇಟರ್ ಯುಎವಿ’ ಡ್ರೋನ್‌ಗಳನ್ನು ಅಧಿಕ ಬೆಲೆಗೆ ಖರೀದಿ ಮಾಡಲಾಗುತ್ತಿದೆ ಕಾಂಗ್ರೆಸ್ ಬುಧವಾರ ಆರೋಪಿಸಿದೆ.

‘ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಡ್ರೋನ್‌ಗಳನ್ನು ಖರೀದಿಸುವ ಸಂಬಂಧ ಅಮೆರಿಕದೊಂದಿಗೆ ಭಾರತ ಮಾಡಿಕೊಂಡಿರುವ ಒಪ್ಪಂದವು ಸಂಪೂರ್ಣ ಪಾರದರ್ಶಕವಾಗಿರಬೇಕು’ ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ವಕ್ತಾರ ಪವನ್ ಖೇರಾ, ‘ರಾಷ್ಟ್ರದ ಭದ್ರತೆ ಮುಖ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಪ್ರಿಡೇಟರ್ ಡ್ರೋನ್‌ಗಳ ಖರೀದಿಯು ಹಲವು ಸಂಶಯಗಳಿಗೆ ಎಡೆ ಮಾಡಿಕೊಡುತ್ತಿದೆ’ ಎಂದರು.

‘ಪ್ರಧಾನಿ ಮೋದಿ ನೇತೃತ್ವದ ಸರ್ಕಾರವು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅಪಾಯ ತಂದೊಡ್ಡುವ ಕೆಲಸ ಮಾಡುತ್ತದೆ. ರಫೇಲ್ ಯುದ್ಧವಿಮಾನ ಖರೀದಿ ವೇಳೆಯೂ ಇದು ಗೊತ್ತಾಗಿದೆ. ಈ ಯುದ್ಧವಿಮಾನಗಳ ತಂತ್ರಜ್ಞಾನವನ್ನು ಎಚ್‌ಎಎಲ್‌ಗೆ ವರ್ಗಾಯಿಸುವುದನ್ನು ಹೇಗೆ ನಿರಾಕರಿಸಲಾಯಿತು ಎಂಬುದನ್ನು ನಾವು ನೋಡಿದ್ದೇವೆ’ ಎಂದರು.

‘ರಕ್ಷಣಾ ಖರೀದಿ ಸಮಿತಿಯ ಆಕ್ಷೇಪಗಳನ್ನು ನಿರ್ಲಕ್ಷಿಸಿದ ಸರ್ಕಾರ ರಕ್ಷಣಾ ವ್ಯವಸ್ಥೆಯ ಖರೀದಿಗೆ ಸಂಬಂಧಿಸಿ ಏಕಪಕ್ಷೀಯವಾಗಿ ತೀರ್ಮಾನಗಳನ್ನು ತೆಗೆದುಕೊಂಡಿದ್ದನ್ನೂ ನಾವು ನೋಡಿದ್ದೇವೆ. ರಫೇಲ್ ಖರೀದಿಯ ಕುರಿತು ಫ್ರಾನ್ಸ್‌ನಲ್ಲಿ ಇನ್ನೂ ತನಿಖೆ ನಡೆಯುತ್ತಿದೆ’ ಎಂದು ಖೇರಾ ಟೀಕಿಸಿದರು.

### ಸಂಕ್ಷಿಪ್ತ ಸುದ್ದಿ

## ರೈಲ್ವೆ: 2.74 ಲಕ್ಷ ಹುದ್ದೆ ಖಾಲಿ

**ನವದೆಹಲಿ (ಪಿಟಿಐ):** ‘ರೈಲ್ವೆ ಇಲಾಖೆಯಲ್ಲಿ 2,74,580 ಹುದ್ದೆಗಳು ಖಾಲಿಯಿದ್ದು, ಅವುಗಳಲ್ಲಿ ಸುರಕ್ಷತಾ ವಿಭಾಗಕ್ಕೆ ಸಂಬಂಧಿಸಿದಂತೆ 1,77,924 ಉದ್ಯೋಗಗಳು ಖಾಲಿ ಇವೆ’ ಎಂದು ಆರ್‌ಟಿಐ ಅರ್ಜಿಯೊಂದಕ್ಕೆ ನೀಡಿದ ಪ್ರತ್ಯುತ್ತರದಲ್ಲಿ ರೈಲ್ವೆ ಸಚಿವಾಲಯ ತಿಳಿಸಿದೆ.

ಮಧ್ಯಪ್ರದೇಶ ಮೂಲದ ಆರ್‌ಟಿಐ ಕಾರ್ಯಕರ್ತ ಚಂದ್ರ ಶೇಖರ್ ಗೌರ್ ಅವರು ಸಲ್ಲಿಸಿದ್ದ ಅರ್ಜಿಗೆ ರೈಲ್ವೆ ಸಚಿವಾಲಯ ಈ ಪ್ರತ್ಯುತ್ತರ ನೀಡಿದೆ.

## ‘ಆದಿಪುರುಷ್’ ವಿರುದ್ಧ ‘ಸುಪ್ರೀಂ’ಗೆ ಮೊರೆ

**ನವದೆಹಲಿ:** ಹಿಂದೂ ಸಮುದಾಯದವರ ಭಾವನೆಗಳಿಗೆ ಧಕ್ಕೆ ತಂದ ಆರೋಪದಲ್ಲಿ ‘ಆದಿಪುರುಷ್’ ಸಿನಿಮಾಕ್ಕೆ ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿಯು (ಸಿಬಿಎಫ್‌ಸಿ) ನೀಡಿರುವ ಪ್ರಮಾಣಪತ್ರವನ್ನು ರದ್ದುಪಡಿಸಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ) ಸಲ್ಲಿಸಲಾಗಿದೆ.

ವಕೀಲರಾದ ಮಮತಾ ರಾಣಿ ಎಂಬುವರು ಪಿಐಎಲ್ ಸಲ್ಲಿಸಿದ್ದು, ಸಿನಿಮಾದಲ್ಲಿ ‘ವಾಲ್ಮೀಕಿ ರಾಮಾಯಣ’ದ ಮೂಲರಚನೆಯನ್ನೇ ಬದಲಾಯಿಸಲಾಗಿದೆ ಎಂದಿದ್ದಾರೆ.

## ತ್ರಿಪುರಾ: ರಥಕ್ಕೆ ವಿದ್ಯುತ್ ತಂತಿ ತಗುಲಿ 7 ಸಾವು

**ಅಗರ್ತಲಾ (ತ್ರಿಪುರಾ)(ಪಿಟಿಐ):** ಉನಕೋಟಿ ಜಿಲ್ಲೆಯಲ್ಲಿ ಬುಧವಾರ ಜಗನ್ನಾಥ ದೇವರ ರಥ ಎಳೆಯುವಾಗ ಹೈಟೆನ್ಶನ್ ವಿದ್ಯುತ್ ತಂತಿ ತಗುಲಿದ್ದರಿಂದ, ತೇರಿಗೆ ಬೆಂಕಿ ಹೊತ್ತಿಕೊಂಡು ಏಳು ಜನರು ಸ್ಥಳದಲ್ಲೇ ಮೃತಪಟ್ಟಿದ್ದು, 16 ಜನರು ಗಾಯಗೊಂಡಿದ್ದಾರೆ.

ಕುಮಾರಘಾಟ್ ಪ್ರದೇಶದಲ್ಲಿ ಸಂಜೆ 4.30ರ ವೇಳೆಗೆ ರಥವನ್ನು ದೇವಸ್ಥಾನಕ್ಕೆ ಮರಳಿ ಎಳೆದು ತರುವ (ಉಲ್ಟಾ ರಥ ಯಾತ್ರೆ) ಸಂದರ್ಭದಲ್ಲಿ ಈ ಅವಘಡ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಕಬ್ಬಿಣದಿಂದ ಮಾಡಿದ ರಥವನ್ನು ಸಾವಿರಾರು ಭಕ್ತರು ಎಳೆಯುವಾಗ 133 ಕೆ.ವಿ ಸಾಮರ್ಥ್ಯದ ವಿದ್ಯುತ್ ತಂತಿ ತಗುಲಿದೆ. ಸ್ಥಳದಲ್ಲೇ ಏಳು ಜನರು ಮೃತಪಟ್ಟಿದ್ದಾರೆ. ಗಾಯಗೊಂಡಿರುವ 16 ಜನರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ‘ಸೀ ಲಿಂಕ್’ಗೆ ಸಾವರ್ಕರ್ ಹೆಸರು

**ಮುಂಬೈ (ಪಿಟಿಐ):** ‘ವರ್ಸೋವಾ–ಬಾಂದ್ರಾ ಸೀ ಲಿಂಕ್’ಗೆ ವಿ.ಡಿ. ಸಾವರ್ಕರ್ ಹಾಗೂ ಮುಂಬೈ ಟ್ರಾನ್ಸ್ ಹಾರ್ಬರ್ ಲಿಂಕ್‌ಗೆ (ಎಂಟಿಎಚ್‌ಎಲ್) ಅಟಲ್ ಬಿಹಾರಿ ವಾಜಪೇಯಿ ಅವರ ಹೆಸರಿಡಲು ಮಹಾರಾಷ್ಟ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ.

### ಮುಸ್ಲಿಂ ಕಾನೂನು ಮಂಡಳಿಯ ತುರ್ತುಸಭೆ: 100 ಪುಟ ಅಭಿಪ್ರಾಯ ಮಂಡನೆಗೆ ನಿರ್ಧಾರ

# ಯುಸಿಸಿ: ಶೀಘ್ರ ಕಾನೂನು ಆಯೋಗದ ಮೊರೆ

ಪ್ರಜಾವಾಣಿ ವಾರ್ತೆ

**ಲಖನೌ:** ದೇಶದಾದ್ಯಂತ ಏಕರೂಪ ನಾಗರಿಕ ಸಂಹಿತೆಯ(ಯುಸಿಸಿ) ಜಾರಿಗೆ ಒಲವು ತೋರಿರುವ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯು ಮಂಗಳವಾರ ಹೊರಬಿದ್ದ ಬೆನ್ನಲ್ಲೇ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು (ಎಐಎಂಪಿಎಲ್‌ಬಿ) ತಡರಾತ್ರಿ ತುರ್ತುಸಭೆ ನಡೆಸಿ ಈ ಕುರಿತು ಚರ್ಚಿಸಿತು.

ಮಂಡಳಿಯ ಅಧ್ಯಕ್ಷ ಮೌಲಾನ ಸೈಫುಲ್ಲಾ ರೆಹಮಾನಿ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ವರ್ಚುವಲ್ ಸಭೆಯಲ್ಲಿ ಪಾಲ್ಗೊಂಡಿದ್ದ ಸದಸ್ಯರು ಯುಸಿಸಿ ಜಾರಿಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಬಳಿಕ ಈ ಬಗ್ಗೆ ಶೀಘ್ರವೇ ಕಾನೂನು ಆಯೋಗಕ್ಕೆ ಮನವಿ ಸಲ್ಲಿಸಲು ನಿರ್ಧರಿಸಿದರು.

‘ನಾಗರಿಕ ಸಂಹಿತೆಯು ಸಾಂವಿಧಾನಿಕ ಆಶಯಕ್ಕೆ ವಿರುದ್ಧವಾದುದು. ಮುಂಬರುವ ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ ಸೇರಿದಂತೆ ಹಲವು ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರಧಾನಿ ಅವರು ಈ ವಿಷಯ ಪ್ರಸ್ತಾಪಿಸಿದ್ದಾರೆ’ ಎಂದು ಅಧ್ಯಕ್ಷ ಸೈಫುಲ್ಲಾ ರೆಹಮಾನಿ ಅವರು ದೂರಿದರು.

> ಪ್ರತಿಪಕ್ಷಗಳು ಯುಸಿಸಿಗೆ ಕೋಮು ಬಣ್ಣ ಮೆತ್ತಲು ಮುಂದಾಗಿವೆ. ಸಮಾಜ ಮತ್ತು ದೇಶವನ್ನು ಇಬ್ಭಾಗಿಸಲು ರಾಜಕೀಯ ಬಳಸಬಾರದು
>
> **ರಾಜನಾಥ್ ಸಿಂಗ್**
> ಕೇಂದ್ರ ರಕ್ಷಣಾ ಸಚಿವ

‘ಇದರ ಜಾರಿಯನ್ನು ಮಂಡಳಿ ವಿರೋಧಿಸಲಿದೆ. ಜುಲೈ 14ರೊಳಗೆ ಕಾನೂನು ಆಯೋಗಕ್ಕೆ ತನ್ನ ಅಭಿಪ್ರಾಯ ತಿಳಿಸಲಿದೆ’ ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಧರ್ಮಗುರು ಮೌಲಾನ ಖಾಲೀದ್ ರಶೀದ್ ಫಿರಂಗಮಹಾಲಿ ತಿಳಿಸಿದರು.

‘ಯುಸಿಸಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಲು ಪ್ರಸಿದ್ಧ ಕಾನೂನು ತಜ್ಞರೊಂದಿಗೆ ಚರ್ಚಿಸಿ ಮಂಡಳಿಯು ಕರಡು ಸಿದ್ಧಪಡಿಸಲು ಮುಂದಾಗಿದೆ. ಸುಮಾರು 100 ಪುಟಗಳಷ್ಟು ಅಭಿಪ್ರಾಯವನ್ನು ಆಯೋಗಕ್ಕೆ ಸಲ್ಲಿಸಲು ನಿರ್ಧರಿಸಿದೆ. ಇದರ ಜಾರಿಯಿಂದ ದೇಶದ ಒಗ್ಗಟ್ಟು, ಸಮಗ್ರತೆ ಮತ್ತು ಜನತಂತ್ರ ವ್ಯವಸ್ಥೆ ಮೇಲೆ ಆಗುವ ಸಂಭವನೀಯ ದುಷ್ಪರಿಣಾಮಗಳನ್ನು ಇದರಲ್ಲಿ ಪ್ರಸ್ತಾಪಿಸಲಾಗುತ್ತದೆ’ ಎಂದು ಮೂಲಗಳು ಮಾಹಿತಿ ನೀಡಿವೆ.

ಮಂಡಳಿಯ ಪ್ರಧಾನ ಕಾರ್ಯದರ್ಶಿ ಮೌಲಾನ ಮೊಹಮ್ಮದ್ ಫಜಲ್ ಉರ್ ರಹೀಂ, ಡಾ.ಖ್ವಾಸಿಂ ರಸೂಲ್ ಇಲಿಯಾಸ್ ಸೇರಿದಂತೆ ಹಲವು ಹಿರಿಯ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

**ಒಮ್ಮತದ ಜಾರಿಗೆ ಎಎಪಿ ಬೆಂಬಲ(ನವದೆಹಲಿ/ ಪಿಟಿಐ ವರದಿ):** ‘ನಾಗರಿಕ ಸಂಹಿತೆ ಜಾರಿಗೂ ಮೊದಲು ಕೇಂದ್ರ ಸರ್ಕಾರವು ಎಲ್ಲರೊಂದಿಗೂ ಸಮಾಲೋಚನೆ ನಡೆಸಿ ಒಮ್ಮತದಿಂದ ಇದನ್ನು ಜಾರಿಗೊಳಿಸಬೇಕಿದೆ ಎಂದು ಎಎಪಿ ಹೇಳಿದೆ.

ಸಂಹಿತೆ ಜಾರಿಗೂ ಮೊದಲು ಇದನ್ನು ಬೆಂಬಲಿಸುವವರು, ಸರ್ವಪಕ್ಷಗಳು ಮತ್ತು ಸಂಘ–ಸಂಸ್ಥೆಗಳ ನಡುವೆ ಚರ್ಚಿಸಬೇಕು ಎಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಸಂದೀಪ್ ಪಾಠಕ್ ಹೇಳಿದ್ದಾರೆ.

‘ಯುಸಿಸಿ ಎಂಬುದು ಸಾಂವಿಧಾನಿಕ ಆದರ್ಶ. ಸರ್ಕಾರ ಇದನ್ನು ಜಾರಿಗೊಳಿಸಬಹುದು ಎಂದು ಸಂವಿಧಾನದ 44ನೇ ವಿಧಿ ಕೂಡ ಹೇಳುತ್ತದೆ. ಹಾಗಾಗಿ, ಇದಕ್ಕೆ ಪಕ್ಷ ಬೆಂಬಲ ನೀಡುತ್ತದೆ. ಆದರೆ, ಇಂತಹ ವಿಷಯಗಳ ಜಾರಿಯಲ್ಲಿ ಒಮ್ಮತ ಅಗತ್ಯ. ಎಲ್ಲರೊಂದಿಗೆ ಚರ್ಚಿಸಿದ ಬಳಿಕವಷ್ಟೇ ಜಾರಿಗೊಳಿಸುವುದು ಉತ್ತಮ’ ಎಂದಿದ್ದಾರೆ.

## ಯುಸಿಸಿ ಹೇರಿಕೆ ವ್ಯರ್ಥ ಕಸರತ್ತು: ಚಿದಂಬರಂ



**ನವದೆಹಲಿ(ಪಿಟಿಐ):** ‘ಭಾರತೀಯ ಕೌಟುಂಬಿಕ ಪದ್ಧತಿಯಲ್ಲಿ ವೈವಿಧ್ಯ ಇದೆ. ಜನರಲ್ಲಿರುವ ವೈವಿಧ್ಯ ಮತ್ತು ಬಹುತ್ವವನ್ನು ಸಂವಿಧಾನವೂ ಗುರುತಿಸಿದೆ. ಹೀಗಿದ್ದರೂ ಕಾರ್ಯಸೂಚಿ ಹೊಂದಿರುವ ಬಹುಮತದ ಸರ್ಕಾರವು ಜನರ ಮೇಲೆ ಬಲವಂತವಾಗಿ ಯುಸಿಸಿ ಹೇರಲು ಸಾಧ್ಯವಿಲ್ಲ’

–ಹೀಗೆಂದು ಯುಸಿಸಿ ಜಾರಿಗೆ ಇಂಗಿತ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಂಗ್ರೆಸ್ ನಾಯಕ ಪಿ. ಚಿದಂಬರಂ ತಿರುಗೇಟು ನೀಡಿದ್ದಾರೆ.

‘ನಾಗರಿಕ ಸಂಹಿತೆ ಜಾರಿಗಾಗಿ ಮೋದಿ ಅವರು ಇಡೀ ರಾಷ್ಟ್ರವನ್ನು ಕುಟುಂಬಕ್ಕೆ ಹೋಲಿಸಿದ್ದಾರೆ. ಅವರ ಈ ಸಮೀಕರಣವು ಮೊದಲ ನೋಟಕ್ಕೆ ಸತ್ಯವಾಗಿ ಕಾಣಬಹುದು. ಆದರೆ, ವಾಸ್ತವ ಸ್ಥಿತಿ ತುಂಬಾ ಭಿನ್ನವಾಗಿದೆ. ಕುಟುಂಬವು ರಕ್ತಸಂಬಂಧದ ಆಗರ. ರಾಷ್ಟ್ರದ ಒಗ್ಗೂಡುವಿಕೆಯು ಇದಕ್ಕೆ ತದ್ವಿರುದ್ಧವಾಗಿದೆ. ರಾಜಕೀಯ ಮತ್ತು ಕಾನೂನಿನ ಚೌಕಟ್ಟನಡಿ ದೇಶ ಒಗ್ಗೂಡಿದೆ. ಹಾಗಾಗಿ, ಇವೆರಡರ ನಡುವಣ ಹೋಲಿಕೆಯೇ ಸರಿಯಿಲ್ಲ’ ಎಂದು ಟ್ವೀಟ್ ಮಾಡಿದ್ದಾರೆ.

ಸಂಹಿತೆ ಜಾರಿಯನ್ನು ಸರಳ ಕಸರತ್ತು ಎಂಬಂತೆ ಮೋದಿ ಚಿತ್ರಿಸುತ್ತಿದ್ದಾರೆ. ಭಾರತದ ಈಗಿನ ಸಂದರ್ಭದಲ್ಲಿ ಇದರ ಜಾರಿ ಕಾರ್ಯಸಾಧುವಲ್ಲ ಎಂದು ಕಾನೂನು ಆಯೋಗವೇ ಪ್ರತಿಪಾದಿಸಿದೆ. ಆ ವರದಿಯನ್ನು ಒಮ್ಮೆ ಪ್ರಧಾನಿ ಅವರು ಓದಬೇಕಿದೆ ಎಂದು ಸಲಹೆ ನೀಡಿದ್ದಾರೆ.

### ಫಿಜಿಯೋಥೆರಪಿ ಕೋರ್ಸ್ ಕಲಿಕೆ: ಕೌನ್ಸಿಲ್ ವಾದಕ್ಕೆ ಹಿನ್ನಡೆ

# ದೃಷ್ಟಿದೋಷ ವಿದ್ಯಾರ್ಥಿನಿಗೆ ಹೈಕೋರ್ಟ್ ಅನುಮತಿ

**ಮುಂಬೈ(ಪಿಟಿಐ):** ದೃಷ್ಟಿದೋಷ ಹೊಂದಿರುವ ವಿದ್ಯಾರ್ಥಿನಿಗೆ ಫಿಜಿಯೋಥೆರಪಿ ಕೋರ್ಸ್ ಅಧ್ಯಯನಕ್ಕೆ ಬಾಂಬೆ ಹೈಕೋರ್ಟ್ ಅನುಮತಿ ನೀಡಿದೆ.

ಕಲಿಕೆಗೆ ಆಸಕ್ತಿ ಹೊಂದಿರುವ ಇಂತಹ ಅಂಗವಿಕಲರಿಗೆ ನೆರವು ನೀಡುವುದು ಸಮಾಜದ ಸಾಮೂಹಿಕ ಜವಾಬ್ದಾರಿ. ಜೊತೆಗೆ, ಇವರಿಗೆ ಅಗತ್ಯ ನೆರವು ಕಲ್ಪಿಸಲು ಸೂಕ್ತ ಮಾರ್ಗೋಪಾಯಗಳನ್ನು ಹುಡುಕುವುದು ಸರ್ಕಾರದ ಹೊಣೆಗಾರಿಕೆಯಾಗಿದೆ ಎಂದು ಹೇಳಿದೆ.

ಈ ಕುರಿತು ವಿದ್ಯಾರ್ಥಿನಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಗೌತಮ್ ಪಟೇಲ್ ಮತ್ತು ನೀಲಾ ಘೋಖಲೆ ಅವರಿದ್ದ ವಿಭಾಗೀಯ ಪೀಠವು, ಮಹಾರಾಷ್ಟ್ರದ ಆಕ್ಯುಪೇಷನಲ್ ಥೆರಪಿ ಮತ್ತು ಫಿಸಿಯೋಥೆರಪಿ ಕೌನ್ಸಿಲ್ ಮಂಡಿಸಿದ ವಾದವನ್ನು ತಳ್ಳಿಹಾಕಿತು.

**ಮುಖ್ಯಾಂಶಗಳು**

- ಅಂಗವಿಕಲರಿಗೆ ನೆರವು ನೀಡುವುದು ಸಮಾಜದ ಜವಾಬ್ದಾರಿ– ಹೈಕೋರ್ಟ್
- ಅಂಗವಿಕಲರು ಅಧ್ಯಯನದಲ್ಲಿ ನಿರೀಕ್ಷಿತ ಗುರಿ ಸಾಧಿಸಲಾರರು– ಕೌನ್ಸಿಲ್

‘ದೃಷ್ಟಿದೋಷ ಹೊಂದಿದವರ ಕಲಿಕೆಗೆ ಪೂರಕವಾಗಿ ಪಠ್ಯಕ್ರಮ ರೂಪಿಸಬೇಕಿದೆ. ಅಂಗವಿಕಲರ ಕಾಯ್ದೆಯಲ್ಲೂ ಇದಕ್ಕೆ ಅನುಗುಣವಾಗಿ ಮಾರ್ಪಾಡು ಮಾಡುವುದು ಕೌನ್ಸಿಲ್‌ನ ಪ್ರಾಥಮಿಕ ಹೊಣೆಗಾರಿಕೆಯಾಗಿದೆ. ಇದರ ಹೊರತಾಗಿ ಬೇರೆ ಮಾರ್ಗವಿಲ್ಲ’ ಎಂದು ಹೈಕೋರ್ಟ್ ತಾಕೀತು ಮಾಡಿತು.

**ಕೌನ್ಸಿಲ್ ವಾದವೇನು?:** ಫಿಜಿಯೋಥೆರಪಿಸ್ಟ್‌ಗಳು ಶಸ್ತ್ರಚಿಕಿತ್ಸೆ ಮಾಡಬೇಕಿದೆ. ಸರ್ಜಿಕಲ್ ಮತ್ತು ಐಸಿಯು ಘಟಕದಲ್ಲಿ ಕೆಲಸ ನಿರ್ವಹಿಸಬೇಕಾಗುತ್ತದೆ. ಹಾಗಾಗಿ, ದೃಷ್ಟಿದೋಷ ಇದ್ದವರು ಈ ಕೆಲಸ ನಿಭಾಯಿಸುವುದು ಕಷ್ಟ. ವೃತ್ತಿ ಅಭ್ಯಾಸವೂ ಸುಲಭವಲ್ಲ ಎಂದು ಹೇಳಿ ವಿದ್ಯಾರ್ಥಿನಿಯ ಪ್ರವೇಶಾತಿಗೆ ನಿರಾಕರಿಸಿತ್ತು.

ಈ ವಾದವನ್ನು ತಿರಸ್ಕರಿಸಿದ ಪೀಠವು, ‘ದೇಶದ ವಿವಿಧ ಕೋರ್ಟ್‌ಗಳಲ್ಲಿ ದೃಷ್ಟಿದೋಷ ಇರುವ ವಿದ್ಯಾರ್ಥಿಗಳು, ವಕೀಲರು, ಸಹಾಯಕರು ಸೇರಿದಂತೆ ಹಲವರು ಕೆಲಸ ಮಾಡುತ್ತಿದ್ದಾರೆ’ ಎಂದು ಹೇಳಿ ಕೌನ್ಸಿಲ್ ತಳೆದಿರುವ ನಿಲುವಿಗೆ ದಿಗ್ಭ್ರಮೆ ಮತ್ತು ಅಸಮಾಧಾನ ವ್ಯಕ್ತಪಡಿಸಿತು.

ಕೌನ್ಸಿಲ್ ನಿರ್ಧಾರವು ಸಾಂವಿಧಾನಿಕ ಹಾಗೂ ಆತ್ಮಸಾಕ್ಷಿಗೆ ಅನುಗುಣವಾಗಿ ಒಪ್ಪಿತವಲ್ಲ. ಜೊತೆಗೆ, ಪೀಠದ ಮುಂದೆ ಪ್ರವೇಶಾತಿ ನಿರಾಕರಣೆಗೆ ಸಂಬಂಧಿಸಿದಂತೆ ಸೂಕ್ತ ವೈದ್ಯಕೀಯ ವರದಿಯನ್ನೂ ಸಲ್ಲಿಸಿಲ್ಲ. ಇದು ಶಾಸನಬದ್ಧ ಕರ್ತವ್ಯಕ್ಕೆ ಬಗೆಯುವ ದ್ರೋಹವಾಗಿದೆ ಎಂದು ಹೇಳಿತು.

ಅಂಗವೈಕಲ್ಯ ಹೊಂದಿರುವವರು ಅಧ್ಯಯನ ಮತ್ತು ವೃತ್ತಿಯಲ್ಲಿ ನಿರೀಕ್ಷಿತ ಗುರಿ ಸಾಧಿಸಲಾರರು ಎಂದು ಹೇಳಿರುವುದು ಖಂಡನೀಯ. ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನ ಮಾಡಬೇಕಿದೆ ಎಂದು ಸೂಚಿಸಿತು.

## ಏನಿದು ಪ್ರಕರಣ?

ವಿದ್ಯಾರ್ಥಿನಿ ಜಿಲ್ ಜೈನ್ ಶೇ 40ರಷ್ಟು ದೃಷ್ಟಿದೋಷ ಹೊಂದಿದ್ದಾರೆ. 2022ರ ಮಾರ್ಚ್‌ನಲ್ಲಿ ದ್ವಿತೀಯ ಪಿಯು ಮುಗಿಸಿದ್ದ ಅವರು, ಫಿಜಿಯೋಥೆರಪಿ ಕೋರ್ಸ್ ಅಧ್ಯಯನಕ್ಕೆ ಆಸಕ್ತಿ ಹೊಂದಿ ಅರ್ಜಿ ಸಲ್ಲಿಸಿದ್ದರು. ಆದರೆ, ಅವರ ಪ್ರವೇಶಾತಿಗೆ ಕೌನ್ಸಿಲ್ ನಿರಾಕರಿಸಿತ್ತು.

ಈ ಮೊದಲು ದೃಷ್ಟಿದೋಷ ಹೊಂದಿದವರಿಗೆ ವೈದ್ಯಕೀಯ ಪದವಿ ಅಧ್ಯಯನಕ್ಕೆ ಅವಕಾಶ ನಿರ್ಬಂಧಿಸಲಾಗಿತ್ತು. ಬಳಿಕ ಶೇ 40ರಷ್ಟು ದೋಷ ಇದ್ದವರಿಗೆ ಅವಕಾಶ ಕಲ್ಪಿಸಲು ಕಾಯ್ದೆಗೆ ತಿದ್ದುಪಡಿ ತರಲಾಗಿದೆ.

### ದುಲೀಪ್ ಟ್ರೋಫಿ: ದೊಡ್ಡ ಮೊತ್ತದತ್ತ ಉತ್ತರ ವಲಯ; ನಿಶಾಂತ್ ಸಿಂಧು ಅರ್ಧಶತಕ

# ಧ್ರುವ ಶೋರೆ ಶತಕ ವೈಭವ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉದ್ಯಾನನಗರಿಯ ಮೇಲೆ ಬುಧವಾರ ಇಡೀ ದಿನ ಮಳೆ ಮೋಡಗಳ ಓಡಾಟವಿತ್ತು. ಆದರೆ, ಹನಿ ಉದುರಲಿಲ್ಲ.

ಇತ್ತ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಉತ್ತರ ವಲಯದ ಆಟಗಾರ ಧ್ರುವ ಶೋರೆ ರನ್‌ಗಳ ಮಳೆ ಸುರಿಸಿದರು. ಚೆಂದದ ಶತಕ ದಾಖಲಿಸಿದರು.

ಇದರಿಂದಾಗಿ ಉತ್ತರ ವಲಯ ತಂಡವು ಈಶಾನ್ಯ ವಲಯದ ಎದುರು 87 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 306 ಗಳಿಸಿದೆ. ನಿಶಾಂತ್ ಸಿಂಧು (ಬ್ಯಾಟಿಂಗ್ 76) ಹಾಗೂ ಪುಳಕಿತ್ ನಾರಂಗ್ (ಬ್ಯಾಟಿಂಗ್ 23) ಕ್ರೀಸ್‌ನಲ್ಲಿದ್ದಾರೆ.

ರಾಂಗ್‌ಸೆನ್ ಜೊನಾಥನ್ ನೇತೃತ್ವದ ಈಶಾನ್ಯ ತಂಡವು ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡಿತು.

ಉತ್ತರ ವಲಯದ ಆರಂಭಿಕ ಬ್ಯಾಟರ್ ಧ್ರುವ ಶೋರೆ (135; 211ಎ, 4X22) ಮತ್ತು ಪ್ರಶಾಂತ್ ಚೋಪ್ರಾ (32; 68ಎ) ಅವರು ಉತ್ತಮ ಅಡಿಪಾಯ ಹಾಕಿದರು. ಮೊದಲ ವಿಕೆಟ್‌ಗೆ 80 ರನ್ ಸೇರಿಸಿದರು. ಊಟಕ್ಕೂ ಮುನ್ನ ಫೀರೋಜಿಯಾನ್ ಜೊತಿನ್ ಬೌಲಿಂಗ್‌ನಲ್ಲಿ ಪ್ರಶಾಂತ್ ಕ್ಲೀನ್‌ಬೌಲ್ಡ್ ಆದರು. ನಂತರದ ಎಸೆತದಲ್ಲಿಯೇ ಅಂಕಿತ್ ಖಲ್ಸಿ ಕೂಡ ಔಟಾದರು.

ಈ ಹಂತದಲ್ಲಿ ಧ್ರುವ್ ಮತ್ತು ಪ್ರಭಸಿಮ್ರನ್ ಸಿಂಗ್ (31; 40ಎ) ಸೇರಿ ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 59 ರನ್ ಸೇರಿಸಿದರು. ಇದರಿಂದಾಗಿ ಮೊತ್ತವು ಏರತೊಡಗಿತು. ಆದರೆ, ಈ ಸಂದರ್ಭದಲ್ಲಿ ಈಶಾನ್ಯ ತಂಡದ ಲೆಮ್ತೂರ್ ಬೌಲಿಂಗ್‌ನಲ್ಲಿ ಪ್ರಭಸಿಮ್ರನ್ ಔಟಾದರು. ಇದರಿಂದಾಗಿ ಜೊತೆಯಾಟ ಮುರಿದುಬಿತ್ತು. ಅಂಕಿತ್ ಕುಮಾರ್ ಕೇವಲ 9 ರನ್ ಗಳಿಸಿ ನಿರ್ಗಮಿಸಿದರು.

ಆದರೆ ಗಟ್ಟಿಯಾಗಿ ನಿಂತು ಆಡುತ್ತಿದ್ದ ಧ್ರುವ ಮಾತ್ರ ಎದೆಗುಂದಲಿಲ್ಲ. ಅವರಿಗೆ ಜೊತೆಗೂಡಿದ ನಿಶಾಂತ್ ಸಿಂಧು ಇನಿಂಗ್ಸ್ ಚಿತ್ರಣ ವನ್ನೇ ಬದಲಾಯಿಸಿ ಬಿಟ್ಟರು. ಚುರುಕಾಗಿ ರನ್ ಗಳಿಸಿದರು.

ಐದನೇ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿದರು. ಇದರಿಂದಾಗಿ ತಂಡದ ಮೊತ್ತವು 200ರ ಗಡಿ ದಾಟಿತು. ಧ್ರುವ ಶತಕ ಪೂರೈಸಿದರು. 2022–23ರ ರಣಜಿ ಋತುವಿನಲ್ಲಿ ಅವರು ಮೂರು ಶತಕ ಬಾರಿಸಿದ್ದರು. ಏಳೂ ಪಂದ್ಯಗಳಲ್ಲಿ 859 ರನ್ ಸೇರಿಸಿದ್ದರು. ಇಲ್ಲಿಯೂ ಅದೇ ಲಯ ಮುಂದುವರಿಸಿದರು. 31 ವರ್ಷದ ಧ್ರುವ ಅವರು ಎದುರಾಳಿ ಬೌಲರ್‌ಗಳ ಎಸೆತಗಳನ್ನು ಲೀಲಾಜಾಲವಾಗಿ ಎದುರಿಸಿದರು. ಎಡಗೈ ಸ್ಪಿನ್ನರ್ ಕಿಶನ್ ಸಿಂಘಾ ಅವರ ಎಸೆತದಲ್ಲಿ ಧ್ರುವ ಅವರು ಜೋನಾಥನ್ ಪಡೆದ ಕ್ಯಾಚ್‌ಗೆ ಔಟಾದರು.

ನಾಯಕ ಜಯಂತ್ ಯಾದವ್ ಕೂಡ ಇದೇ ಓವರ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಆಗಿನ್ನೂ ತಂಡವು 250ರ ಗಡಿ ಮುಟ್ಟಿರಲಿಲ್ಲ.

ಆದರೆ ಕ್ರೀಸ್‌ನಲ್ಲಿದ್ದ ನಿಶಾಂತ್ ಅವರೊಂದಿಗೆ ಸೇರಿದ ನಾರಂಗ್ ತಂಡಕ್ಕೆ ಆಸರೆಯಾದರು. ಮುರಿಯದ ಏಳನೇ ವಿಕೆಟ್ ಜೊತೆಯಾಟದಲ್ಲಿ 64 ರನ್ ಸೇರಿಸಿದರು.

**ಸಂಕ್ಷಿಪ್ತ ಸ್ಕೋರು: ಚಿನ್ನಸ್ವಾಮಿ ಕ್ರೀಡಾಂಗಣ:** ಉತ್ತರ ವಲಯ: 87 ಓವರ್‌ಗಳಲ್ಲಿ 6ಕ್ಕೆ 306 (ಧ್ರುವ ಶೋರೆ 135, ಪ್ರಶಾಂತ್ ಚೋಪ್ರಾ 32, ಪ್ರಭಸಿಮ್ರನ್ ಸಿಂಗ್ 31, ನಿಶಾಂತ್ ಸಿಂಧು ಬ್ಯಾಟಿಂಗ್ 76, ಪುಳಕಿತ್ ನಾರಂಗ್ ಬ್ಯಾಟಿಂಗ್ 33, ಫ್ರಿರೊಜಿಯಾಮ್ ಜೊತಿನ್ 53ಕ್ಕೆ2, ಎಲ್. ಕೃಷ್ಣ ಸಿಂಗ್ 48ಕ್ಕೆ2)– ಈಶಾನ್ಯ ವಲಯದ ವಿರುದ್ಧದ ಪಂದ್ಯ.

**ಆಲೂರು ಮೈದಾನ:** ಕೇಂದ್ರ ವಲಯ: 71.4 ಓವರ್‌ಗಳಲ್ಲಿ 182 (ವಿವೇಕ್ ಸಿಂಗ್ 21, ಹಿಮಾಂಶು ಮಂತ್ರಿ 29, ರಿಂಕು ಸಿಂಗ್ 38, ಉಪೇಂದ್ರ ಯಾದವ್ 25, ಮಣಿಶಂರ್ ಮುರಾಸಿಂಗ್ 42ಕ್ಕೆ5, ಶಾಬಾಜ್ ನದೀಂ 42ಕ್ಕೆ 2). ಪೂರ್ವ ವಲಯ: 12 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 32 (ಸುದೀಪ್ ಕುಮಾರ್ ಘರಮಿ ಬ್ಯಾಟಿಂಗ್ 19, ಶಾಬಾಜ್ ನದೀಂ ಬ್ಯಾಟಿಂಗ್ 6, ಆವೇಶ್ ಖಾನ್ 13ಕ್ಕೆ2)



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ ದುಲೀಪ್ ಟ್ರೋಫಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಉತ್ತರ ವಲಯ ತಂಡದ ಆಟಗಾರ ಧ್ರುವ ಶೋರೆ ಹಾಗೂ ನಿಶಾಂತ್ ಸಿಂಧು ಓಟ –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

## ಮುರಾಸಿಂಗ್‌ಗೆ ಐದು ವಿಕೆಟ್

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಪೂರ್ವ ವಲಯದ ಮಣಿಶಂಕರ್ ಮುರಾಸಿಂಗ್ (42ಕ್ಕೆ5) ಉತ್ತಮ ಬೌಲಿಂಗ್ ಮುಂದೆ ಕೇಂದ್ರ ವಲಯವು ಅಲ್ಪಮೊತ್ತಕ್ಕೆ ಕುಸಿಯಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಕೇಂದ್ರ ವಲಯದ ಪ್ರಮುಖ ಬ್ಯಾಟರ್‌ಗಳು ದೊಡ್ಡ ಮೊತ್ತ ಪೇರಿಸುವಲ್ಲಿ ವಿಫಲರಾದರು. ಇದರಿಂದಾಗಿ ತಂಡವು 71.4 ಓವರ್‌ಗಳಲ್ಲಿ 182 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ತ್ರಿಪುರಾದ ಮಧ್ಯಮವೇಗಿ ಮುರಾಸಿಂಗ್ ಅವರು ಕೇಂದ್ರ ತಂಡದ ಪ್ರಮುಖ ಬ್ಯಾಟರ್‌ಗಳನ್ನು ಹೆಡೆಮುರಿ ಕಟ್ಟಿದರು. ತಮ್ಮ ಲೆಗ್ ಕಟರ್, ಸ್ವಿಂಗ್ ಮತ್ತು ಸ್ಲೋ ಎಸೆತಗಳ ಮೂಲಕ ಬ್ಯಾಟರ್‌ಗಳನ್ನು ಕಂಗೆಡಿಸಿದರು.

ಆರಂಭಿಕ ಬ್ಯಾಟರ್ ವಿವೇಕ್ ಸಿಂಗ್, ಉಪೇಂದ್ರ ಯಾದವ್, ಸಾರಾಂಶ್ ಜೈನ್, ಸೌರಭ್ ಕುಮಾರ್ ಮತ್ತು ಆವೇಶ್ ವಿಕೆಟ್‌ಗಳನ್ನು ಗಳಿಸಿದರು. ಶಾಬಾಜ್ ಅಹಮದ್ ಕೂಡ ಎರಡು ವಿಕೆಟ್ ಗಳಿಸಿಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು.

ದಿನದಾಟದ ಕೊನೆಗೆ ಪೂರ್ವ ವಲಯ ತಂಡವು 12 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 32 ರನ್ ಗಳಿಸಿತು. ಸುದೀಪ್ ಕುಮಾರ್ ಘರಮಿ (ಬ್ಯಾಟಿಂಗ್ 19) ಮತ್ತು ಶಾಬಾಜ್ ನದೀಂ (ಬ್ಯಾಟಿಂಗ್ 6) ಕ್ರೀಸ್‌ನಲ್ಲಿದ್ದಾರೆ. ಆದರೆ ತಂಡದ ಆರಂಭಿಕ ಬ್ಯಾಟರ್‌ಗಳು ಬೇಗನೆ ನಿರ್ಗಮಿಸಿದರು. ಶಂತನು ಮಿಶ್ರಾ (6 ರನ್) ಮತ್ತು ನಾಯಕ ಅಭಿಮನ್ಯು ಈಶ್ವರನ್ ಅವರಿಬ್ಬರೂ ವೇಗಿ ಆವೇಶ್ ಖಾನ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಈಶ್ವರನ್ ಖಾತೆಯನ್ನೇ ತೆರೆಯಲಿಲ್ಲ.

# ಸೆಮಿಯಲ್ಲಿ ಭಾರತ–ಲೆಬನಾನ್ ಪೈಪೋಟಿ

### ಸ್ಯಾಫ್ ಫುಟ್‌ಬಾಲ್: ಬಾಂಗ್ಲಾದೇಶಕ್ಕೆ ಮಣಿದ ಭೂತಾನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲೆಬನಾನ್ ತಂಡವು ಇಲ್ಲಿ ನಡೆಯುತ್ತಿರುವ ದಕ್ಷಿಣ ಏಷ್ಯಾ ಫುಟ್‌ಬಾಲ್ ಚಾಂಪಿಯನ್‌ಷಿಪ್ ಸೆಮಿಫೈನಲ್‌ನಲ್ಲಿ ಭಾರತ ತಂಡವನ್ನು ಎದುರಿಸಲಿದೆ.

ಬುಧವಾರ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಲೆಬನಾನ್ ತಂಡವು ನಾಯಕ ಹಸನ್ ಮಾಟೌಕ್ ಗಳಿಸಿದ ಏಕೈಕ ಗೋಲಿನಿಂದ ಮಾಲ್ಡೀವ್ಸ್ ಎದುರು ಜಯಿಸಿತು.

ಪಂದ್ಯದ 24ನೇ ನಿಮಿಷದಲ್ಲಿ ಲಭಿಸಿದ ಫ್ರೀಕಿಕ್‌ನಲ್ಲಿ ಹಸನ್ ಗೋಲು ಗಳಿಸಿದರು. ಇದರಿಂದಾಗಿ ಲೆಬನಾನ್ 1–0 ಜಯಗಳಿಸಿತು. ಇದರೊಂದಿಗೆ ತಂಡವು ತನ್ನ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ಶನಿವಾರ ನಡೆಯಲಿರುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಭಾರತ ಮತ್ತು ಲೆಬನಾನ್ ಮುಖಾಮುಖಿಯಾಗಲಿವೆ.

ಈಚೆಗೆ ಭುವನೇಶ್ವರದಲ್ಲಿ ನಡೆದಿದ್ದ ಇಂಟರ್‌ಕಾಂಟಿನೆಂಟಲ್ ಕಪ್ ಫೈನಲ್‌ನಲ್ಲಿಯೂ ಈ ಎರಡೂ ತಂಡಗಳು ಹಣಾಹಣಿ ನಡೆಸಿದ್ದವು. ಭಾರತ ಜಯಿಸಿತ್ತು. ಗುಂಪು ಹಂತದ ಪಂದ್ಯದಲ್ಲಿ 154ನೇ ರ‍್ಯಾಂಕ್ ಹೊಂದಿರುವ ಮಾಲ್ಡೀವ್ಸ್ ತಂಡವು ಲೆಬನಾನ್ ಬಳಗಕ್ಕೆ ಸುಲಭವಾಗಿ ಮಣಿಯಲಿಲ್ಲ.

**ಬಾಂಗ್ಲಾಕ್ಕೆ ಜಯ:** ಬಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಬಾಂಗ್ಲಾದೇಶ ತಂಡವು 3–1ರಿಂದ ಭೂತಾನ್ ವಿರುದ್ಧ ಜಯಿಸಿತು.

ಭೂತಾನ್ ತಂಡದ ಟಿಸೆಂಡಾ ದೊರ್ಜಿ 12ನೇ ನಿಮಿಷದಲ್ಲಿಯೇ ಗೋಲು ಹೊಡೆದರು. ಒಂಬತ್ತು ನಿಮಿಷಗಳ ನಂತರ ಬಾಂಗ್ಲಾದ ಶೇಖ್ ಮಾರ್ಸಲಿನ್ ಗೋಲು ಹೊಡೆದು ಸಮಬಲ ಸಾಧಿಸಿದರು.

30ನೇ ನಿಮಿಷದಲ್ಲಿ ಭೂತಾನ್‌ನ ಫುಂಟಷೊ ಜಿಗ್ಮೆ ಕೊಟ್ಟ 'ಉಡುಗೊರೆ' ಗೋಲಿನಿಂದಾಗಿ ಬಾಂಗ್ಲಾ 2–1ರ ಮುನ್ನಡೆ ಪಡೆಯಿತು. ರಕೀಬ್ ಹೊಸೇನ್ 36ನೇ ನಿಮಿಷದಲ್ಲಿ ಗೋಲು ಹೊಡೆದು ಅಂತರ ಹೆಚ್ಚಿಸಿದರು.

ಬಾಂಗ್ಲಾ ದೇಶ ತಂಡವು ಒಟ್ಟು ಮೂರು ಪಂದ್ಯಗಳಲ್ಲಿ ಎರಡರಲ್ಲಿ ಜಯಿಸಿತು. ನಾಲ್ಕು ಅಂಕಗಳೊಂದಿಗೆ ಎರಡನೇ ಸ್ಥಾನ ಗಳಿಸಿ ನಾಲ್ಕರ ಘಟ್ಟದಲ್ಲಿ ಸ್ಥಾನ ಪಡೆಯಿತು.

## ಗೋಲು ಉಡುಗೊರೆ ಕೊಟ್ಟದ್ದು ತಂಡ: ಚೆಟ್ರಿ



ಸುನಿಲ್ ಚೆಟ್ರಿ

**ಬೆಂಗಳೂರು:** 'ಪಂದ್ಯದಲ್ಲಿ ಉಡುಗೊರೆ ಗೋಲು ಕೊಟ್ಟಿದ್ದು ಅನ್ವರ್ ಅಲ್ಲ, ತಂಡ' ಎಂದು ಭಾರತ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಚೆಟ್ರಿ ಹೇಳಿದರು.

ಮಂಗಳವಾರ ನಡೆದ ಸ್ಯಾಫ್ ಟೂರ್ನಿಯ ಪಂದ್ಯದಲ್ಲಿ ಕುವೈತ್ ವಿರುದ್ಧ 1–1ರ ಡ್ರಾ ಸಾಧಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಪಂದ್ಯದಲ್ಲಿ ಕುವೈತ್‌ಗೆ ಉಡುಗೊರೆ ಗೋಲು ಲಭಿಸಿದ್ದರಿಂದ ಭಾರತದ ಜಯ ಗಳಿಸುವ ಅವಕಾಶ ಕೈತಪ್ಪಿತು.

ಈ ಕುರಿತು ಪ್ರತಿಕ್ರಿಯಿಸಿದ ಚೆಟ್ರಿ, 'ಈ ರೀತಿ ಯಾರಿಂದ ಬೇಕಾದರೂ ಆಗಬಹುದು. ನಾವು ವೃತ್ತಿಪರ ಆಟಗಾರರು. ತಾಂತ್ರಿಕ ಲೋಪಗಳು ಆಗುತ್ತವೆ. ನಾವೆಲ್ಲರೂ ಅನ್ವರ್ ಅವರೊಂದಿಗೆ ಇದ್ದೇವೆ' ಎಂದು ನುಡಿದರು.

'ಕುವೈತ್ ತಂಡದ ಆಟಗಾರರು ಉತ್ತಮ ಸಾಮರ್ಥ್ಯ ಹೊಂದಿದವರು. ಕಠಿಣ ಪೈಪೋಟಿಯೊಡ್ಡಿದರು. ಆದರೂ ಅವರಿಗೆ ಸರಿಸಮನಾಗಿ ಆಡಿದೆವು. ಅಲ್ಲದೇ ಸೋಲಿಲ್ಲದ ಓಟವನ್ನು ಮುಂದುವರಿಸಿದೆವು. ನಮಗೆ ಇದೇ ರೀತಿ ಆಡುವ ತರಬೇತಿ ನೀಡಲಾಗಿದೆ. ಇದೇ ಉತ್ಕೃಷ್ಟ ಆಟವನ್ನು ಮುಂದುವರಿಸುತ್ತೇವೆ' ಎಂದರು.

'ಭಾರತ ತಂಡವು 2023ರಲ್ಲಿ ಆಡಿದ ಒಂಬತ್ತು ಪಂದ್ಯಗಳಲ್ಲಿ ಸೋತಿಲ್ಲ. ಇದೇ ಓಟವನ್ನು ಮುಂದುವರಿಸುತ್ತೇವೆ' ಎಂದರು.

# ಆ್ಯಷಸ್ ಟೆಸ್ಟ್: ಆಸ್ಟ್ರೇಲಿಯಾಕ್ಕೆ ಉತ್ತಮ ಆರಂಭ

**ಲಂಡನ್ (ಎಪಿ):** ಆರಂಭ ಆಟಗಾರ ಡೇವಿಡ್ ವಾರ್ನರ್ (66), ಸ್ಟೀವನ್ ಸ್ಮಿತ್ (ಅಜೇಯ 85) ಮತ್ತು ಟ್ರಾವಿಸ್ ಹೆಡ್ (77) ಅವರ ಉಪಯುಕ್ತ ಬ್ಯಾಟಿಂಗ್ ನೆರವಿನಿಂದ ಆಸ್ಟ್ರೇಲಿಯಾ ತಂಡದವರು ಲಾರ್ಡ್ಸ್‌ನಲ್ಲಿ ಬುಧವಾರ ಆರಂಭವಾದ ಆ್ಯಷಸ್ ಸರಣಿಯ ಎರಡನೇ ಟೆಸ್ಟ್ ಪಂದ್ಯದಲ್ಲಿ ಉತ್ತಮ ಸ್ಥಿತಿಗೆ ತಲುಪಿದರು. ಮೊದಲ ದಿನದಾಟದ ಅಂತ್ಯಕ್ಕೆ 83 ಓವರುಗಳಲ್ಲಿ 5 ವಿಕೆಟ್‌ಗೆ 339 ರನ್ ಗಳಿಸಿದರು.

ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಆಸ್ಟ್ರೇಲಿಯಾಕ್ಕೆ ವಾರ್ನರ್ ಮತ್ತು ಉಸ್ಮಾನ್ ಖ್ವಾಜಾ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್‌ಗೆ ಬಂದ 73 ರನ್‌ಗಳಲ್ಲಿ ಖ್ವಾಜಾ ಪಾಲು ಬರೇ 17. ಆ್ಯಷಸ್ ಸರಣಿಗೆ ಪದಾರ್ಪಣೆ ಮಾಡಿದ ಜೋಶ್ ಟಂಗ್ ಬೌಲಿಂಗ್‌ನಲ್ಲಿ ಅವರು ಬೌಲ್ಡ್ ಆದರು. ಲಂಚ್ ನಂತರ ವಾರ್ನರ್, ಟಂಗ್ ಬೌಲಿಂಗ್‌ನಲ್ಲಿ ಬೌಲ್ಡ್ ಆಗಿ ನಿರ್ಗಮಿಸಿದರು. ವಾರ್ನರ್, ಆ್ಯಷಸ್ ಸರಣಿಯಲ್ಲಿ ಇದುವರೆಗೆ 1,999 ರನ್ ಗಳಿಸಿದ್ದಾರೆ. 2,000 ರನ್ ಗಳಿಸಿದ ಆಸ್ಟ್ರೇಲಿಯಾದ 18ನೇ ಆಟಗಾರ ಎನಿಸಲು ಎರಡನೇ ಇನಿಂಗ್ಸ್ ಆಡಬೇಕಾಗಿದೆ.

ಇಂಗ್ಲೆಂಡ್ ಬೌಲರ್‌ಗಳು ಪ್ರವಾಸಿ ಬ್ಯಾಟರ್‌ಗಳಿಗೆ ಅಷ್ಟೇನೂ ಪರೀಕ್ಷೆ ಒಡ್ಡಲಿಲ್ಲ. ಲಾಬುಷೇನ್ ಜೊತೆಗೂಡಿದ ಅನುಭವಿ ಸ್ಮಿತ್ ಮೂರನೇ ವಿಕೆಟ್‌ಗೆ 102 ರನ್ ಸೇರಿಸಿ ತಂಡದ ಸ್ಥಿತಿಯನ್ನು ಉತ್ತಮಗೊಳಿಸಿದರು.

ಬಿರುಸಿನ ಆಟವಾಡಿದ ಟ್ರಾವಿಸ್ ಹೆಡ್ 77 ರನ್ (73 ಎ, 14 ಬೌಂಡರಿ) ಗಳಿಸಿ ಔಟಾದರು. ಸ್ಮಿತ್ 85 ರನ್ ಮತ್ತು ಅಲೆಕ್ಸ್ ಕ್ಯಾರಿ 11 ರನ್ ಗಳಿಸಿ ಕ್ರೀಸ್‌ನಲ್ಲಿದ್ದಾರೆ.

ಲಂಚ್ ನಂತರ ಚೆಂಡನ್ನು ತಡೆಯುವ ಯತ್ನದಲ್ಲಿ ಡೈವ್ ಮಾಡಿದ ಒಲಿ ಪೋಪ್ ಅವರಿಗೆ ಬಲಭುಜಕ್ಕೆ ಗಾಯವಾಗಿದ್ದು, ಆತಿಥೇಯ ತಂಡವನ್ನು ಚಿಂತೆಗೆ ದೂಡಿದೆ.



ಸ್ಟೀವನ್ ಸ್ಮಿತ್ ಮತ್ತು ಟ್ರಾವಿಸ್ ಹೆಡ್ ಜೊತೆಯಾಟ –ಎಎಫ್‌ಪಿ ಚಿತ್ರ

## ಪ್ರತಿಭಟನೆ; ಪಂದ್ಯಕ್ಕೆ ಅಡ್ಡಿ

'ಜಸ್ಟ್ ಸ್ಟಾಪ್ ಆಯಿಲ್' ಸಂಘಟನೆಯ ಇಬ್ಬರು ಪ್ರತಿಭಟನಾಕಾರರು ಎರಡನೆ ಟೆಸ್ಟ್ ಪಂದ್ಯ ಆರಂಭವಾದ ಕೆಲವೇ ಕ್ಷಣಗಳಲ್ಲಿ ಮೈದಾನಕ್ಕೆ ನುಗ್ಗಿದ್ದರು. ಇದರಿಂದಾಗಿ ಪಂದ್ಯಕ್ಕೆ ಐದು ನಿಮಿಷ ಅಡ್ಡಿಯಾಯಿತು.

ಅವರು ಕಿತ್ತಲೆ ಬಣ್ಣದ ಪುಡಿಯನ್ನು ಪಿಚ್‌ನಲ್ಲಿ ಚೆಲ್ಲಲು ಯತ್ನಿಸಿದರು. ಒಬ್ಬ ವ್ಯಕ್ತಿಯನ್ನು ಇಂಗ್ಲೆಂಡ್ ವಿಕೆಟ್ ಕೀಪರ್ ಜಾನಿ ಬೇಸ್ಟೊ ಅವರು ಹಿಡಿದು 50 ಮೀಟರ್ಸ್‌ನಷ್ಟು ದೂರ ಎಳೆದೊಯ್ದು ಭದ್ರತಾ ಸಿಬ್ಬಂದಿಗೆ ಒಪ್ಪಿಸಿದರು. ಬೆನ್ ಸ್ಟೋಕ್ಸ್ ಮತ್ತು ವಾರ್ನರ್ ಇನ್ನೊಬ್ಬನನ್ನು ನಿಭಾಯಿಸಿದರು. ಬೇಸ್ಟೊ ಡ್ರೆಸಿಂಗ್ ರೂಮ್‌ಗೆ ತೆರಳಿ ಮೈಗೆ ತಾಗಿದ್ದ ಪುಡಿಯನ್ನು ಸ್ವಚ್ಛಗೊಳಿಸಿ ಮರಳಿದರು. ಪೊಲೀಸರು ಮೂವರನ್ನು ವಶಕ್ಕೆ ಪಡೆದಿದ್ದಾರೆ ಎಂದು ಲಂಡನ್ ಮೆಟ್ರೊಪಾಲಿಟನ್ ಪೊಲೀಸರು ತಿಳಿಸಿದ್ದಾರೆ. ಪಳೆಯುಳಿಕೆ ಇಂಧನ ಬಳಕೆಗೆ ಕಡಿವಾಣ ಹೇರಬೇಕು ಎಂಬುದು ಜಸ್ಟ್ ಸ್ಟಾಪ್ ಆಯಿಲ್ ಸಂಘಟನೆಯ ಧ್ಯೇಯವಾಗಿದೆ.

## ಸಂಕ್ಷಿಪ್ತ ಸುದ್ದಿ

### ಏಷ್ಯನ್ ಕಬಡ್ಡಿ: ಭಾರತಕ್ಕೆ 3ನೇ ಜಯ

**ಬೂಸಾನ್ (ದಕ್ಷಿಣ ಕೊರಿಯಾ):** ಸಾಂಘಿಕ ಪ್ರದರ್ಶನ ನೀಡಿದ ಭಾರತ ತಂಡ, 11ನೇ ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಜಪಾನ್ ತಂಡವನ್ನು 62–17 ಅಂಕಗಳಿಂದ ಸೋಲಿಸಿತು. ಇದು ಭಾರತಕ್ಕೆ ಸತತ ಮೂರನೇ ಗೆಲುವು.

ಭಾರತ ಆರಂಭದಿಂದಲೇ ಪ್ರಾಬಲ್ಯ ಸಾಧಿಸಿ 15–0 ಮುನ್ನಡೆ ಪಡೆಯಿತು. ಪವನ್ ಸೆಹ್ರಾವತ್, ಅಸ್ಲಾಂ ಇನಾಮದಾರ್, ಅರ್ಜುನ್ ದೇಸ್ವಾಲ್ ಪಾಯಿಂಟ್‌ಗಳನ್ನು ತಂದುಕೊಟ್ಟರು. ರಕ್ಷಣೆಯಲ್ಲಿ ನಿತಿನ್ ರಾವಲ್ ಮಿಂಚಿದರು. ಮಧ್ಯಂತರದ ವೇಳೆ ಭಾರತದ ಮುನ್ನಡೆ 32–6ಕ್ಕೆ ಏರಿತು. ವಿರಾಮದ ನಂತರವೂ ಹೆಚ್ಚಿನ ವ್ಯತ್ಯಾಸವಾಗಲಿಲ್ಲ. ಸಚಿನ್ ತನ್ವರ್ ಮತ್ತು ವಿಶಾಲ್ ಉತ್ತಮ ಆಟ ಪ್ರದರ್ಶಿಸಿದರು. ಭಾರತ ಎದುರಾಳಿ ತಂಡವನ್ನು ಆರು ಬಾರಿ ಆಲೌಟ್ ಮಾಡಿತು.

ಹಾಲಿ ಚಾಂಪಿಯನ್ ಸಹ ಆಗಿರುವ ಭಾರತ ಗುರುವಾರ ನಡೆಯುವ ಪಂದ್ಯದಲ್ಲಿ ಇರಾನ್ ತಂಡವನ್ನು ಎದುರಿಸಲಿದೆ.

### ಬಿಎಫ್‌ಸಿ ತಂಡಕ್ಕೆ ಸ್ಲಾವ್ಕೊ ಡೊಮ್ಯನೊವಿಚ್

**ಬೆಂಗಳೂರು (ಪಿಟಿಐ):** ಕಳೆದ ಋತುವಿನಲ್ಲಿ ಇಂಡಿಯನ್ ಸೂಪರ್‌ಲೀಗ್ ವಿಜೇತ ತಂಡದಲ್ಲಿದ್ದ ಸೆಂಟರ್ ಬ್ಯಾಕ್ ಆಟಗಾರ ಸ್ಲಾವ್ಕೊ ಡೊಮ್ಯನೊವಿಚ್ ಅವರು ಬೆಂಗಳೂರು ಎಫ್‌ಸಿ ಜೊತೆ ಒಂದು ವರ್ಷದ ಒಪ್ಪಂದಕ್ಕೆ ಬುಧವಾರ ಸಹಿ ಮಾಡಿದ್ದಾರೆ.

ಕಳೆದ ಋತುವಿನಲ್ಲಿ ಅವರು ಎಟಿಕೆ ಮೋಹನ್ ಬಾಗನ್ ತಂಡದಲ್ಲಿದ್ದಾಗ, ಕೋಲ್ಕತ್ತದ ತಂಡ ಚಾಂಪಿಯನ್ ಆಗಿತ್ತು. ಗೋವಾ ಎಫ್‌ಸಿ ತಂಡಕ್ಕೆ ಸೇರ್ಪಡೆಗೊಂಡಿರುವ ಸಂದೇಶ ಜಿಂಗಾನ್ ಅವರ ಸ್ಥಾನದಲ್ಲಿ ಡೊಮ್ಯನೊವಿಚ್ ಅವರು ತಂಡವನ್ನು ಸೇರ್ಪಡೆಗೊಳ್ಳಲಿದ್ದಾರೆ ಎಂದು ಕ್ಲಬ್ ಬುಧವಾರ ಪ್ರಕಟಿಸಿದೆ.

'ತಂಡದ ಸಹ ಆಟಗಾರರನ್ನು, ತರಬೇತು ಸಿಬ್ಬಂದಿಯನ್ನು, ಅಭಿಮಾನಿಗಳನ್ನು ಭೇಟಿಯಾಗಲು ಕಾತರದಿಂದ ಇದ್ದೇನೆ. ತಂಡದ ಅಭಿಮಾನಿಗಳಿಗೆ ಐಎಸ್‌ಎಲ್ ಪ್ರಶಸ್ತಿ ಗೆಲ್ಲಿಸಿಕೊಡುವುದು ನಮ್ಮ ಗುರಿ. ಯಶಸ್ಸು ಗಳಿಸುವ ತಂಡದ ಜೊತೆಯಿರುವೆನೆಂಬ ವಿಶ್ವಾಸವಿದೆ' ಎಂದು ಸ್ಲಾವ್ಕೊ ಹೇಳಿದ್ದಾರೆ.

### ಬ್ಯಾಸ್ಕೆಟ್‌ಬಾಲ್: ವಿಮಾನಪುರ ತಂಡಕ್ಕೆ ಜಯ

**ಬೆಂಗಳೂರು:** ಪೊನ್ನಪ್ಪ (25 ಪಾಯಿಂಟ್ಸ್), ರೋಹನ್ (19 ಪಾಯಿಂಟ್ಸ್) ಅವರ ಆಟದ ನೆರವಿನಿಂದ ವಿಮಾನಪುರ ಎಸ್‌ಸಿ ತಂಡವು ಎಂ.ಸಿ. ಶ್ರೀನಿವಾಸ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ 'ಬಿ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಬಾಷ್ ತಂಡವನ್ನು 98–62ರಿಂದ ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ಸಂಕೇತ್ (29 ಪಾಯಿಂಟ್ಸ್), ಸಂತೋಷ್ (19 ಪಾಯಿಂಟ್ಸ್) ಅವರ ಆಟದ ಬಲದಿಂದ ಜೆಎಸ್‌ಸಿ ತಂಡವು ರಾಜ್‌ಮಹಲ್ ಬಿಸಿ ತಂಡವನ್ನು 96–70ರಿಂದ ಸೋಲಿಸಿತು. ರಾಜ್‌ಮಹಲ್ ತಂಡದ ಶಿಶಿರ್ (33 ಪಾಯಿಂಟ್ಸ್) ಸೋಲಿನಲ್ಲೂ ಮಿಂಚಿದರು.

# ದ್ವೇಷದ ಬೆಂಕಿಯಿಂದೆದ್ದು ಬಂದ ಕಿಶನ್, ಜೋತಿನ್

### ಹಿಂಸಾಚಾರ ಪೀಡಿತ ಮಣಿಪುರ ಹುಡುಗರ ದುಗುಡವೂ, ಆಟದ ಪ್ರೀತಿಯೂ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಿಂಸಾಚಾರದ ದಳ್ಳುರಿಯಲ್ಲಿ ಬೇಯುತ್ತಿರುವ ಮಣಿಪುರದ ಇಬ್ಬರು ಹುಡುಗರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ತಮ್ಮ ಬೌಲಿಂಗ್ ಮೂಲಕ ಗಮನ ಸೆಳೆದರು.

26 ವರ್ಷದ ಎಡಗೈ ಸ್ಪಿನ್ನರ್ ಕಿಶನ್ ಸಿಂಗಾ ಮತ್ತು 17 ವರ್ಷದ ಫಿರೊಯ್‌ಜಾಮ್ ಜೊತಿನ್ ಸಿಂಗ್ ಅವರೇ ಆ ಕ್ರಿಕೆಟಿಗರು. ದುಲೀಪ್ ಟ್ರೋಫಿ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಉತ್ತರ ವಲಯದ ಎದುರು ಆಡುತ್ತಿರುವ ಈಶಾನ್ಯ ವಲಯದ ತಂಡದಲ್ಲಿ ಇವರಿಬ್ಬರೂ ಇದ್ದಾರೆ. ತಲಾ ಎರಡು ವಿಕೆಟ್ ಪಡೆದರು.

ಪಂದ್ಯದ ನಂತರ ಸುದ್ದಿಗೋಷ್ಠಿಗೆ ಬಂದಿದ್ದ ಕಿಶನ್ ಸಿಂಗ್ ತಮ್ಮ ರಾಜ್ಯದ ಸದ್ಯದ ಸ್ಥಿತಿಗತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದರು.

'ಸ್ಥಿತಿ ಚಿಂತಾಜನಕವಾಗಿದೆ' ಎಂದು ಪುನರುಚ್ಚರಿಸುತ್ತಲೇ ಇದ್ದರು.

'ಅಲ್ಲಿ ಅಭ್ಯಾಸ ನಡೆಸುವುದು ಬಹಳ ಕಷ್ಟವಾಗಿತ್ತು. ನಾವೇನೂ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಇಡೀ ರಾಜ್ಯವೇ ಕಷ್ಟದಲ್ಲಿ ಬೇಯುತ್ತಿದೆ. ಆದರೂ ನಮ್ಮ ಆಟದ ಮೇಲೆ ಏಕಾಗ್ರತೆ ಸಾಧಿಸಿದವು. ನಮ್ಮ ಪಾಲಕರು ಅಪಾರ ಪ್ರೋತ್ಸಾಹ ನೀಡಿದರು. ಅಲ್ಲಿರುವ ನಮ್ಮವರ ಬಗ್ಗೆ ನಮಗೆ ಚಿಂತೆ ಇದೆ. ಈಗಲೂ ಅಲ್ಲಿಯ ಸ್ಥಿತಿ ಗಂಭೀರವಾಗಿದೆ' ಎಂದು ಕಿಶನ್ ವಿವರಿಸಿದರು.

'ಮಣಿಪುರದಲ್ಲಿರುವ ತ್ವೇಷಮಯ ಪರಿಸ್ಥಿತಿಯಿಂದಾಗಿ ನಮಗೆ ಸುಮಾರು ಮೂರು ತಿಂಗಳಿನಿಂದ ಕ್ರಿಕೆಟ್ ಆಡಲು ಸಾಧ್ಯವಾಗಿಲ್ಲ. ಕರ್ಫ್ಯೂ ಜಾರಿಯಾಗಿತ್ತು. ಮನೆಯೊಳಗೆ ಉಳಿದೆವು. ಜನವರಿಯಲ್ಲಿ ರಣಜಿ ಟ್ರೋಫಿ ಪಂದ್ಯಗಳನ್ನು ಆಡಿದ್ದೆವು. ನಂತರ ಲೀಗ್ ಪಂದ್ಯಗಳು ಒಂದು ತಿಂಗಳಷ್ಟೇ ನಡೆದ ನಂತರ ಈಗಲೇ ಕ್ರಿಕೆಟ್ ಆಡುತ್ತಿರುವುದು' ಎಂದು ಕಿಶನ್ ಹೇಳಿದರು.

'ನಮ್ಮ ಈಶಾನ್ಯ ರಾಜ್ಯ ತಂಡಗಳಲ್ಲಿ ಈಗ ಸ್ಥಳೀಯರಿಗೆ ಹೆಚ್ಚು ಅವಕಾಶ ಸಿಗುತ್ತಿದೆ. ಏಕೆಂದರೆ ಮೊದಲಿನಂತೆ ಹೊರರಾಜ್ಯದ ಆಟಗಾರರು ಬಂದು ಆಡುತ್ತಿಲ್ಲ. ಈ ಮೊದಲು ಅವರು ಟೂರ್ನಿ ಇದ್ದಾಗ ಬಂದು ಆಡಿ ಮರಳಿ ಹೋಗುತ್ತಿದ್ದರು. ಆದ್ದರಿಂದ ನಮಗೂ ಅವರೊಂದಿಗೆ ಹೆಚ್ಚು ಸಮಯ ಕಳೆಯಲು ಸಾಧ್ಯವಾಗುತ್ತಿರಲಿಲ್ಲ. ಅವರಿಗೂ ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ತೋರಲು ಆಗುತ್ತಿರಲಿಲ್ಲ. ಈಗ ಅವರಿಲ್ಲದ ಕಾರಣ ನಮ್ಮವರಿಗೇ ಹೆಚ್ಚು ನೆರವು ಒದಗಿದೆ' ಎಂದು ಕಿಶನ್ ಹೇಳಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಜೋತಿನ್ ಸಿಂಗ್ ಮೌನ ಮುರಿದರು. ತುಸು ಹಿಂಜರಿಯುತ್ತಲೇ ಪ್ರಶ್ನೆಯೊಂದಕ್ಕೆ ಚುಟುಕಾಗಿ ಉತ್ತರಿಸಿದರು.

'ನಮ್ಮ ರಾಜ್ಯದಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ನನ್ನ ತಂದೆಯ ಕ್ರಿಕೆಟ್ ಅಕಾಡೆಮಿ ಇದೆ. ಆದ್ದರಿಂದ ಅಲ್ಲಿ ಒಂದಿಷ್ಟು ಅಭ್ಯಾಸ ಮಾಡಿದೆ. ಆದರೆ ಅದೂ ಸವಾಲಿನದ್ದಾಗಿತ್ತು' ಎಂದರು.



ಫಿರೋಜೆನ್ ಜೊತಿನ್ ಸಿಂಗ್




ಕಿಶನ್ ಸಿಂಗ್

# ವಿಂಬಲ್ಡನ್: ಕಾರ್ಲೋಸ್ ಅಲ್ಕರಾಜ್, ಇಗಾ ಸ್ವಾಂಟೆಕ್‌ಗೆ ಅಗ್ರ ಶ್ರೇಯಾಂಕ

**ವಿಂಬಲ್ಡನ್ (ಎಪಿ):** ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮತ್ತು ಪೋಲೆಂಡ್‌ನ ಇಗಾ ಶ್ವಾಂಟೆಕ್ ಅವರು ನಿರೀಕ್ಷೆಯಂತೆ ವಿಂಬಲ್ಡನ್ ಚಾಂಪಿಯನ್‌ಷಿಪ್‌ನಲಿ ಅಗ್ರ ಶ್ರೇಯಾಂಕ ಪಡೆದಿದ್ದಾರೆ. ಆಲ್ ಇಂಗ್ಲೆಂಡ್ ಕ್ಲಬ್, ಶ್ರೇಯಾಂಕ ನೀಡುವಾಗ ಸಾಮಾನ್ಯವಾಗಿ ಎಟಿಪಿ ಮತ್ತು ಡಬ್ಲ್ಯುಟಿಎ ರ‍್ಯಾಂಕಿಂಗ್ ಅನುಸರಿಸುತ್ತದೆ. ಮುಂದಿನ ಸೋಮವಾರ (ಜುಲೈ 3) ಈ ಚಾಂಪಿಯನ್‌ಷಿಪ್ ಆರಂಭವಾಗಲಿದೆ.

ಬುಧವಾರ ಪ್ರಕಟಗೊಂಡ ಶ್ರೇಯಾಂಕದ ಪ್ರಕಾರ ಸತತ ನಾಲ್ಕು ಬಾರಿ ಈ ಟೂರ್ನಿಯ ಸಿಂಗಲ್ಸ್ ಚಾಂಪಿಯನ್ ಆಗಿರುವ ನೊವಾಕ್ ಜೊಕೊವಿಚ್ ಅವರನ್ನು ಹಿಂದೆ ಹಾಕಿ ಅಲ್ಕರಾಜ್‌ಗೆ ಅಗ್ರ ಶ್ರೇಯಾಂಕ ನೀಡಲಾಗಿದೆ. ಜೂನ್ 11ರಂದು ಫ್ರೆಂಚ್ ಓಪನ್ ಚಾಂಪಿಯನ್ ಆದ ನಂತರ ಸರ್ಬಿಯಾದ ಆಟಗಾರ ಯಾವುದೇ ಟೂರ್ನಿಯಲ್ಲಿ ಆಡಿಲ್ಲ. ಇನ್ನೊಂದೆಡೆ ಅಲ್ಕರಾಜ್, ವಿಂಬಲ್ಡನ್‌ಗೆ ಸಿದ್ಧತಾ ಟೂರ್ನಿ ಎನಿಸಿರುವ ಕ್ವೀನ್ಸ್ ಕ್ಲಬ್ ಟೂರ್ನಿಯನ್ನು ಭಾನುವಾರ ಗೆದ್ದುಕೊಂಡಿದ್ದರು.



ಕಾರ್ಲೋಸ್ ಅಲ್ಕರಾಜ್

# ಕ್ರಿಕೆಟ್ ಆಯ್ಕೆ ಸಮಿತಿ ಮುಖ್ಯಸ್ಥ ಸ್ಥಾನಕ್ಕೆ ಅಗರ್ಕರ್?



ಅಜಿತ್ ಆಗರಕರ್

**ನವದೆಹಲಿ (ಪಿಟಿಐ):** ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿಯ ಮುಖ್ಯಸ್ಥರ ಸ್ಥಾನಕ್ಕಾಗಿ ಮಾಜಿ ಕ್ರಿಕೆಟಿಗ ಅಜಿತ್ ಅಗರ್ಕರ್ ಅವರ ಹೆಸರು ಮುಂಚೂಣಿಯಲ್ಲಿದೆ.

ಚೇತನ್ ಶರ್ಮಾ ಅವರ ವಿವಾದಾತ್ಮಕ ನಿರ್ಗಮನದ ನಂತರ ಮುಖ್ಯಸ್ಥರ ಸ್ಥಾನ ಖಾಲಿ ಉಳಿದಿದೆ. ಈ ಹುದ್ದೆಗೆ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿತ್ತು. ಜೂನ್ 30 ಕೊನೆಯ ದಿನವಾಗಿದೆ. ಜುಲೈ 1ರಂದು ಅಭ್ಯರ್ಥಿಗಳ ಸಂದರ್ಶನವನ್ನು ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ನಡೆಸಲಿದೆ.

'ಭಾರತ ತಂಡಕ್ಕೆ ಸಮರ್ಥ ಆಟಗಾರರನ್ನು ಆಯ್ಕೆ ಮಾಡಲು ಸಾಧ್ಯವಿರುವವರನ್ನು ಮುಖ್ಯಸ್ಥರನ್ನಾಗಿ ಮಾಡಲಾಗುವುದು' ಎಂದು ಬಿಸಿಸಿಐ ಅಧಿಕಾರಿ ತಿಳಿಸಿದ್ದಾರೆ.

ಒಂದೊಮ್ಮೆ ಅಜಿತ್ ಅವರು ಆಯ್ಕೆಯಾದರೆ ಪಶ್ಚಿಮ ವಲಯದಿಂದ ಇಬ್ಬರು ಸದಸ್ಯರಾಗುತ್ತಾರೆ. ಸಲೀಲ್ ಅಂಕೋಲಾ ಈಗಾಗಲೇ ಸಮಿತಿಯಲ್ಲಿದ್ದಾರೆ. 45 ವರ್ಷದ ಅಜಿತ್ ಭಾರತ ತಂಡದಲ್ಲಿ 26 ಟೆಸ್ಟ್, 191 ಏಕದಿನ ಮತ್ತು ನಾಲ್ಕು ಟಿ20 ಪಂದ್ಯಗಳನ್ನು ಆಡಿದ್ದಾರೆ. ಈಚೆಗೆ ಮುಗಿದ ಐಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೋಚ್ ಬಳಗದಲ್ಲಿದ್ದರು.

## ಮಹಿಳಾ ತಂಡಕ್ಕೆ ಕೋಚ್ ಆಯ್ಕೆ

ಭಾರತ ಮಹಿಳಾ ತಂಡಕ್ಕೆ ಶುಕ್ರವಾರ ಮುಖ್ಯ ತರಬೇತುದಾರರನ್ನು ನೇಮಕ ಮಾಡುವ ನಿರೀಕ್ಷೆ ಇದೆ.

ಮುಂಬೈನ ಅಮೋಲ್ ಮುಜುಂದಾರ್ ಮತ್ತು ತುಷಾರ್ ಅರೋತೆ ಅವರು ಈ ಸ್ಥಾನ ಪಡೆಯುವ ಸ್ಪರ್ಧೆಯಲ್ಲಿದ್ದಾರೆ.

ಅಮೋಲ್ ಅವರು ಬರೋಡಾ ತಂಡದ ಕೋಚ್ ಆಡುವ ಸಾಧ್ಯತೆ ಇದೆ ಎನ್ನಲಾಗಿದೆ. ಅವರು ಈಚೆಗೆ ರಾಜಸ್ಥಾನ್ ರಾಯಲ್ಸ್ ಮತ್ತು ದಕ್ಷಿಣ ಆಫ್ರಿಕಾದ ತಂಡದಲ್ಲಿಯೂ ಕಾರ್ಯನಿರ್ವಹಿಸಿದ್ದರು. ಮಹಿಳಾ ತಂಡದ ಕೋಚ್ ಹುದ್ದೆಗೆ ಇಂಗ್ಲೆಂಡ್‌ನ ಜಾನ್ ಲೂಯಿಸ್ ಕೂಡ ಅರ್ಜಿ ಹಾಕಿದ್ದಾರೆನ್ನಲಾಗಿದೆ.

ಅಶೋಕ್ ಮಲ್ಹೋತ್ರಾ, ಜತಿನ್ ಪರಾಂಜಪೆ ಹಾಗೂ ಸುಲಕ್ಷಣಾ ನಾಯಕ ಅವರಿರುವ ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ಯು ಅಭ್ಯರ್ಥಿಗಳ ಸಂದರ್ಶನವನ್ನು ಶುಕ್ರವಾರ ನಡೆಸಲಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

## ಬಾಕ್ಸಿಂಗ್: ನಾಲ್ಕರ ಘಟ್ಟಕ್ಕೆ ಸುಮಿತ್

**ಅಸ್ತಾನಾ (ಪಿಟಿಐ):** ಭಾರತದ ಸುಮಿತ್, ಎಲೊರ್ಡಾ ಕಪ್ ಬಾಕ್ಸಿಂಗ್ ಟೂರ್ನಿಯಲ್ಲಿ ದೇಶಕ್ಕೆ ಮೊದಲ ಪದಕವನ್ನು ಖಚಿತಪಡಿಸಿಕೊಂಡಿದ್ದಾರೆ. 86 ಕೆ.ಜಿ. ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಅವರು ಬುಧವಾರ ಆತಿಥೇಯ ಕಜಕಸ್ತಾನದ ಬೆಕ್ಜಟ್ ಟಂಗಾಟರ್ ಅವರನ್ನು ಸೋಲಿಸಿದರು.

ಸುಮಿತ್ ಚಾಕಚಕ್ಯತೆ ಪ್ರದರ್ಶಿಸಿ 5–0 ಯಿಂದ ಬೆಕ್ಜಟ್ ಮೇಲೆ ಜಯಗಳಿಸಿದರು. ಭಾರತದ ಝೊರಮ್ ಮುವಾನಾ 51 ಕೆ.ಜಿ. ವಿಭಾಗದ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಉತ್ತಮ ತಾಂತ್ರಿಕ ಕೌಶಲ ಮೆರೆದು ಕಜಕಸ್ತಾನದ ಇನ್ನೊಬ್ಬ ಬಾಕ್ಸರ್ ದರ್ಯಾನ್ ಕುಲ್ಜಬಯೇವ್ ಎದುರು 4–1 ರಲ್ಲಿ ಗೆಲುವು ಪಡೆದರು. ಮಿಜೊರಾಮ್‌ನ ಬಾಕ್ಸರ್ ಗುರುವಾರ ನಡೆಯುವ ಕ್ವಾರ್ಟರ್‌ಫೈನಲ್‌ನಲ್ಲಿ ಸಕೆನ್ ಬಿಬೊಸ್ಸಿನೊವ್ ಎದುರು ಸೆಣಸಾಟದಲಿದ್ದಾರೆ. ಕಜಕಸ್ತಾನದ ಬಾಕ್ಸರ್, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು.

ಮಹಿಳೆಯರ ವಿಭಾಗದಲ್ಲಿ ಭಾರ ತದ ಬಾಕ್ಸರ್‌ಗಳು ಯಶಸ್ಸು ಕಾಣಲಿಲ್ಲ. ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಶಿವೆಂದರ್ ಕೌರ್ (50 ಕೆ.ಜಿ ವಿಭಾಗ) 1–4ರಲ್ಲಿ ಕಜಕಸ್ತಾನದ ಗುಲ್ನಾರ್ ತರಪ್‌ಬೆ ವಿರುದ್ಧ ಸೋಲನುಭವಿಸಿದರೆ, ಸೋನಿಯಾ ಲಾಠೆರ್ (57 ಕೆ.ಜಿ. ವಿಭಾಗ) 0–5 ರಿಂದ ಆತಿಥೇಯ ದೇಶದ ಗ್ರಫಯೇವಾ ವಿಕ್ಟೋರಿಯಾ ವಿರುದ್ಧ ಪರಾಜಯ ಕಂಡರು. 60 ಕೆ.ಜಿ. ವಿಭಾಗದಲ್ಲಿ ಪೂನಮ್ 2–3 ರಿಂದ ಇಸಯೇವಾ ಶಖ್ನಾಜ್ ಅವರಿಗೆ ಸೋತರು. ಸಂಜಯ್ (80 ಕೆ.ಜಿ) ಕ್ವಾರ್ಟರ್‌ಫೈನಲ್‌ನಲ್ಲಿ ಪ್ರಬಲ ಎದುರಾಳಿ ಖಾಬಿಬುಲೆ ತುರಬೆಕ್ (ಉಜ್ಬೇಕಿಸ್ತಾನ) ಅವರಿಗೆ 0–5ರಲ್ಲಿ ಮಣಿದರು.



ಅನಿಕೇತ್ ಹೆಬ್ಬಾರ್, ಸಮಿಕಾ ಬೋಪಣ್ಣ, ಅಥರ್ವನ್ ಶಂಕರ್, ಇಶಾನ್ ಭೂಷಣ್, ಧರ್ಮ್ ಕಬ್ಬೂರ್, ವಿಭಾ ಉಮೇಶ್ ರಾವ್, ಅದ್ವಯ್ ರಾಗೇಶ್, ಅಕ್ಷರಾ ಕನ್ನಿಗಂಟಿ, ಸ್ನಿಗ್ಧಾ ಚೌಧರಿ, ಅನ್ವಿ ಸಲೈನ್ (ಮೊದಲ ಸಾಲಿನಲ್ಲಿ ಎಡದಿಂದ ಬಲಕ್ಕೆ). ರಿಷಿ ನಾರಾಯಣ್, ರಾಜದೀಪ್ ದೇಶಪಾಂಡೆ, ನಿಯೋ ಅಲೆಕ್ಸ್ ಅಬಿ, ನಿಯೋಗದ ಮುಖ್ಯಸ್ಥೆ ತನುಜಾ, ನಗರದ ಪ್ರತಿನಿಧಿ ಎಲ್ವಿಸ್ ಜೋಸೆಫ್, ರಾಯಭಾರಿ ರೀತ್ ಅಬ್ರಹಾಂ, ಕೋಚ್‌ಗಳಾದ ಜಸ್ಟಿನ್ ಬರ್ನಾರ್ಡ್, ಪೂನಂ ಬೆಳ್ಳಿಯಪ್ಪ, ಗಣೇಶ್ ಸೆಲ್ವರಾಜ್ (ಎರಡನೇ ಸಾಲಿನಲ್ಲಿ ಎಡದಿಂದ ಬಲಕ್ಕೆ)

### ಜುಲೈ 5ರಿಂದ ಅಂತರರಾಷ್ಟ್ರೀಯ ಮಕ್ಕಳ ಕ್ರೀಡಾಕೂಟ

# ಬಿಎಸ್‌ಎಸ್‌ಎಫ್‌ನ 13 ಕ್ರೀಡಾಪಟುಗಳು

**ಬೆಂಗಳೂರು:** ಬೆಂಗಳೂರಿನ ಸ್ಕೂಲ್ಸ್ ಸ್ಪೋರ್ಟ್ಸ್ ಫೌಂಡೇಷನ್ (ಬಿಎಸ್‌ಎಸ್‌ಎಫ್) ಇದರ 9 ಅಥ್ಲೀಟ್‌ಗಳು ಮತ್ತು 4 ಬ್ಯಾಸ್ಕೆಟ್‌ಬಾಲ್ ಆಟಗಾರರು ದಕ್ಷಿಣ ಕೊರಿಯಾದ ಡೇಗುನಲ್ಲಿ ಜುಲೈ 5ರಿಂದ 10ರವರೆಗೆ ನಡೆಯಲಿರುವ 55ನೇ ಅಂತರರಾಷ್ಟ್ರೀಯ ಮಕ್ಕಳ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ.

ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಆಯೋಜಿಸುವ ಈ ಕ್ರೀಡಾಕೂಟವನ್ನು 'ಮಕ್ಕಳ ಒಲಿಂಪಿಕ್ಸ್' ಎಂದೂ ಕರೆಯಲಾಗುತ್ತದೆ. ಬೆಂಗಳೂರಿನ ಬಿಎಸ್‌ಎಸ್‌ಎಫ್‌ನ ಕ್ರೀಡಾಪಟುಗಳು ಸತತ 13 ವರ್ಷಗಳಿಂದ ಈ ಕ್ರೀಡಾಕೂಟದಲ್ಲಿ ಬೆಂಗಳೂರನ್ನು ಪ್ರತಿನಿಧಿಸುತ್ತಿದ್ದಾರೆ.

**ಭಾಗವಹಿಸುವ ಅಥ್ಲೀಟ್‌ಗಳು:** ಅಥ್ಲೋಸ್ ಸ್ಪೋರ್ಟ್ಸ್ ಅಕಾಡೆಮಿಯ ಅಕ್ಷರಾ ಕನ್ನಿಗಂಟಿ (ಲಾಂಗ್ ಜಂಪ್, ಮಿಶ್ರ ರಿಲೆ), ಇಶಾನ್ ಭೂಷಣ್ (400 ಮೀ. ಓಟ, ರಿಲೆ), ವಿಭಾ ಉಮೇಶ್ ರಾವ್ (400 ಮೀ. ಓಟ, ರಿಲೆ), ಶಮಿಕಾ ಬೋಪಣ್ಣ (100 ಮೀ. ಓಟ, ಮಿಶ್ರ ರಿಲೆ), ರಾಜದೀಪ್ ದೇಶಪಾಂಡೆ (ಲಾಂಗ್ ಜಂಪ್, ಮಿಶ್ರ ರಿಲೆ), ಯಂಗ್‌ಸ್ಟಾರ್ಸ್ ಸ್ಪೋರ್ಟ್ಸ್ ಕ್ಲಬ್‌ನ ಅನ್ವಿ ವಿನಯ್ ಸಲೈನ್ (ಲಾಂಗ್ ಜಂಪ್, ರಿಲೆ), ಸ್ನಿಗ್ಧಾ ಚೌಧರಿ (100 ಮೀ ಓಟ, ರಿಲೆ), ರಿಷಿ ನಾರಾಯಣ (ಹೈ ಜಂಪ್, ಮಿಶ್ರ ರಿಲೆ), ಅಥ್ಲೀಟ್ ಕ್ರೀಡಾ ನೆರವು ಪಡೆಯುತ್ತಿರುವ ಅಥರ್ವನ್ ಶಂಕರ್ (400 ಮೀ, 1500 ಮೀ. ಓಟ). ಬ್ಯಾಸ್ಕೆಟ್‌ಬಾಲ್ ಆಟಗಾರರು: ವಿಮಾನಪುರ ಕ್ರೀಡಾ ಕ್ಲಬ್‌ನ ಅದ್ವಯ್ ರಾಗೇಶ್, ಅನಿಕೇತ್ ಹೆಬ್ಬಾರ್, ನಿಯೋ ಅಲೆಕ್ಸ್, ಮಾರ್ಕ್ ಸ್ಪೋರ್ಟ್ಸ್ ಅಕಾಡೆಮಿಯ ಧರ್ಮ್ ಕಬ್ಬೂರು.

### ಕಿರಿಯ ಗ್ರ್ಯಾಂಡ್‌ಮಾಸ್ಟರ್‌ಗಳ ಆಟಕ್ಕೆ ಕಾರ್ಲ್‌ಸನ್ ಮೆಚ್ಚುಗೆ

# 'ಭಾರತದಲ್ಲಿ ಚೆಸ್ ಕ್ರಾಂತಿಯ ಆರಂಭ'

**ದುಬೈ (ಪಿಟಿಐ):** ಭಾರತದಲ್ಲಿ ಚೆಸ್ ಬಗ್ಗೆ ಅತೀವ ಆಸಕ್ತಿ ಮೂಡುತ್ತಿರುವುದು ವಿಶ್ವದ ಅಗ್ರಮಾನ್ಯ ಚೆಸ್ ಆಟಗಾರ, ಐದು ಬಾರಿಯ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ವಿಸ್ಮಯ ಮೂಡಿಸಿದೆ. ದಿಗ್ಗಜ ಆಟಗಾರ ವಿಶ್ವನಾಥನ್ ಅವರಿಂದ ಆರಂಭವಾದ ಸ್ಫೂರ್ತಿ ಈಗ ಕ್ರಾಂತಿಯ ಸ್ವರೂಪ ಪಡೆದಿದೆ ಎಂದಿದ್ದಾರೆ.

'ಭಾರತದಲ್ಲಿ ಆಗಾಗ್ಗೆ ಗ್ರ್ಯಾಂಡ್‌ಮಾಸ್ಟರ್ ಆಟಗಾರರು ಮೂಡಿಬರುತ್ತಿದ್ದಾರೆ. ಇದು ಈ ಆಟದ ಬೆಳವಣಿಗೆಯ ದೃಷ್ಟಿಯಿಂದ ಮಹತ್ವಪೂರ್ಣವಾದುದು' ಎಂದಿದ್ದಾರೆ ಚೆಸ್ ಲೋಕ ಕಂಡ ಅತ್ಯಂತ ಬಲಿಷ್ಠ ಆಟಗಾರರಲ್ಲಿ ಒಬ್ಬರೆನಿಸಿರುವ ಕಾರ್ಲ್‌ಸನ್. ಇಲ್ಲಿ ನಡೆಯುತ್ತಿರುವ ಮೊದಲ ಗ್ಲೋಬಲ್ ಚೆಸ್ ಲೀಗ್ (ಜಿಸಿಎಲ್)ನಲ್ಲಿ ನಾರ್ವೆಯ ಈ ಆಟಗಾರ ಎಸ್‌ಜಿ ಅಲ್‌ಪೈನ್ ವಾರಿಯರ್ಸ್ ತಂಡಕ್ಕೆ ಆಡುತ್ತಿದ್ದಾರೆ.

ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಆರ್.ಪ್ರಗ್ನಾನಂದ, ಅರ್ಜುನ್ ಎರಿಗೈಸಿ, ದೊಮ್ಮರಾಜು ಗುಕೇಶ್ ಸೇರಿ ಹದಿಹರೆಯದ ಪ್ರತಿಭಾನ್ವಿತ ಆಟಗಾರರರು ಪ್ರವರ್ಧಮಾನಕ್ಕೆ ಬಂದಿದ್ದಾರೆ. ಅವರು ಕೆಲವು ಟೂರ್ನಿಗಳಲ್ಲಿ ಅಮೋಘ ಆಟದ ಮೂಲಕ ಕಾರ್ಲ್‌ಸನ್ ಸೇರಿದಂತೆ ವಿಶ್ವದ ಪ್ರಮುಖ ಆಟಗಾರರನ್ನು ಸೋಲಿಸಿ ಬೆರಗು ಮೂಡಿಸಿದ್ದಾರೆ.

'ಭಾರತದಲ್ಲಿ ಚೆಸ್ ಆಟದ ಬಗ್ಗೆ ತೀವ್ರ ಆಸಕ್ತಿ ಮೂಡುತ್ತಿರುವುದು ಅದ್ಭುತ ಬೆಳವಣಿಗೆ ಎನಿಸುತ್ತಿದೆ. ದೊಡ್ಡ ಸಂಖ್ಯೆಯಲ್ಲಿ ಎಳೆಯರು ಈ ಆಟದತ್ತ ಆಕರ್ಷಿತರಾಗಿದ್ದಾರೆ. ವಿಶ್ವನಾಥನ್ ಆನಂದ್ ಗ್ರ್ಯಾಂಡ್‌ಮಾಸ್ಟರ್ ಆದ ಮೇಲೆ ಆರಂಭವಾದ ಚೆಸ್ ಆಸಕ್ತಿ, ಈಗ ಚೆಸ್ ಕ್ರಾಂತಿಯೊಂದರ ಆರಂಭದಂತೆ ಕಾಣುತ್ತಿದೆ' ಎಂದು 32 ವರ್ಷದ ಕಾರ್ಲ್‌ಸನ್ ಅಭಿಪ್ರಾಯಪಟ್ಟಿದ್ದಾರೆ.

'ಹಿಂದೆಂದಿಗಿಂತ ಹೆಚ್ಚು ಗ್ರ್ಯಾಂಡ್‌ಮಾಸ್ಟರ್ ಆಟಗಾರರು ಭಾರತದಲ್ಲಿ ಮೂಡುತ್ತಿರುವ ಕಾರಣ ಈ ಆಟ ಇನ್ನು ಉನ್ನತಿ ಸಾಧಿಸುತ್ತ ಹೋಗಲಿದೆ. ಇನ್ನೂ ಹೆಚ್ಚಿನದನ್ನು ನಿರೀಕ್ಷಿಸಬಹುದು' ಎಂದು ಬುಧವಾರ ಹೇಳಿಕೆಯಲ್ಲಿ ತಿಳಿಸಿದ್ದಾರೆ.

1988ರಲ್ಲಿ ಆನಂದ್ ದೇಶದ ಮೊದಲ ಚೆಸ್ ಗ್ರ್ಯಾಂಡ್‌ಮಾಸ್ಟರ್ ಆಗುವ ಮೂಲಕ ಚೆಸ್ ಆಟದ ಬೆಳವಣಿಗೆಗೆ ನಾಂದಿ ಹಾಡಿದ್ದರು. 53 ವರ್ಷದ ಆನಂದ್ ಈಗಲೂ ಆಟದಲ್ಲಿ ಸಕ್ರಿಯರಾಗಿದ್ದಾರೆ. ಐದು ಬಾರಿಯ ಚಾಂಪಿಯನ್ ಆಟಗಾರ ದೇಶದ ಕಿರಿಯ ಆಟಗಾರರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ ಎಂದು ಕಾರ್ಲ್‌ಸನ್ ಶ್ಲಾಘಿಸಿದ್ದಾರೆ.

ಮಾಜಿ ವಿಶ್ವ ಚಾಂಪಿಯನ್ ಆಟಗಾರನಿಗೆ ಭಾರತದ ಕಿರಿಯ ಆಟಗಾರರ ಮೇಲೆ ಎಷ್ಟೊಂದು ವಿಶ್ವಾಸ ಇದೆಯೆಂದರೆ, ಅವರ ನೇತೃತ್ವದ ಅಲ್‌ಪೈನ್ ವಾರಿಯರ್ಸ್ ತಂಡದಲ್ಲಿ ಭಾರತದ ಮೂವರು ಗ್ರ್ಯಾಂಡ್‌ಮಾಸ್ಟರ್‌ಗಳಿದ್ದಾರೆ. ಎರಿಗೈಸಿ, ಪ್ರಗ್ನಾನಂದ ಮತ್ತು ಗುಕೇಶ್ ಈ ಮೂವರು.

ಈ ಆಟಗಾರರು ಎಷ್ಟೊಂದು ಚೆನ್ನಾಗಿ ಆಡುತ್ತಿದ್ದಾರೆಂದರೆ ಅವರಿಗೆ ಹೆಚ್ಚು ಮಾರ್ಗದರ್ಶನದ ಅಗತ್ಯವೇ ಇಲ್ಲ ಎನ್ನುತ್ತಾರೆ ಕಾರ್ಲ್‌ಸನ್. 'ಅವರು ಅತ್ಯುತ್ತಮ ಆಟಗಾರರು. ಅವರಿಗೆ ಅವರದೇ ರೀತಿಯಲ್ಲಿ ಆಡಲು ಬಿಟ್ಟಿದ್ದೇನೆ. ಸಂದೇಹ ಮೂಡಿದರೆ ಮಾತ್ರ ಉತ್ತರಿಸುತ್ತೇನೆ. ಅವರು ಅಮೋಘ ಆಟಗಾರರು. ಹೆಚ್ಚಿನ ವೇಳೆ ಅವರಿಗೆ ನನ್ನ ಸಲಹೆಯ ಅಗತ್ಯವೇ ಬೀಳುವುದಿಲ್ಲ' ಎಂದು ಗುಣಗಾನ ಮಾಡಿದ್ದಾರೆ.

ಆರು ತಂಡಗಳ ಗ್ಲೋಬಲ್ ಚೆಸ್ ಲೀಗ್ ಜುಲೈ 2ರಂದು ತೆರೆಕಾಣಲಿದೆ. ಈ ಲೀಗ್‌ನಲ್ಲಿ ವಿಶ್ವದ ಶ್ರೇಷ್ಠ ಆಟಗಾರರು ಆಡುತ್ತಿದ್ದು, ಇಲ್ಲಿರುವ ಪೈಪೋಟಿ ರೋಚಕವಾದುದು ಎನ್ನುತ್ತಾರೆ ನಾರ್ವೆಯ ಆಟಗಾರ. ತಂಡಗಳು ಹೆಚ್ಚುಕಮ್ಮಿ ಸಮನಾದ ಬಲಹೊಂದಿವೆ. ಈ ಮಾದರಿ ನಿಜಕ್ಕೂ ಉತ್ತಮವಾಗಿದೆ. ಹೋರಾಟದ ಮತ್ತು ಕುತೂಹಲಕರ ಪಂದ್ಯಗಳಿಗೆ ಈ ಮಾದರಿ ಕಾರಣವಾಗಿದೆ ಎಂದು ಹೇಳಿದ್ದಾರೆ. 2013ರಲ್ಲಿ ವಿಶ್ವನಾಥನ್ ಆನಂದ್ ಅವರನ್ನು ಸೋಲಿಸುವ ಮೂಲಕ ಕಾರ್ಲ್‌ಸನ್ ಮೊದಲ ಬಾರಿ ವಿಶ್ವ ಚಾಂಪಿಯನ್ ಆಗಿದ್ದರು.



ಮ್ಯಾಗ್ನಸ್ ಕಾರ್ಲ್‌ಸನ್